ಕನ್ನಡ ಭಾಷೆ ಪತ್ರ್ಯ

## ಎರಡನೆ ವರ್ಷದ ಬಿಬಿಎ ಏವಿಯೇಷನ್.,
## ಮೂರನೆ ಮತ್ತು ನಾಲ್ಕನೆ ಸೆಮಿಸ್ಟರ್

[ಎನ್‌ಇಪಿ ೨೦೨೨–೨೫]

# ಕನ್ನಡ ಯಾನ


ಪ್ರಧಾನ ಸಂಪಾದಕ

ಡಾ. ಬಿ. ಗಂಗಾಧರ

ಸಂಪಾದಕರು

ಡಾ. ರಮೇಶಚಂದ್ರ ದತ್ತ

ಡಾ. ಬಿ.ಕೆ. ಮಂಜುಳ

ಡಾ. ಪಿ. ಸಂಗೀತ

ಶ್ರೀಮತಿ ಕಲ್ಪನ



**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**

**ಟಮಕ, ಕೋಲಾರ – 563103**

## ಬಿಬಿಎ ಏವಿಯೇಷನ್ ಕನ್ನಡ ಯಾನ–೨
## ಮೂರನೇ ಸೆಮಿಸ್ಟರ್ ಪಠ್ಯವಿಡಿ

**ಘಟಕ : ೧**

| | | |
|---|---|---|
| ೧) ಹಳಗನ್ನಡ ಕಾವ್ಯ | ಚಂದ್ರಮತಿ ಪ್ರಲಾಪ | –ರಾಘವಾಂಕ |
| ೨) ಕಥೆ | ಅಂದಿನ ಕಥೆ | –ದೇವುಡು |
| ೩) ಪ್ರಬಂಧ | ಸಾಹಿತ್ಯದಲ್ಲಿ ವೈಚಾರಿಕತೆ | –ಕೀರ್ತಿನಾಥ ಕುರ್ತಕೋಟಿ |

**ಘಟಕ : ೨**

| | | |
|---|---|---|
| ೧) ನಡುಗನ್ನಡ ಕಾವ್ಯ | ವಚನಗಳು | –ಮುಕ್ತಾಯಕ್ಕ |
| ೨) ಕಥೆ | ಏಡಿ ಕಚ್ಚಿದ ಕೈ | –ಎಚ್.ಎಲ್. ನಾಗೇಗೌಡ |
| ೩) ಪ್ರಬಂಧ | ಸ್ತ್ರೀಯರು ಪುರುಷರು | –ಪು.ತಿ.ನ |

**ಘಟಕ : ೩**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಅಳ್ಳೀಮರ | –ಜಿ.ಪಿ. ರಾಜರತ್ನಂ |
| ೨) ಕಥೆ | ವಾಣಿಯ ಸಮಸ್ಯೆ | –ಕೊಡಗಿನ ಗೌರಮ್ಮ |
| ೩) ಪ್ರಬಂಧ/ಸಂಕೀರ್ಣ | ಸಾವೇ ಮನೆಗೆ ಭೂಷಣ | –ಕೆ. ಸತ್ಯನಾರಾಯಣ |

**ಘಟಕ : ೪**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಭಾಗೀರತಿ ಉಳಿಸಿದ ಪ್ರಶ್ನೆಗಳು | –ನೂತನ ಎಂ ದೋಶೆಟ್ಟಿ |
| ೨) ಕಥೆ | ಕೊನೆಯ ದಾರಿ | –ಡಾ. ವೀಣಾ ಶಾಂತೇಶ್ವರ |
| ೩) ಪ್ರಬಂಧ/ಸಂಕೀರ್ಣ | ನಮ್ಮ ಎಮ್ಮೆಗೆ ಮಾತು ತಿಳಿಯುವುದೇ? | –ಗೊರೂರು ರಾಮಸ್ವಾಮಿ ಅಯ್ಯಂಗಾರ್ |

# ಘಟಕ : ೧

## ೧. ಚಂದ್ರಮತಿ ಪ್ರಲಾಪ

**–ರಾಘವಾಂಕ**

**ಆಶಯ:** ಹರಿಶ್ಚಂದ್ರ ಕಾವ್ಯ ಅನೇಕ ಕಾರಣಗಳಿಂದ ಗಮನಾರ್ಹ ಕೃತಿ. ಭಕ್ತಿ, ವ್ಯಕ್ತಿ, ಸಂಸ್ಕೃತಿ, ಮನುಷ್ಯ ಪ್ರಯತ್ನ ಎಲ್ಲವೂ ಇಲ್ಲಿವೆ. ಸತ್ಯ, ಸಹನೆ, ಶಾಂತಿಗಳ ಮೌಲ್ಯವನ್ನು ಈ ಕೃತಿ ಸಮರ್ಪಕವಾಗಿ ಬಿಂಬಿಸಿದೆ.

ಹಡೆದೊಡಲು ಹುಡಿಯಾಯ್ತು ಮಗನೆ ಮಗನುಂಟೆಂದು
ಕಡಗಿ ಹೆಚ್ಚುವ ಮನಂ ಹೊತ್ತಿ ಹೋಗೆಯಿತ್ತು ಬಿಡ
ದಡರಿ ನಿಳುಸಿ ನಲಿವ ದಿಟ್ಟಿ ಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳ
ಕಡಿವಡೆದುವೊಸೆದು ಹೆಸರ್ಗೊಳುತಿಪ್ಪ ನಾಲಗೆಯ
ಕುಡಿ ಮುರುಟಿತೊಮ್ಮೊಮ್ಮೆ ನುಡಿಯನಾಲಿಪ ಕಿವಿಯ
ಹಡಿಗೆತ್ತುದಲೆ ಕಂದ ಎಂದೆನುತ್ತಿಂದುಮುಖಿ ಮಱುಗಿ ಬಾಯ್ಬಿಟ್ಟಳಂದು.

ಸಿರಿ ಹೋದ ಮಱುಕವನು ನೆಲೆಗೆಟ್ಟ ಚಿಂತೆಯನು
ಪರದೇಶಮಂ ಹೊಕ್ಕ ನಾಚಿಕೆಯನಱೆಯದ
ನ್ಯರ ಮನೆಯ ತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದಳಲನು
ನೆರೆದು ಮನೆಯವರೆಯ್ದೆ ಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮಱೆತು ಪರಿಣಾಮಮಂ
ಧರಿಸುತ್ತಿಪ್ಪೆನ್ನ ಗೋಣಂಕೊಯ್ದೆ ಇನ್ನಾರ ನೋಡಿ ಮೆಱೆದಪೆನೆಂದಳು.

ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ಧರೆ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ನಿದ್ದೆಯಂ ತೊರೆದು ಬಂದ
ಸುತನ ಕರೆಯಂದಡೇನೆಂಬೆನಾವುದ ತೋಱೆ
ಪತಿಯ ಮಱುಕವನು ಮಱೆಯಿಸುವೆನುಗ್ರಾಹಿಗಾ
ಹುತಿಯಾದನೆಂದು ಪೇಳ್ವೆನೆ ಎನ್ನ ಕಂದ ಎಂದಿಂದುಮುಖಿ ಬಾಯ್ಬಿಟ್ಟಳು

ಅರಮನೆಯ ಮಣಿಗೃಹದ ಸೆಜ್ಜೆಯೊಳು ರಿಪುನೃಪರ
ಕರಿದಂತದಿಂ ಕಡೆದ ಕಾಲ ಮಂಚದೊಳಿಟ್ಟ
ವರ ಹಂಸತೂಲತಲ್ಪದೊಳು ಮಣಿವೆಳಗಿನೊಳು ಸಾಗಿಸುವ ಜೋಗೈಸುವ
ತರುಣಿಯರ ನಡುವೆ ಪವಡಿಸುವ ಸುಕುಮಾರನೀ
ನರವರಿಸದೀ ಕಾಡೊಳಿರುತ ಕತ್ತಲೆಯೊಳಾ
ಸುರದ ಕಲು ನೆಲದೊಳೊಬ್ಬನೆ ಪವಡಿಸುವುಚಿತವೇ ಎಂದು ಬಾಯ್ಬಿಟ್ಟಳು.

**ಕವಿ ಪರಿಚಯ:** ರಾಘವಾಂಕ (ಕ್ರಿ.ಶ. ೧೨೨೫) ರಾಘವಾಂಕ ಕ್ರಿ.ಶ. ೧೩ನೆ ಶತಮಾನದಲ್ಲಿನ ಷಟ್ಪದಿ ಕವಿ. ಹರಿಶ್ಚಂದ್ರ ಕಾವ್ಯ, ಸೋಮನಾಥ ಚಾರಿತ್ರ್ಯ, ಸಿದ್ಧರಾಮ ಚಾರಿತ್ರ್ಯ, ವಿರೇಶ ಚರಿತೆ – ಆತನ ಕೃತಿಗಳು. ಹರಿಶ್ಚಂದ್ರ ಕಾವ್ಯವು ಲೌಕಿಕ ಸಂಪ್ರದಾಯದ ದೇಸೀ ಕಾವ್ಯ. ಜನ ಬದುಕಬೇಕೆಂದು ಹರನೆಂಬುದೇ ಸತ್ಯ. ಸತ್ಯವೆಂಬುದೇ ಹರ ಎಂಬ ಮೌಲ್ಯಕ್ಕಾಗಿ ಬದುಕಿದ ಹರಿಶ್ಚಂದ್ರ ಚಂದ್ರಮತಿಯರ ಲೌಕಿಕ ಕಥನವಾಗಿದೆ. ವಾರ್ಧಕ ಷಟ್ಪದಿಯಲ್ಲಿ ರಚನೆಯಾದ ಈ ಕೃತಿಯಲ್ಲಿ ನಾಟಕೀಯತೆ ಅಚ್ಚೊತ್ತಿದೆ.

**ಪ್ರಶ್ನೆಗಳು:**

೧. ಲೋಹಿತಾಶ್ವನ ಶವವನ್ನು ನೋಡಿ ಚಂದ್ರಮತಿ ಹೇಗೆ ದುಃಖಿಸಿದಳು?
೨. ಚಂದ್ರಮತಿಗೆ ಒದಗಿದ ಹೀನ ಸ್ಥಿತಿಯನ್ನು ವಿವರಿಸಿ.
೩. ತಾಯಿಯ ಆತಂಕ, ತಲ್ಲಣಗಳು ಕಾವ್ಯ ಭಾಗದಲ್ಲಿ ಹೇಗೆ ಮೂಡಿಬಂದಿವೆ? ವಿವರಿಸಿ.

# ೨. ಅಂದಿನ ಕಥೆ

**–ದೇವುಡು**

**ಆಶಯ:** ಒದಗಿ ಬಂದ ಸಂದರ್ಭವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು, ಇತರರಿಗೂ ಅದನ್ನು ಹಂಚಿ, ತಾನು ಬದುಕಿ ತನ್ನಂತೆ ಮಕ್ಕಳು ಸಹ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂಬುವುದು ಬದುಕಿನ ಸಾರ.

ತಂದೆಯ ಮೇಲೆ ಮಕ್ಕಳಿಗೆಲ್ಲ ಕೋಪ. "ಮೈ ಮುರಿದು ಮಾಡಿದ ಬೆಳೆ, ಗಾಡಿ ಗಾಡಿ ತುಂಬಿ ತಂದು ಕಣಜಗಳಿಗೆಲ್ಲ ತುಂಬ ಬೇಕು. ಧಾರಣೆ ಬಂದಾಗ ಮಾರಿ ನೂರಾರು ರೂಪಾಯಿ ಕೂಡಿಡಬೇಕು" ಎಂದು ಒಂದೇ ಸಮನಾಗಿ ಹಂಬಲಿಸುತ್ತಿದ್ದ ಮಕ್ಕಳಿಗೆ ಬಹಳ ನಿರಾಸೆಯಾಯಿತು. ಆಗಲಿ, ಬಂದವರಿಗೆ ಹೋದವರಿಗೆ ಕೊಡಬೇಕು. ಕೊಡದಿದ್ದರೆ ಮನೆ ಬಾಗಿಲು ಕಟ್ಟಿಕೊಂಡು ಇರೋದೇಕೆ? ಆದರೆ, ರಾಶಿ ರಾಶಿನೇ ಕೊಟ್ಟು ಬಿಡೋದೆ?" ಎಂದು ಮಕ್ಕಳ ಕೋಪ.

ಆದರೆ, ತಂದೆಯ ಮುಂದೆ ನಿಂತು ಮಾತನಾಡುವ ಎದೆಗಾರಿಕೆ ಯಾರಿಗೂ ಇಲ್ಲ. ಯಾರು ಹೋಗಿ ಎದುರಿಗೆ ನಿಂತು ಮಾತನಾಡಬೇಕು? "ಅಯ್ಯಾ! ನೀನು ಹೀಗೆ ಮಾಡಬಾರದು" ಎಂದು ಹೇಳುವವರಾರು? ಆತನು ಕೊಡಬೇಕೆಂದು ಕೈ ನೀಡಿದರೆ, ಬೇಡವೆಂದು ಅಡ್ಡ ಬರುವವರಾರು? ಎಲ್ಲರಿಗೂ ಯೋಚನೆ.

ಕೊನೆಗೆ ಎರಡು ದಿನದ ಮೇಲೆ ಗೊತ್ತಾಯಿತು. ಹೊಲೇರ ಹೈದ ನಾರಾಯಣಿ ಮೇಲೆ ಗೌಡನಿಗೆ ಬಹಳ ಅಭಿಮಾನ. ತನ್ನನ್ನು ಸಾಕಿ ಸಲಹಿ ಹಟ್ಟಿಗಿಟ್ಟಿ ಎಲ್ಲ ಕಟ್ಟಿಕೊಟ್ಟು ಅವನನ್ನು ನಿಲ್ಲಿಸಿ ಒಬ್ಬ ಮನುಷ್ಯನನ್ನಾಗಿ ಮಾಡಿದರೆಂದು ಅವನಿಗೆ ಗೌಡರ ಮೇಲೆ ಭಕ್ತಿ. ತನ್ನಲ್ಲಿ ಅಸೀಮವಾದ ಭಕ್ತಿಯಿಟ್ಟುಕೊಂಡಿರುವನೆಂದು ಗೌಡನಿಗೆ ಪ್ರೀತಿ. ಗೌಡನು ಮನೆ ಬಿಟ್ಟು ಹೊರಟರೆ ಮತ್ತೆ ಮನೆಗೆ ಬರುವವರೆಗೂ ದೂರದ ನೆರಳಾಗಿ ಹಿಂದಿರುವವನು ನಾರಾಯಣಿ. ಗೌಡನ ನಾಯಿಯಾದರೂ ಅಪ್ಪಿತಪ್ಪಿ ಅತ್ತ ಕಡೆ ಇತ್ತ ಕಡೆ ಹೋದೀತು: ನಾರಾಯಣಿ ಮಾತ್ರ ಉಹುಂ! ಗೌಡನನ್ನು ಕಂಡು ನಾರಾಯಣಿ ಬಂದ ಎನ್ನುವುದಿರಲಿ ನಾರಾಯಣಿ ಬಂದರೆ, ಗೌಡ ಬಂದ ಎನ್ನುವುದು ರೂಪಾಯಿಗೆ ಹದಿನೇಳಾಣೆಯಷ್ಟು ಸೈ! ಅದರಿಂದ ತಂದೆಯ ಬಳಿಗೆ ಹೋಗುವ ರಾಯಭಾರಿ ನಾರಾಯಣಿಯೆಂದು ಗೊತ್ತು ಮಾಡಿದರು.

ಆದರೆ ಗೌಡನು ಕಾಣದಂತೆ ನಾರಾಯಣಿಯ ಹತ್ತಿರ ಮಾತನಾಡುವುದು ಹೇಗೆ? "ಆವೊತ್ತಿನ ಇರುಳು ಊಟಗೀಟ ಆಗಿ ಎತ್ತಿಗೆ ಹುಲ್ಲು ಹಾಕಿದ ಮೇಲೆ, ಹಾಗೆ ಹೋಗಿ ಇರುವುದನ್ನೆಲ್ಲ ನಾರಾಯಣಿಗೆ ಹೇಳುವುದು ಎನ್ನುವುದು. ಅವನು ತಂದೆಗೆ ಯಾವೊತ್ತು ಹೇಳುವನೋ ಆವೊತ್ತು ತಾವು ಗೊಬ್ಬರದ ಗಾಡಿ ಕಟ್ಟಿಕೊಂಡು ಹೋಗಿಬಿಡುವುದು" ಎಂದೆಲ್ಲ ಗೊತ್ತಾಯಿತು.

ಸುಮಾರು ಹತ್ತು ಘಂಟೆ ಇರಬಹುದು. ಎಲ್ಲರ ಮನೆಯಲ್ಲಿಯೂ ಆಗಲೇ ದೀಪ ಹೆಚ್ಚು ಮಾಡಿ ಮಲಗಿದ್ದಾರೆ. ಅಲ್ಲೊಂದು ಇಲ್ಲೊಂದು ಬೊಗುಳುವ ನಾಯಿ. ಬೀದಿಯಲ್ಲಿ ಎಲ್ಲಿಯೋ ಗ್ರಾಮಾಂತರ ಹೋಗಿ ಬರುವುದು ಹೊತ್ತಾಗಿರುವ ಒಬ್ಬಿಬ್ಬರು. ಇನ್ನು ಯಾರೂ ಇಲ್ಲ. ನಿದ್ರೆಯ ಹೊದಿಕೆ ಹೊದ್ದು ಮಲಗಿರುವ ಪುತ್ರರಿಗೆ ಪ್ರಕೃತಿಯು ಸಣ್ಣಗೆ ಜೋಗುಳವನ್ನು ಹಾಡುವಂತೆ ಅಲ್ಲಿಲ್ಲಿ ಕೂಗುತ್ತಿರುವ ಹುಳುಹುಪ್ಪಟೆಗಳು.

ಅಲ್ಲಿ ಮೂರು ಜನ ಕರಿಯ ಕಂಬಳಿಯ ಮುಸುಕಿಟ್ಟು ಮಾಗಿಯ ಮಂಜಿನಲ್ಲಿ ಸುಳಿಯುವ ನೆರಳುಗಳಂತೆ ಹೋಗುತ್ತಿದ್ದಾರೆ. ಮಂಜು ದಟ್ಟವಾಗಿದೆ. ದೂರ ಕಾಣಿಸುವುದಿಲ್ಲ. ಎದುರಿಗೆ ಬರುತ್ತಿದ್ದವರು ಯಾರೋ ಈ ಕರಿಯ ಕಂಬಳಿಗಳನ್ನು ಕಂಡು ಯಾರು ಎಂದರು.

"ನಾವು ಕಣಪ್ಪ!"

"ಯಾರು ಗೌಡರ ಮಕ್ಕಳು! ಇದೇನು! ಈಗ ಹೊಂಟುಕೊಂಡಿರಿ?

"ಹಾಗೆ ಹಿತ್ತಲಕಡೆ ಹೊಂಟೋ."

"ಇದೀಗ ಚೆನ್ನಾಯಿತು. ಕಾಲಲ್ಲಿ ಚಡಾವು ಕೂಡ ಇಲ್ಲ. ಏನಾದರೂ ಇದ್ದೀತು. ನೋಡಿಕೊಂಡು ಓಗೋ ಮೊಗ!"

"ಎನೋ ಬಿಟ್ಟು ಬಂದೋ ಓಟೆ ಕಣಪ್ಪ!"

"ನೋಡಿಕೊಂಡು ಓಗಿಪ್ಪ"

ಗೌಡನ ಮಕ್ಕಳ ಸವಾರಿಯು ನಾರಾಯಣಿಯ ಮನೆಯ ಕಡೆಗೆ ಹೊರಟಿತು, ಅವನೂ ಮನೆಯಲ್ಲಿಯೇ ಇದ್ದ. ಬಂದ ಮಾತುಕತೆ ನಡೆಯಿತು. "ಅಪ್ಪಾ! ನೀವು ಗೌಡನ ಮಕ್ಕಳು. ಒಟ್ಟೇಲೇ ಉಟ್ಟಿದವ್ರು. ಆದರೂ ಗೌಡನ ಬಗೆ ಕಾಣದೆ ಓದಿರಿ. ಅವನು ಕೊಡೋವಾಗ "ನಾರಾಯಣ! ನಿಂಗಾಗಲಿ" ಅಂತ ತುಂಬಿಕೊಡ್ತಾನೆ. ಅದರಿಂದ ಇಂಗೆ ಮೊರದಲ್ಲಿ ತುಂಬಿ ಸುರಿದಾಂಗೆ ಬೆಳೀತವೇ. ಇಲ್ಲದೆ ನಾವೂ ನೀವೂ ಮಾಡೋ ಆರಂಭ ಈ ಪೈರು ಬೆಳೀಸ್ತದೆ ಅಂದು ಕೊಂಡರೇನು?" ಎಂದು ಕೇಳಿದ ನಾರಾಯಣಿ.

ಕೊನೆಯವನಿಗೆ ಕೋಪ ಬಂತು "ಓಗೋ ಮುಕ್ಕ! ಉರೋರೆಲ್ಲ ಒಂದು ಗಾಡಿ ಗೊಬ್ಬರ ಆಕೋ ಕಡೆ ನಾವು ಎರಡು ಗಾಡಿ ಹಾಕಿ ಮೈಬೆವರು ನೆಲಕ್ಕೆ ಸುರಿದರಲ್ಲವೇನೋ ನೆಲತಾಯಿ ಬೆಳೆಯೋದು! ಬೆಳೆದ ಬೆಳೆ ಕಂಡ ಕಂಡ ಕಂಗಾಳಿಗೆ ಕೈಲಿಡಲಿ ಅಂತ ಮಾತಾಯಿ ನಿಮ್ಮ ಕೈಗೆ ಕೊಟ್ಟಳೇನೋ?" ಎಂದನು.

ಹೊಲೆಯರ ಹೈದನಿಗೆ ಮನವು ನೊಂದಿತು. ಆ ಅಪ್ಪನ ಹೊಟ್ಟೆಯಲ್ಲಿ ಈ ಮಗನೇ ಎನ್ನಿಸಿತು. ಏನೋ ಹೇಳಬೇಕು ಎಂದು ಹೊರಟವನು "ನಮ್ಮಪ್ಪಂದೀರ! ಈ ಮಾತು ನೀವು ನಿಮ್ಮಪ್ಪನಿಗೆ ಹೇಳಬೇಕಾದ್ದು! ನಂಗ್ಯಾಕೆ? ನೀವುಂಟು: ನಿಮ್ಮಪ್ಪುಂಟ. ಬೇಕಾದರೆ ಹೇಳಿ, ಸಾಕಾದರೆ ಬಿಡಿ ನಂಗತೂ ಬೇಡ" ಎಂದು ನೆಲದ ಮೇಲೆ ನೀಳವಾಗಿ ಅಡ್ಡ ಬಿದ್ದನು.

ಗೌಡನ ಮಕ್ಕಳು ಹಿಂದಿರುಗಿದರು.

ಗೌಡ ಗದ್ದೆ ತೆವರಿನ ಮೇಲೆ ಕುಳಿತಿದ್ದನು. ಅವನ ಬೀಗನು ಮಗ್ಗುಲಲ್ಲಿ ದುಪ್ಪಟಿಯನ್ನು ಹಾಸಿಕೊಂಡು ಕುಳಿತು ಅಡಕೆಲೆಯನ್ನು ಹಾಕಿ ಕೊಳ್ಳುತ್ತಿದ್ದನು: ಕಾಲಬಳಿ ಸಣ್ಣನೀರು ಹರಿದು ಹೋಗುತ್ತಿತ್ತು. ಗೌಡನು ಸುಮ್ಮನೆ ಸದ್ದು ಮಾಡದೆ ಕುಳಿತಿದ್ರೂ ಮನಸ್ಸು ಮಾತ್ರ ಮಾಗಿಯ ಮೋಡದ ಹಾಗೆ ಕಂಡು ಕಂಡು ಕರಗಿ ಹೋಗುವ ಯೋಚನೆಗಳನ್ನು ಹಿಡಿಯಲ್ಲಿ ಅಡಗಿಸಿಕೊಳ್ಳುವ ವಿಫಲಯತ್ನ ಮಾಡಿ ಮಾಡಿ ಮೊಂಕಾಗಿತ್ತು.

ಗೌಡನು ಕೇಳಿದನು: "ಹಾಗಾದರೆ ಯಾವೊತ್ತು ಇದಿಷ್ಟು ನಡೆದುದು?"

"ನಾನು ಸಂಕ್ರಾಂತಿ ಆದ ಮೇಲೆ ಎತ್ತು ಕೇಳೋಕೆ ಬಂದಿನ, ನಿನ್ಮಕ್ಕಳು ಅವರ ತಾಯೊಂದಿಗೆ ಆಡುತ್ತಿದ್ದರು. ನಾ ಬರುತ್ತಲೂ ನಿಲ್ಲಿಸಿದರು. ನಾನೇ ಬಾಳ ಬಲ್ವಂತ ಮಾಡಿ, ತಂಗಿಯಿಂದ ಹೊರಡಿಸಿದೆ ನಾನೂ ಈ ಮಾತು ಹೇಳೊದೋ ಬಿಡೋವೋ ಅಂತ ಅಳೆದು ಸುರಿದು, ನಿನ್ನ ಕಿವಿಗೆ ಹಾಕೋದೆ ಸರಿ ಅಂತ ಹಾಕಿದೆ. ನಿನ್ನಿಷ್ಟ! ಮಕ್ಕಳು ದೊಡ್ಡೋರಾದರು ರಂಗಪ್ಪ! ಸಂಸಾರ ಅವರ್ದು. ನಾವೆಂದಿದ್ದರೂ ಅಣ್ಣೆಲೆ."

"ನಿಜ! ಲಿಂಗಣ್ಣ! ಅದೇ ನಾನು ಯೋಚಿಸ್ತಿದ್ದೆ"

ಗೌಡನು ರಥಸಪ್ತಮಿ ಆಗುತ್ತಲೂ ಮನೆವಾಳ್ತನವೆಲ್ಲ ಮಕ್ಕಳಿಗೆ ಕೊಟ್ಟು ಕಾಶೀಕಡೆ ಹೋಗಿ ಬರುವೆನೆಂದು ಹೊರಟು ಹೋದನು. ಜೊತೆಯಲ್ಲಿ ಹೆಂಡತಿ, ಆಳೂ ಮಗ ಇಬ್ಬರೂ ಹೊರಟರು. ಗೌಡನು ಆಳು ಮಗನನ್ನು ತಡೆದು. "ನೀ ಬರಬೇಡಾ! ನೀನು ಎಷ್ಟಾದರೂ ಗ್ರಾಮದೊಕ್ಕಲು" ಎಂದು ಬಿಟ್ಟನು.

ಮಕ್ಕಳೂ ಊರು ಕಳೆಯುವವರೆಗೂ ಬಂದರು. ಅವರು ಹಿಂದಿರುಗುವಾಗ ಗೌಡನು "ಲಾ! ಅಪ್ಪದೀರ! ದೇವರು ಕೊಟ್ಟವ್ರಿಗೇ ಕೋಡೋದು. ಕೊಡದೋರಿಗೆ ಕೊಡೇಕಿಲ್ಲ. ಆದಷ್ಟು ನೆಪ್ಪಿರಲಿ. ಎಲ್ಲಾದರೂ ಚೆನ್ನಾಗಿರಿ, ಮನೆ ಎಸರು ಉಳಿಸಿ" ಎಂದು ಹೊರಟು ಹೋದನು.

ಇದಿಷ್ಟೂ ಹತ್ತು ವರುಷದ ಮಾತು. ಈಗ ಹೊಲೆಯರ ಹೈದನೂ ಸತ್ತು ಐದು ವರ್ಷವಾಯಿತು. ಗೌಡನ ಮನೆಯಲ್ಲಿ ತುಂಬಿದ್ದುದೆಲ್ಲ, ಬಟ್ಟೆ ಜಾಡಿಸಿಕೊಂಡು ಹೊರಟು ಹೋದ ಗೌಡನೊಂದಿಗೇ ಹೋಯಿತು ಎಂದು ಎಲ್ಲರೂ ಅನ್ನು ಹಾಗೆ ಆಗಿದೆ.

ಹಸೀಭತ್ತ ಬಿಸೀಬೆಲ್ಲ ಗಮಗಮ ಎಂದು ತುಂಬಿದ್ದ ಗೌಡನ ಮನೆಯಲ್ಲಿ ಇಂದು ಬೀಜಕ್ಕೆ ಭತ್ತ ಬೇಕಾದರೆ ಗಾಡಿ ಕಟ್ಟಿಕೊಂಡು ಹೊರಕ್ಕೆ ಹೋಗಬೇಕು ಎನ್ನುವಂತಾಗಿದೆ.

**ಕಥೆಗಾರರ ಪರಿಚಯ:** ದೇವುಡು [೧೮೯೬–೧೯೬೨, ಮೈಸೂರು] ಪೂರ್ಣ ಹೆಸರು ದೇವುಡು ನರಸಿಂಹಶಾಸ್ತ್ರಿ, ಉತ್ತಮ ವಾಗ್ಮಿ, ನವಜೀವನ ಪತ್ರಿಕೆ ಸಂಪಾದಕರಾಗಿದ್ದರು, ಕಾದಂಬರಿಗಳು ಅಂತರಂಗ, ಮಯೂರ, ಮಹಾಕ್ಷತ್ರಿಯ, ಮಹಾಬ್ರಾಹ್ಮಣ. ಕಥಾ ಸಂಕಲನ ಮೂರು ಕನಸು. ಕೇಂದ್ರ ಸಾಹಿತ್ಯ ಅಕಾಡೆಮಿ ವಿಜೇತರು.

**ಪ್ರಶ್ನೆಗಳು:**

೧. ನಾರಾಯಣಿ ಪಾತ್ರ ಪರಿಚಯಿಸಿ?
೨. ಗೌಡನ ನಂಬಿಕೆಗೆ ಮಕ್ಕಳು ಅನರ್ಹವಾದ ಸಂದರ್ಭವನ್ನು ತಿಳಿಸಿ?
೩. ಗೌಡ ನಾರಾಯಣಿ ಮೇಲೆ ನಂಬಿಕೆ ಇಡಲು ಕಾರಣವೇನು?
೪. ಗೌಡ ಮನೆ ಬಿಟ್ಟು ಹೋದ ಮೇಲೆ ಮನೆಯ ಘನತೆ, ಗೌರವ ನಾಶವಾದ ಬಗೆ ನಿರೂಪಿಸಿ.

# ೩. ಸಾಹಿತ್ಯದಲ್ಲಿ ವೈಚಾರಿಕತೆ

**–ಕೀರ್ತಿನಾಥ ಕುರ್ತುಕೋಟಿ**

**ಆಶಯ:** ಮೌಢ್ಯತೆ ಮತ್ತು ಅಂಧಃಶ್ರದ್ದೆ ಎಂಬ ಕತ್ತಲೆ ಪ್ರಪಂಚವನ್ನು ಆವರಿಸಿಬಿಟ್ಟದೆ. ಕತ್ತಲೆಯನ್ನು ಕಳೆಯಲು ವೈಚಾರಿಕತೆ ವೈಜ್ಞಾನಿಕತೆ ಎಂಬ ಜ್ಯೋತಿಯನ್ನು ಬೆಳಗಿ ಪ್ರಪಂಚವನ್ನು ಪಾರು ಮಾಡಲು ಬುದ್ಧ, ಜಗಜ್ಯೋತಿ ಬಸವಣ್ಣ, ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಅನೇಕ ಮಹಾಶಯರು ಪ್ರಯತ್ನ ಮಾಡಿದ್ದಾರೆ.

ಸಾಹಿತ್ಯದಲ್ಲಿ ವೈಚಾರಿಕತೆಯ ಸಮಸ್ಯೆ ತೀರ ಆಧುನಿಕವಾದ ಸಮಸ್ಯೆಯಾಗಿದೆ. ಪ್ರಾಚೀನ ಕಾಲದ ಜಾನಪದ ಮತ್ತು ನಗರ ಕಾವ್ಯಗಳಲ್ಲಿ ವೈಚಾರಿಕತೆ ಒಂದು ತೊಡಕಾಗಿರಲಿಲ್ಲ. ಅಂದರೆ ಪ್ರಾಚೀನ ಕಾವ್ಯಗಳಲ್ಲಿ ವೈಚಾರಿಕತೆ ಇರಲೇ ಇಲ್ಲವೆಂದು ಇದರರ್ಥವಲ್ಲ. ಭಾವನೆ ಹಾಗೂ ವಿಚಾರ ಇವೆರಡೂ ಮಟ್ಟಗಳಲ್ಲಿ ಅನುಭವ ಪ್ರಕಟವಾಗುವಂತೆ ಅಭಿವ್ಯಕ್ತಿಯ ವಿಧಾನ ಅನುಕೂಲವಾಗಿತ್ತು. ಕಾವ್ಯದ ಸ್ವರೂಪ ಹಾಗೂ ಕಾವ್ಯದ ಪ್ರಯೋಜನ ಇವುಗಳಿಂದಲೇ ಈ ಅನುಕೂಲತೆ ಸಾಧ್ಯವಾಗುತ್ತಿತ್ತು. ಆಗ ಕಾವ್ಯದ ಸ್ವರೂಪ ಜನಾಂಗದ ಸಂಸ್ಕೃತಿಯ ಅವಶ್ಯಕತೆಯಿಂದ ನಿರ್ಧಾರಿತವಾಗುತ್ತಿತ್ತು. ಇದರಿಂದ ಕಾವ್ಯ ಆ ಭಾಷೆಯನ್ನಾಡುವ ಜನಾಂಗದ ಸಜೀವವಾದ ಅವಶ್ಯಕತೆಯಾಗಿತ್ತು. ಹಿಂದಿನ ಕಾಲಕ್ಕೆ ಕವಿ, ಸಂಗೀತಗಾರನಂತೆ, ಬಡಿಗ ಕಮ್ಮಾರರಂತೆ, ರಾಜಾಸ್ಥಾನದಲ್ಲಿಯಾಗಲಿ, ಹಳ್ಳಿಯ ಸಮಾಜದಲ್ಲಿಯಾಗಲಿ ಅವಶ್ಯಕನಾದ ಕಸುಬುದಾರನಾಗಿದ್ದ. ಪ್ರಾಚೀನ ಕಾಲದ ಜೀವನಪದ್ಧತಿಯಲ್ಲಿ ಯಾವುದೇ ಕಸಬಿನಲ್ಲಿ ಭೌತಿಕ ಮತ್ತು ಆಂತರಿಕ ಪ್ರಯೋಜನಗಳನ್ನು ಕೂಡಿಯೇ ಪಡೆಯಬಹುದಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಕಾವ್ಯದ ಈ ಒಂದು ಸಾಧನವಾಗಿತ್ತು. ಕಾವ್ಯಸ್ವರೂಪದ ವೈವಿಧ್ಯಕ್ಕೆ ತಕ್ಕ ಹಾಗೆ ಇದು ಬೇರೆ ಬೇರೆ ಮಟ್ಟಗಳಲ್ಲಿ ನಡೆಯಬೇಕಾಗುತ್ತಿತ್ತು ಎಂಬ ಮಾತು ಬೇರೆ.

ಪ್ರಾಚೀನ ಕಾಲದಲ್ಲಿಯ ಅಭಿವ್ಯಕ್ತಿಯ ಈ ಕ್ರಮದ ವಿಶ್ಲೇಷಣೆ ಇಲ್ಲಿ ಸ್ವಲ್ಪ ಉಪಯುಕ್ತವಾಗಬಹುದು. ಕಾವ್ಯದಲ್ಲಿ ಅಭಿವ್ಯಕ್ತಿ ಮೂರ್ತವಾದದ್ದು, ಅಭಿವ್ಯಕ್ತವಾಗಬೇಕಾದ ಅನುಭವವೂ ಮೂರ್ತವಾಗಿದ್ದಾಗ ಅದರ ಅಭಿವ್ಯಕ್ತಿ ಸುಲಭಸಾಧ್ಯವಾಗುತ್ತದೆ. ಆದರೆ ವೈಚಾರಿಕತೆ ಅನುಭವಕ್ಕಿಂತ ಅಮೂರ್ತವಾದದ್ದು. ಅನುಭವ ಮತ್ತು ವೈಚಾರಿಕೆತೆಗಳ ಈ ಪರಸ್ಪರ ವಿರುದ್ಧವಾದ ಸ್ವಭಾವ ಅಭಿವ್ಯಕ್ತಿಯಲ್ಲಿ ಯಾರ ರೂಪ ತಾಳಬಹುದು ಎಂಬುದು ಇಲ್ಲಿಯ ಸಮಸ್ಯೆಯಾಗಿದೆ. ಜಾನಪದ ಕಾವ್ಯದಲ್ಲಿ ವೈಚಾರಿಕತೆ ಜನಾಂಗದ ಸಮಾನ್ಯ ತಿಳಿವಳಿಕೆಯಾಗಿ ಬರುವುದರಿಂದ ಅದು ಅನುಭವದಷ್ಟೇ ಕ್ರಿಯಾಶೀಲವಾಗಿ ವರ್ತಿಸುತ್ತದೆ. ಈ ಮಾತನ್ನು ಈ ಕೆಳಗಿನ ಉದಾಹರಣೆಯಿಂದ ಇನ್ನಷ್ಟು ಸ್ಪಷ್ಟಗೊಳಿಸಬಹುದು :

ಹೂವಾಗ ಹುದುಗ್ಯಾನ । ಮಾಲ್ಯಾಗ ಮಲಗ್ಯಾನ ।

ಮೊಗ್ಗ್ಯಾಗ ಕಣ್ದೆರದಾನ । ಲಿಂಗಯ್ಯ ।

............................

ದೇವರ ಸರ್ವವ್ಯಾಪ್ತಿತ್ವದ ಮೂರ್ತವಾದ ವರ್ಣನೆ ಇಲ್ಲದೆ. ಅಲ್ಲದೆ ಕವಿತೆಯಲ್ಲಿ ಉಪಯೋಗಿಸಲಾದ ಪ್ರತೀಕಗಳಲ್ಲಿ ಕೂಡ ಒಂದು ಕ್ರಮವಿದ್ದು, ಅವುಗಳ ಸಂಬಂಧ ಸಾವಯವವಾಗಿದೆ. ಈ ವರ್ಣನೆ ಸೂಚಿಸುವ ತಾತ್ವಿಕತೆ ಅನುಭಾವದ ಅನುಭವದಂತೆ ಕಂಡರೂ ಅಥವಾ ಇದನ್ನು ಬರೆದಿರುವ ಕವಿಗೆ ಅದು ವೈಯುಕ್ತಿಕವಾದ ಅನುಭವವಾಗಿ ಬಂದಿದ್ದರೂ, ಅದು ಶಾಸ್ತ್ರಸಮ್ಮತವಾದ ದಾರ್ಶನಿಕತೆಯ ಅಂಗವಾಗಿದೆ. ಆದರೆ ಈ ದಾರ್ಶನಿಕತೆ ಜನಾಂಗದ ಸಾರ್ವತ್ರಿಕವಾದ ತಿಳುವಳಿಕೆಯಾಗಿ, ನಂಬಿಕೆಯಾಗಿ, ಆಚಾರದ ಮೂಲಕವಾಗಿ ಅನುಭವವಾಗಿ ಬಂದಿರುವುದರಿಂದಲೇ ಈ ಕವಿತೆಯಲ್ಲಿ ಈ ರೀತಿಯ ಅಭಿವ್ಯಕ್ತವಾಗುವುದು ಸಾಧ್ಯವಾಗಿದೆ. ಅನ್ಯೋಕ್ತಿಯ ಹಾಗೂ ರೂಪಕ ಪ್ರಧಾನವಾದ ಕವಿತೆಗಳನ್ನು ಬಿಟ್ಟರೂ, ಶುದ್ಧವಾದ ಲೌಕಿಕಕಾವ್ಯದಲ್ಲಿ ಕೂಡ ಈ ಗುಣಧರ್ಮ ಕಾಣುತ್ತದೆ. ಖಾಜಾಸಾಹೇಬನ ಶೃಂಗಾರದ ಲಾವಣಿಗಳಲ್ಲಿ ಹೆಣ್ಣಿನ ಲಾವಣ್ಯ ಮಾಯೆಯ ಅದ್ಭುತ ರೂಪಗಳನ್ನು ಧ್ವನಿಸುವ ಸಾಮರ್ಥ್ಯವಿದೆ. ಆ ಲಾವಣಿಯ ಯಾವ ತುಣುಕನ್ನು ತೆಗೆದು ನೋಡಿದರೂ ಅದರಲ್ಲಿ ಈ ಕೇಂದ್ರಸ್ಥಳವಾದ ದರ್ಶನ ಭಾಷೆಯ ಮೆರುಗಿನಲ್ಲಿಯೇ ವ್ಯಕ್ತವಾಗಿರುವುದು ಕಾಣುತ್ತದೆ. ಆದರೆ ಜಾನಪದ ಕಾವ್ಯದಲ್ಲಿ ಕಂಡುಬರುವ ಪರಿಷ್ಕಾರವೆಲ್ಲ ಜನಾಂಗದ ಪರಿಷ್ಕಾರವೆಂಬುದನ್ನು ಮರೆಯುವಂತಿಲ್ಲ. ವೈಚಾರಿಕತೆ ಒಂದು ಸಾಮುದಾಯಿಕವಾದ ಸಂವೇದನೆಯಾಗದೆ ಜಾನಪದ ಕಾವ್ಯದಲ್ಲಿ ಪ್ರಕಟವಾಗುವುದು.

ಪ್ರಾಚೀನ ಅಭಿಜಾತ ಕಾವ್ಯಗಳಲ್ಲಿ ಇದಕ್ಕಿಂತ ಭಿನ್ನವಾದ ಪ್ರಕ್ರಿಯೆ ನಡೆದಿರುವುದು ಕಾಣುತ್ತದೆ. ಇಲ್ಲಿ ಕೂಡ ನೈತಿಕ ಅಥವಾ ಧಾರ್ಮಿಕ ವಿಚಾರಗಳು ಜಾನಪದ ಕಾವ್ಯದಲ್ಲಿಯಂತೆ ಸಾಮುದಾಯಿಕ ಸಂವೇದನೆಯಿಂದಲೇ ತೆಗೆದುಕೊಂಡವುಗಳಾಗಿರುತ್ತವೆ. ಆದರೆ ಇದು ಕಾವ್ಯದ ಪ್ರಾಥಮಿಕ ಹಂತದಲ್ಲಿ ಮಾತ್ರ. ಇದನ್ನು ಬಿಟ್ಟರೆ ಕಾವ್ಯದಲ್ಲಿ ಒಂದು ಭಾವಸನ್ನಿವೇಶದ ಪ್ರಭಾವದಿಂದ ರಸಸ್ಥಿತಿಗೆ ಮುಟ್ಟಬೇಕಾದಾಗ ಯೋಗ್ಯತೆಯನ್ನು ಪಡೆಯುತ್ತದೆ. ವೈಚಾರಿಕತೆಯನ್ನು ಪ್ರಕಟಿಸಬಲ್ಲದು. ಅನುಭವ ಮತ್ತು ತಿಳುವಳಿಕೆ ಈ ಎರಡೂ ರೂಪಗಳಲ್ಲಿ ಸಹೃದಯನಿಗೆ ರಸ ಪ್ರಾಪ್ತವಾಗುತ್ತದೆ. ಆದರೆ ಅನುಭವ ಮತ್ತು ವಿಚಾರಗಳು ಬೇರೆ ಬೇರೆಯಾಗಿರದೆ ಅಭಿನ್ನಸ್ಥಿತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಅನುಭವ ಮತ್ತು ವಿಚಾರಗಳ ಈ ಅಭೇದವನ್ನು ಕಾಳಿದಾಸನ 'ರಘುವಂಶ' ಕಾವ್ಯದ ಈ ಕೆಳಗಿನ ಉದಾಹರಣೆಯಲ್ಲಿ ನೋಡಬಹುದು.

ಅಥವಾ ಮೃದುವಸ್ತು ಹಿಂಸಿತುಂ ಮೃದುನೈವಾರಭತೇ ಪ್ರಜಾಂತಕಃ।
ಹಿಮಸೇಕ ವಿಪತ್ತಿರತ್ರ ಮೇ ನಲಿನೀ ಪೂರ್ವನಿದರ್ಶನಂ ಮತಾ॥

ಅಜ ಇಂದುಮತಿಯ ಆಕಸ್ಮಿಕವಾದ ಮರಣದ ವೇದನೆಯನ್ನು ಅನುಭವಿಸುತ್ತಿದ್ದಾನೆ. ಅದರ ಜೊತೆಯಲ್ಲಿಯೇ ಮರಣದ ಸ್ವರೂಪವನ್ನು ಈ ಅನುಭವದ ಮೂಲಕ ತಿಳಿಯಲು ಹವಣಿಸುತ್ತಿದ್ದಾನೆ. ಮರಣ ಮೊದಲೇ ತರ್ಕವನ್ನು ಮೀರಿದ ಘಟನೆ. ಅದರಲ್ಲಿ ಹೂವಿನ ಮಾಲೆಯೊಂದು ಎದೆಯ ಮೇಲೆ ಬಿದ್ದು, ಸತ್ತ ಇಂದುಮತಿಯ ಮರಣ ಸಾಮಾನ್ಯವಾದ ಸಾವಿಗಿಂತ ಹೆಚ್ಚು ಅತರ್ಕ್ಯವಾದದ್ದು. ಅಂಥದ್ದರಲ್ಲಿಯೂ ಅಜ ಈ ಸನ್ನಿವೇಶದ ಅಂಸಂಬದ್ದತೆಯನ್ನು ಒಂದು ತರ್ಕದ ಮೂಲಕ ಪ್ರಕಟಿಸುತ್ತಾನೆ. ಹಿಮದಿಂದ ಬಾಡಿಹೋಗುವ ಕಮಲಿನಿ, ಮಾಲೆಯಿಂದ ಹತಳಾದ ಇಂದುಮತಿ ಇವರಿಬ್ಬರಲ್ಲಿ ಒಂದು ಸಾದೃಶ್ಯವನ್ನು ಕಂಡ ಅಜ ಹುಟ್ಟು ಸಾವುಗಳ ತರ್ಕಾತೀತವಾದ ಘಟನೆಗೆ ಒಂದು ತಾರ್ಕಿಕತೆಯನ್ನು ತಂದುಕೊಡುತ್ತಾನೆ. ಈ ಘಟನೆಗಳ ಪರಸ್ಪರ ಸಂಬಂಧಗಳ ಆಲೋಚನೆಯಲ್ಲಿ ವೈಚಾರಿಕತೆ ಹುಟ್ಟಿಬರುತ್ತದೆ. ಆದರೆ ಈ ವಿಚಾರದ ಹಿಂದೆ ಯಾವುದೇ ತರ್ಕಶುದ್ದವಾದ ಅಥವಾ ಶಾಸ್ತ್ರಸಮ್ಮತವಾದ ವಿಚಾರ ಸರಣಿ ಇಲ್ಲವೆಂಬ ಮಾತು ಗಮನಾರ್ಹವಾಗಿದೆ. ಅಜನಿಗೆ ಸಮಾಧಾನ ಹೇಳಲು ಮುಂದೆ ವಸಿಷ್ಠರು ಸಂದೇಶವನ್ನು ಕಳಿಸಿದಾಗ, ಆ ಸಂದೇಶದಲ್ಲಿಯ ಒಂದು ಮಾತನ್ನು ಮೇಲಿನ ಉದಾಹರಣೆಯೊಂದಿಗೆ ಹೋಲಿಸಿ ನೋಡಬೇಕು. 'ಮರಣಂ ಪ್ರಕೃತಿ: ಶರೀರಿಣಾಂ ವಿಕೃತಿ: ಜೀವತಮುಚ್ಚತೇ ಬುಧೈ: ಎಂಬ ಮಾತು ತರ್ಕಸಮ್ಮತವಾದ ವಿಚಾರಸರಣಿಯಾಗಿದೆ. ಅಜ ವಸಿಷ್ಠನ ವೈಯುಕ್ತಿಕ ದರ್ಶನವಾಗಿರದೆ ಪರಂಪರಾಗತವಾಗಿ ಇಳಿದು ಬಂದ ವಿಚಾರವೆಂಬ ಸಂಗತಿ 'ಉಚ್ಚತೇ ಬುಧೈಃ' ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ. ಅದೇ ಅಜನ ಮಾತುಗಳಲ್ಲಿಯ ವಿಚಾರ ಅನುಭವಜನ್ಯವಷ್ಟೇ ಅಲ್ಲದೆ ಕಾವ್ಯಾನುಭವ ಜನ್ಯವೂ ಆಗಿದೆ. ಅಂದರೆ ಕಾವ್ಯದ ಆಲೋಚನೆಗೆ ಮಾತ್ರ ನಿಲುಕುವ ದರ್ಶನವಾಗಿದೆ.

ಆದರೆ ಈ ಸಂಗತಿಯನ್ನು ಆಧುನಿಕ ಸಾಹಿತ್ಯಕ್ಕೆ ಅನ್ವಯಿಸಿ ಹೇಳಲು ಸಾಧ್ಯವಿಲ್ಲವೆಂಬ ಮಾತು ಸ್ವಯಂಸ್ಪಷ್ಟವಾಗಿದೆ. ಇದಕ್ಕೆ ಕಾರಣಗಳೇನೆಂಬುದನ್ನು ಅರಿಯುವದು ಕಠಿಣವಾಗಿಲ್ಲ. ಈ ಸಮಸ್ಯೆಗೆ ಮುಖ್ಯ ಕಾರಣವೆಂದರೆ ನಮ್ಮ ವೈಚಾರಿಕ ಭಾಷೆ ಭಾವಾತ್ಮಕವಾದ ಭಾಷೆಗಿಂತ ಭಿನ್ನವಾಗಿರುವುದೇ ಆಗಿದೆ. ಪ್ರಾಚೀನ ಕಾಲದಲ್ಲಿ ಕೂಡ ಸ್ವಲ್ಪಮಟ್ಟಿಗೆ ಇಂಥ ಸಮಸ್ಯೆ ಇದ್ದಿತು. ಆಗ ಕನ್ನಡ ಮತ್ತು ಸಂಸ್ಕೃತಗಳೆರಡೂ ಭಿನ್ನವಾದ ಭಾಷೆಗಳಾಗಿದ್ದರೂ ಸಂಸ್ಕೃತಿಯ ದೃಷ್ಟಿಯಿಂದ ಅವು ಭಿನ್ನವಾಗಿರಲಿಲ್ಲ. ಆದ್ದರಿಂದ ವಚನಕಾರರಿಗೆ ಮತ್ತು ಪಂಪ–ಕುಮಾರವ್ಯಾಸರಂಥ ಕವಿಗಳಿಗೆ ಸರಳವಾದ ಕನ್ನಡದಲ್ಲಿ ಕೂಡ ವೈಚಾರಿಕತೆಯನ್ನು ಪ್ರಕಟಿಸುವುದು ಸಾಧ್ಯವಾಗಿತ್ತು. ಆದರೆ ಈಗ ಮಾತ್ರ ಸಮಸ್ಯೆ ಹೆಚ್ಚು ತೊಡಕಿನದಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಇವೆರಡೂ ನಮ್ಮ ಬೌದ್ಧಿಕ ಜೀವನದಲ್ಲಿ ಸಹಜೀವನ ನಡೆಸುತ್ತಿದ್ದರೂ ಅವು ಭಿನ್ನ ಸಂಸ್ಕೃತಿಗಳಿಗೆ ಸೇರಿದ ಭಾಷೆಗಳಾಗಿರುವುದರಿಂದ ಒಂದರೊಳಗೊಂದು ಸುಲಭವಾಗಿ ಬೆರೆಯಲಾರವು. ಕಾವ್ಯದ ಮಟ್ಟಿಗೆ ಹೇಳುವುದಾದರೆ ಕ್ನನಡದಲ್ಲಿ ಸಂಸ್ಕೃತ ಬೆರೆಯುವಂತೆ ಇಂಗ್ಲಿಷ್ ಬೆರೆಯುವುದು ಸಾಧ್ಯವಾಗಿಲ್ಲ. ಕೈಲಾಸಂ ನಾಟಕಗಳಲ್ಲಿ ಮತ್ತು ಇತ್ತೀಚೆಗೆ ನವ್ಯ ಕಾವ್ಯದಲ್ಲಿ ನಡೆದಿರುವ ಇಂಗ್ಲಿಷ್ ಉಪಯೋಗದ ಉದ್ದೇಶ ವಿಡಂಬನದ ಮಟ್ಟಿಗೆ ಮಾತ್ರ ಸೀಮಿತವಾಗಿದೆ. ಇಂಗ್ಲಿಷ್ ಭಾಷೆಯ ಪ್ರತ್ಯಕ್ಷವಾದ ಆದರೆ ಗಂಭಿರವಾದ ಉಪಯೋಗ ನಮ್ಮ ಹೊಸ ಕಾವ್ಯದಲ್ಲಿ ಇನ್ನೂ ಆಗಿಲ್ಲವೆಂದೇ ನನ್ನ ತಿಳುವಳಿಕೆಯಾಗಿದೆ. ಇದರಿಂದಾಗಿ ಹೊಸ ವೈಚಾರಿಕತೆಯನ್ನು ಕಾವ್ಯದಲ್ಲಿ ತರುವಾಗ ಕವಿ ಬಹಳ ಕಷ್ಟಪಡಬೇಕಾಗುತ್ತದೆ. ಕನ್ನಡದ ವಾಕ್ಯ ರಚನೆಯಲ್ಲಿ ತರಲಾಗದ ವೈಚಾರಿಕತೆಯನ್ನು ತಂದು ಕನ್ನಡ ಭಾಷೆಯ ಅರ್ಥಪ್ರಕಟನ ಶಕ್ತಿಯನ್ನು ಪ್ರಕಟಗೊಳಿಸಿರುವ ಉದಾಹರಣೆಗಳೂ ಇವೆ.

ಮೇಲಿನ ಕಾರಣಕ್ಕೆ ಸಂಬದ್ಧವಾಗಿರುವ ಇನ್ನೊಂದು ಕಾರಣವೂ ವೈಚಾರಿಕತೆಯ ಸಮಸ್ಯೆಯನ್ನು ಹುಟ್ಟಿಸಿದೆ. ಹೊಸಗನ್ನಡದಲ್ಲಿ ಭಾವಗೀತದ ಕಾವ್ಯ ಪ್ರಕಾರ ವೈಚಾರಿಕತೆಯನ್ನು ಕಾವ್ಯದಿಂದ ದೂರ ಇರಿಸಿತು. ಕವಿತೆಯ ಉದ್ದೇಶ

ಭಾವದ ಅಭಿವ್ಯಕ್ತಿಯಾಗಿಯೇ ಉಳಿದು ವೈಚಾರಿಕತೆಯನ್ನು ಕಾವ್ಯಕ್ಕೆ ಅಯೋಗ್ಯವೆನ್ನಿಸಿತು. ಇಲ್ಲಿ ಇನ್ನೊಂದು ಸಂಗತಿಯೂ ಅಷ್ಟೇ ಕುತೂಹಲಕಾರಿಯಾಗಿದೆ. ಭಾವಗೀತೆಯ ಕಾವ್ಯಪ್ರಭೇದ ಕಾವ್ಯವನ್ನು ಗದ್ಯದಿಂದ ಬೇರ್ಪಡಿಸುವ ಪ್ರಬಲ ಸಾಧನವಾಗಿದೆ. ಹಿಂದಿನ ಕಾಲಕ್ಕೆ ಗದ್ಯ ಪದ್ಯಗಳೆರಡೂ ಕಾವ್ಯಾಭಿವ್ಯಕ್ತಿಯ ಎರಡು ವಿಧಾನಗಳಾಗಿದ್ದವು. ಕಾವ್ಯ ಪ್ರಕಾರದ ದೃಷ್ಟಿಯಿಂದ ಬಾಣನ ಕಾದಂಬರಿಗೂ ಅಶ್ವಘೋಷನ ಬುದ್ಧಿಚರಿತಕ್ಕೂ ಯಾವ ಅಂತರವೂ ಇಲ್ಲ. ಆದರೆ ಈಗ ಮಾತ್ರ ಗದ್ಯ–ಪದ್ಯಗಳ ನಡುವಿನ ಭೇದ ಆಂತರಿಕವಾಗಿದೆ. ಅಂದರೆ ಅವುಗಳ ಹಿಂದಿನ ಮನೋಧರ್ಮ ಭಿನ್ನಭಿನ್ನವಾಗಿದೆ.

ಗದ್ಯ–ಪದ್ಯಗಳ ಸ್ವರೂಪ ಭಿನ್ನವಾಗಿದ್ದು ಅವುಗಳ ಪ್ರಯೋಜನಕ್ಕೂ ಬೇರೆಯಾಗಿವೆಯೆಂಬ ಕೃತ್ರಿಮ ವಿಧಾನ ಇತ್ತೀಚೆಗೆ ಏರ್ಪಟ್ಟದ್ದಾಗಿದೆ. ಕಾವ್ಯ ಭಾವನಾ ಪ್ರಧಾನವೆಂದೂ ಗದ್ಯದಲ್ಲಿ ವೈಚರಿಕತೆಗೆ ಎಡೆ ಇದೆಯೆಂದೂ ನಾವು ಈಗ ನಂಬುತ್ತಿದ್ದೇವೆ. ಗದ್ಯದ ವಿಕಾಸ ನಾಗರಿಕತೆಯ ಬೆಳವಣಿಗೆಯ ಫಲವೆಂಬುದನ್ನು ನಾವು ಮರೆಯುವಂತಿಲ್ಲ. ಈ ರೀತಿಯ ವಿಧಾನದಿಂದ ಗದ್ಯ ಪ್ರಕಾರಕ್ಕೆ ಏನೇ ಲಾಭವಾಗಿರಲಿ ಕಾವ್ಯ ಮಾತ್ರ ತನ್ನ ಗದ್ಯ ತನವನ್ನು ಕಳೆದುಕೊಂಡಿತು. ಇದಕ್ಕೂ ಮುಂದೆ ಹೋಗಿ ಲಲಿತ ಸಾಹಿತ್ಯ ವಿಚಾರಸಾಹಿತ್ಯ ಎಂದು ಗದ್ಯದಲ್ಲಿಯೂ ಎರಡು ಪ್ರಭೇದಗಳಾದವು. ಇದರಿಂದಾಗಿ ಬರಬರುತ್ತಾ ಸಾಹಿತ್ಯ ವೈಚಾರಿಕತೆಗೇ ಬಿಹಿಷ್ಕಾರ ಹಾಕುವ ಪ್ರಸಂಗ ಬಂದಿತು.

ಇತ್ತೀಚೆಗೆ ಕಾವ್ಯದಲ್ಲಿ ಗದ್ಯತನವನ್ನು ತರುವ ಅನೇಕ ಪ್ರಯತ್ನಗಳು ನಡೆದಿವೆ. ನವ್ಯಕಾವ್ಯದ ಆಂದೋಲನ ಈ ಪ್ರಯತ್ನಗಳಲ್ಲಿ ಪ್ರಮುಖವಾದದ್ದು. ಆದರೆ ಇಲ್ಲಿಯೂ ಭಾಷೆಯ ತೊಡಕಿನಿಂದಾಗಿ ಈ ಪ್ರಯತ್ನ ಅಷ್ಟು ಯಶಸ್ವಿಯಾಗಿಲ್ಲ. ನವ್ಯಕಾವ್ಯದಲ್ಲಿ ಕ್ಲಿಷ್ಟತೆಯ ಸಮಸ್ಯೆಗೆ ಬಹುಮಟ್ಟಿಗೆ ಈ ಭಾಷೆಯ ತೊಡಕೇ ಕಾರಣವಾಗಿದೆಯೋ ಏನೋ ಆದ್ದರಿಂದ ನಮ್ಮ ಭಾಷೆಯ ಸಮಸ್ಯೆ ಬಗೆಹರಿಯುವ ತನಕ ಮತ್ತು ನಮ್ಮ ಅಭಿವ್ಯಕ್ತಿಯ ಕ್ರಮದಲ್ಲಿ ಮೂಲಭೂತವಾದ ಬದಲಾವಣೆಯಾಗುವ ತನಕ ಈ ಸಮಸ್ಯೆ ಉಳಿಯುವುದೆಂದು ತೋರುತ್ತದೆ.

**ಲೇಖಕರ ಪರಿಚಯ:** ಕೀರ್ತಿನಾಥ ಕುರ್ತಕೋಟಿರವರು ಅಕ್ಟೋಬರ್ ೧೩, ೧೯೨೮ ಗದಗ ಜಿಲ್ಲೆಯಲ್ಲಿ ಜನಿಸಿದರು. ಕವಿ, ನಾಟಕಕಾರ, ವಿಮರ್ಶಕ, ಅನುವಾದಕ, ಅಂಕಣಕಾರ. ಆಮನಿ–ಈಮನಿ, ಸ್ವಪ್ನ ವಾಸವದತ್ತೆ ನಾಟಕ, ನವ್ಯ ಕಾವ್ಯ ಪ್ರಯೋಗ ವಿಮರ್ಶೆ, ಬಾರೋ ಸಾಧನಕೇರಿಗೆ ಮೊದಲಾದ ಸಾಹಿತ್ಯ ರಚಿಸಿದ್ದಾರೆ. ೧೯೯೫ರಲ್ಲಿ ಉರಿಯ ನಾಲಗೆ ವಿಮರ್ಶಾ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

**ಪ್ರಶ್ನೆಗಳು:**

೧. ಪ್ರಾಚೀನ ಸಾಹಿತ್ಯದಲ್ಲಿನ ವೈಚಾರಿಕತೆಯನ್ನು ವಿವರಿಸಿ?
೨. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯನ್ನು ಕುರಿತು ಬರೆಯಿರಿ?
೩. ಸಾಹಿತ್ಯದಲ್ಲಿ ವೈಚಾರಿಕತೆ ಲೇಖನದ ಆಶಯ ಕುರಿತು ಬರೆಯಿರಿ?
೪. ವೈಚಾರಿಕತೆ ಎಂದರೆ ಏನು? ಸಾಹಿತ್ಯದಲ್ಲಿ ವೈಚಾರಿಕತೆ ಬೇಕೆ ಚರ್ಚಿಸಿ?

## ಘಟಕ : ೨

# ೧. ವಚನಗಳು

**–ಮುಕ್ತಾಯಕ್ಕ**

**ಆಶಯ:** ವಚನವೆಂದರೆ ಮಾತು, ಪ್ರಮಾಣ, ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ ಇದು. ವಚನ ಸಾಹಿತ್ಯ ಚಳುವಳಿ ಬದುಕಿನಲ್ಲಿ ಸಾಹಿತ್ಯದಲ್ಲಿ ಹಾಗೂ ಅಧ್ಯಾತ್ಮದಲ್ಲಿ ಅಪೂರ್ವವಾದ ಸಾಧನೆಗಳಿಗೆ, ಎಡೆಮಾಡಿಕೊಟ್ಟಿತು. ಕಾಯಕ–ದಾಸೋಹಗಳ ಪರಿಕಲ್ಪನೆಯಲ್ಲಿ ಬದುಕು ಮತ್ತು ಧರ್ಮವನ್ನು ಸಂಲಗ್ನಗೊಳಿಸಿಕೊಂಡ ಕಾಲಮಾನವದು. ಅಳು–ಅರಸ, ಉಚ್ಚ–ನೀಚ ಎಂಬ ಭೇದಗಳನ್ನು ಕಳಚಿ ಮಾನವತೆಯ ಪ್ರೀತಿಯನ್ನು ಬಿತ್ತಿದ ಕಾಲವದು.

ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ
ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ
ಆರೂಢಗೆಟ್ಟಿಯೊ ಅಜಗಣ್ಣ

ಸತ್ಯವುಳ್ಳಲ್ಲಿ ಶಬುದ ಹಿಂಗದು
ಭಾವವುಳ್ಳಲ್ಲಿ ಭಕ್ತಿ ಹಿಂಗದು ಮೂರು ಲೋಕದ ಹಂಗಿನ ಶಬುದವೇನಂಯ್ಯ
ಮುಕುತಿಯನೇವೆನಂಯ್ಯಾ
ಎನ್ನ ಯುಕುತಿಯ ಮುಕುತಿಯ ಬಕುತಿಯಪದವನು
ನಾಚಿದನಜಗಣ್ಣತಂದೆ

ತನುವಿನೊಳಗೆ ತನುವಾಗಿ
ಮನದೊಳಗೆ ಮನವಾಗಿ
ಪ್ರಾಣದೊಳಗೆ ಪ್ರಾಣವಾಗಿಪ್ಪದೆಂದಡೆ
ಕೆಲಬರಿಗೆ ಅರಿಯಬಪ್ಪುದೆ
ಅಂತರಗದೊಳಗೆ ಅದೆ ಎಂದಡೇನು
ಮನ ಮುಟ್ಟುವನ್ನಕ್ಕರ ಕಾಣಬಾರದು
ಬಹಿರಂಗದಲ್ಲಿ ಅದೆ ಎಂದಡೇನು
ಪೂಜಿಸುವನ್ನಕ್ಕರ ಕಾಣಬಾರದು.

ಅರಿವಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು
ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು
ನಾನೆಂತು ಬದುಕುವೆನಣ್ಣಾ
ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣಾ ನಿನ್ನ ಯೋಗ

**ವಚನಕಾರ್ತಿಯ ಪರಿಚಯ:** ಮುಕ್ತಾಯಕ್ಕ (೧೧೬೦) ಅಜಗಣ್ಣ, ಅಜಗಣ್ಣ ತಂದೆ ಎಂಬ ಮುದ್ರಿಕೆಗಳಿಂದ ೩೭ ವಚನಗಳನ್ನು ಬರೆದ ಮುಕ್ತಾಯಕ್ಕನ ಅನುಭಾವಿತ ನೆಲೆ ಶಿವಶರಣರಲ್ಲಿ ಎದ್ದು ಕಾಣುವಂತದ್ದು. ಅಜಗಣ್ಣ ಮತ್ತು ಮುಕ್ತಾಯಕ್ಕ ಅಣ್ಣ–ತಂಗಿಯರಾಗಿದ್ದು, ಇಬ್ಬರೂ ವಚನ ರಚನೆ ಮಾಡಿದ್ದಾರೆ. ಅಣ್ಣನನ್ನೇ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕ ಆ ಹೆಸರನ್ನೇ ತನ್ನ ಅಂಕಿತವಾಗಿ ಇಟ್ಟುಕೊಂಡಿದ್ದು ಸಹಜವಾಗಿದೆ.

**ಪ್ರಶ್ನೆಗಳು:**

೧. ಮುಕ್ತಾಯಕ್ಕನ ವಚನಗಳಲ್ಲಿ ತನು ಮನವಿನ ಪ್ರಸಂಗವನ್ನು ನಿರೂಪಿಸಿ.
೨. ಮುಕ್ತಾಯಕ್ಕನ ವಚನಗಳ ಆಶಯ ವಿವರಿಸಿ.

# ೨. ಏಡಿ ಕಚ್ಚಿದ ಕೈ

**–ಎಚ್.ಎಲ್. ನಾಗೇಗೌಡ**

**ಆಶಯ:** ಸಹಕಾರ, ಸ್ನೇಹ ಗ್ರಾಮ ಬದುಕಿನ ಲಕ್ಷಣ. ಅಲ್ಲಿ ಸ್ವಾರ್ಥಕ್ಕಿಂತ ತ್ಯಾಗವೇ ಹೆಚ್ಚು. ಪರಸ್ಪರ ಸಹಬಾಳ್ವೆ ಹಳ್ಳಿಗಳ ಸಂಸ್ಕೃತಿಯನ್ನು ಹೇಳುತ್ತದೆ. ಆದರೆ ಇತ್ತೀಚಿನ ದಿನಗಳ ಗ್ರಾಮ ಭಾರತದ ಲಕ್ಷಣ ಬದಲಾಗುತ್ತಿದೆ. ಏಡಿ ಮನುಷ್ಯನನ್ನು ಕಚ್ಚಿದ್ದೇ ಕಾರಣವಾಗಿ ಮನುಷ್ಯತ್ವದ ನೆಲೆಗಳು ಬಿಚ್ಚಿಕೊಳ್ಳುತ್ತಾ ಹೋಗುವುದನ್ನು ಈ ಕಥೆಯಲ್ಲಿ ಗಮನಿಸಬಹುದಾಗಿದೆ.

ಕೆರೆಯ ಅಂಗಳ ಪಾಚುವರಿಯಾಗಿತ್ತು. ಕಾಲುವೆಗಳು ಒಣಗಿದ್ದುವು. ಕೋಡಿ ಬಳಿಯ ಮಡು ಬಿಟ್ಟರೆ ಹಕ್ಕಿ ಕುಡಿಯುವುದಕ್ಕೂ ಎಲ್ಲೂ ನೀರಿರಲಿಲ್ಲ.

ಆ ದಿನ ಊರ ಮಾರಮ್ಮನ ಪೂಜೆ ಮಾಡುವುದು ಪೂಜಾರಿ ಪುಟ್ಟಯ್ಯನ ಸರದಿ. ಬೆಳಗ್ಗೆ ಉಡುಪೆ ಹಿಡಿದು ಏರಿ ಹಿಂದಕ್ಕೆ ಹೋದ. ಅಲ್ಲಿ ಯಾವಾಗಲೋ ಯಾವ ಪುಣ್ಯಾತ್ಮರೋ ಹಾಕಿದ ಕಣಿಗಲು ಗಿಡಗಳು ದೇವರ ತಲೆಯ ಮೇಲೆ ಹಾಕಲು ಬೇಕಾದ ಹೂಬಿಡುತ್ತಿದ್ದುವು. ಅದನ್ನು ಕೊಯ್ದು ಬುಟ್ಟಿಗೆ ಹಾಕಿಕೊಂಡು ಕಾಲುವೆ ಮೇಲೆ ಬರುತ್ತಿದ್ದ ಅಲ್ಲೂ ಒಂದೆರಡು ಕಣಿಗಲು ಗಿಡ ಹೂ ಬಿಟ್ಟಿದ್ದವು. ಅವನ್ನೂ ಕೊಯ್ದು ಇನ್ನೇನು ಕಾಲ್ತೆಗೆಯಬೇಕು. ಆಗ 'ಬುಳುಕ್' ಎಂದು ಶಬ್ದವಾಯಿತು. ಇಳಿದು ನೋಡಿದ. ಕಾಲುವೆ ಏರಿಯ ಬುಡದಲ್ಲಿ ಒಂದು ತೊಪ್ಪೆಯಷ್ಟು ಗಾತ್ರದ ಹಸಿಮಣ್ಣು ಇತ್ತು ಒಂದು ಬಿಲದ ಬಳಿ. ಇಂತಹ ವಿಷಯಗಳಲ್ಲಿ ಭಾರಿ ಅನುಭವಸ್ಥನಾದ ಆತನಿಗೆ ಅದು ಹೆಗ್ಗನಳ್ಳಿ ತೋಡಿದ ಮಣ್ಣೆಂದು ಸ್ಪಷ್ಟವಾಯಿತು. ಪುಟ್ಟಯ್ಯ ಅಲುಗಾಡದೆ ಕೊಂಚ ಹೊತ್ತು ನಿಂತ. ಬಿಲದೊಳಗಿನಿಂದ ಹೆಗ್ಗನಳ್ಳಿ ಹಸಿ ಮಣ್ಣು ತೋಡಿಕೊಂಡು ಬಂದು ಹೊರಕ್ಕೆ ಹಾಕಿತು. ನಳ್ಳಿಗೆ ತೇವ ಇರುವ ಜಾಗ ಆಗಬೇಕು. ತೇವ ಸಿಕ್ಕುವವರೆಗೂ ಬಿಲ ತೋಡಿಕೊಂಡು ಹೋಗುತ್ತದೆ. ಈಗ ಅದು ಆ ಕೆಲಸದಲ್ಲಿ ತೊಡಗಿತ್ತು. ಯಾರೂ ಇಲ್ಲವೆಂದು ಹೊರಗೆ ಬಂದ ಅದು ತನ್ನ ದಪ್ಪ ಮತಾಪಿನ ಬೆಂಕಿಕಡ್ಡಿಯಂತಹ ಕಣ್ಣುಗಳನ್ನು ಬಿಟ್ಟು ಕರಿಯನಾದ, ಕರಿ ಅಂಗಿಯ, ಕರಿಯ ಕೂದಲು ಕಾಲಿನ ಆದರೆ ಬಿಳಿಯ ಗಡ್ಡದ ಪುಟ್ಟಯ್ಯನನ್ನು ನೋಡಿತೋ ಇಲ್ಲವೋ ಬುಳುಕ್ ಎನ್ನುತ್ತ ಬಿಲಾ ಸೇರಿತು. ಭಾರಿ ಏಡಿ ಅದು. ಅದರ ಒಂದೊಂದು ಕೊಂಡಿ ನನ್ನೂರ ಈರಭದ್ರಾಚಾರಿಯ ಹೆಗ್ಗಿಕ್ಕಳದಷ್ಟು ದಪ್ಪ. ಒಂದು ಕೊಂಡಿ ಸಾಕು ಒಂದು ಹೊತ್ತಿನ ಪಜ್ಜಿಗೆ. ಎರಡು ಮೂರು ದಿನಗಳಿಂದ ಏನೂ ಸಿಕ್ಕದೆ ಪುಟ್ಟಯ್ಯನ ಬಾಯಿ ಸಪ್ಪೆಯಾಗಿತ್ತು. ಈಗ ಆ ದಡಿಯ ನಳ್ಳಿಯನ್ನು ಕಂಡ ಆತನಿಗೆ ಬಾಯಲ್ಲಿ ನೀರೂರಿತು.

ಸರಸರನೆ ಬಂದವನು ಕಾಟಾಚಾರಕ್ಕೆ ಮಾರಮ್ಮನ ಪೂಜೆ ಮಾಡಿದ. ಹಿಟ್ಟುಂಡು ಏಡಿಯ ಬೇಟೆಗೆ ನಡೆದ. ಪುಟ್ಟಯ್ಯನ ಅಡ್ಡ ಹೆಸರು 'ಮೀನು ಗುಂಡಿ' ಎಂದು ಊರಿನವರಿಗೆಲ್ಲಾ ಒಂದೊಂದು ಅಡ್ಡ ಹೆಸರಿದ್ದಂತೆ ಅವನಿಗೂ ಈ ಅಡ್ಡ ಹೆಸರಿತ್ತು. ಅವನು ಊರಿನಲ್ಲಿ ಇರುತ್ತಿರಲೇ ಇಲ್ಲ. ಯಾವಾಗಲೂ ಮೀನುಗುಂಡಿಗಳ ಬಳಿಯೇ ಇರುತ್ತಿದ್ದ ದಿನಾ ಏನಾದರೊಂದು ಮೀನೋ ನಳ್ಳಿಯೋ ಇಲ್ಲದಿದ್ದರೆ ಅವನ ಗಂಟಲಿನಲ್ಲಿ ಹಿಟ್ಟು ಇಳಿಯುತ್ತಿರಲಿಲ್ಲ. ಅಂತ ದಿನ ಅವನ ಹೆಂಡತಿ ಮಾಯಮ್ಮ ಎಷ್ಟೇ ಚೆನ್ನಾಗಿ ಬೇರೆ ಸಾರು ಮಾಡಿದರೂ ಹೊಡೆದು ಬಡಿದು ಅವಳ ಮೈಯಿಳಿಸಿಬಿಡುತ್ತಿದ್ದ ಕೆರೆ ಪಾಚುವರಿ ಆದ ವರ್ಷ ಅವನ ಮನೆಯಲ್ಲಿ ಒಣಮೀನಿನ 'ಸ್ಟಾಕ್' ಇರುತ್ತಿತ್ತು. ಅದು ನಾಲ್ಕೈದು ತಿಂಗಳು ಸಾಕಾಗುತ್ತಿತ್ತು. ಆದರೆ ಈ ವರ್ಷದ ಪಾಚುವರಿಯಲ್ಲಿ ಏನೇನೂ ಮೀನು ಸಿಕ್ಕಿರಲಿಲ್ಲ. ಸಿಕ್ಕಿದ ಒಂದ ಮಂಕರಿ ಮೀನನ್ನು ಆಗಲೇ ತಿಂದಾಗಿತ್ತು. ಒಂದೆರಡು ದಿನ ಅಳ್ಳಿ ಕುಂಚಗಳನ್ನು ಹೊಡೆದುಕೊಂಡು ಬಂದು ಅದನ್ನು ಸುಟ್ಟು ನೆಂಚಿಕೊಂಡಿದ್ದ ಸದ್ಯ ಈ ದಿನ ಆ ಏಡಿ ಕಂಡು ಅವನಿಗೆ ಏನಿಲ್ಲದ ಖುಷಿಯಾಗಿತ್ತು. ಮಾಡಬೇಕಾಗಿದ್ದ ತುರ್ತು ಕೆಲಸಗಳನ್ನೆಲ್ಲಾ ಬಿಟ್ಟು ಏಡಿ ಬೇಟೆಗೆ ಹೊರಟಿದ್ದ.

ಮಟಮಟ ಮಧ್ಯಾಹ್ನ ಉರಿಬಿಸಿಲು ಊರೆಲ್ಲಾ ಮರಗಿಡಗಳೆಲ್ಲಾ ಹಕ್ಕಿ ಪಕ್ಷಿಗಳೆಲ್ಲಾ ಕೆಲಸವಿಲ್ಲದೆ ತೆಪ್ಪಗೆ ತೂಕಡಿಸುವ ಹೊತ್ತು. ಇಂತಹ ಶುಭ ಸಮಯದಲ್ಲಿ ಮೀನುಗುಂಡಿ ಹೆಂಡತಿಗೆ ನಳ್ಳಿಕಾರ ಅರೆಯುವಂತೆ ಹೇಳಿ ಕಾಲುವೆ ಏರಿ ಮೇಲೆ ಹೊರಟ. ಹೋಗುವಾಗ ಕೊಂಚ ದೂರ ಕಾಲುವೆಯಲ್ಲಿಯೇ ನಡೆದು ನೋಡಿದಾಗ ನಾಲ್ಕಾರು ಹೆಗ್ಗನ್ನಳ್ಳಿ ಬಿಲಗಳು ಕಂಡವು. 'ಮೊದಲೇ ನೋಡಬೇಕಾಗಿತ್ತು. ಎಂತಾ ಎಡವಟ್ಟು ಕೆಲ್ಸ ಮಾಡಿಕೊಂಡೆ!' ಎಂದು ತನ್ನನ್ನೇ ತಾನೇ ಶಪಿಸುತ್ತಾ, ಏಟುತಿಂದ ಹೆಂಡತಿಗೆ ಸಂಕಟಪಡುತ್ತಾ ಮತ್ತೆ ಏರಿ ಹತ್ತಿ ಬೆಳಗ್ಗೆ ನೋಡಿದ ಬಿಲದ ಬಳಿಗೆ ನಡೆದ. ಏರಿಯ

ಮೇಲೆ ನಡೆದರೂ ಮೂರು ನಾಲ್ಕು ಅಡಿ ಕೆಳಗೆ ಬಿಲದಲ್ಲಿರುವ ಏಡಿಗೆ ಸದ್ದು ಗೊತ್ತಾಗಿ ಬಿಲ ಸೇರಿಬಿಡುತ್ತದೆ. ಅಷ್ಟು ಸೂಕ್ಷ್ಮ ಅವು. ಜಲಚರ ಪ್ರಾಣಿಗಳ ಸಕಲ ಸಂಗತಿಗಳನ್ನು ಚೆನ್ನಾಗಿ ಅರಿತ 'ಮೀನುಗುಂಡಿ' ಹೆಜ್ಜೆಯಮೇಲೆ ಹೆಜ್ಜೆ ಇಟ್ಟು ಬಿಲ ಇದ್ದ ಬಳಿಗೆ ಹೋಗಿ ಬಗ್ಗಿ ನೋಡಿದ. ಬಿಸಿಲು ಕಾಯಿಸಲು ಹೆಗ್ಗನಳ್ಳಿ ಹೊರಗೆ ಬಂದು ಒತ್ತಲಿಸಿದ ಮಣ್ಣಿನ ಮೇಲೆ ಕುಳಿತಿತ್ತು. ಅದರ ಕಣ್ಣುಗಳು ಕರೀಮಣಿಯಂತೆ ಬಿಸಿಲಿಗೆ ಹೊಳೆಯುತ್ತಿದ್ದುವು.

ಮೀನುಗುಂಡಿ ತನ್ನ ಕರಿ ಅಂಗಿ ಬಿಚ್ಚಿದ. ಅದನ್ನು ಹೊಲಿಸುವಾಗಲೇ ಅದು ಗುಂಡಿ ಕಂಡಿರಲಿಲ್ಲ. ಗುಂಡಿ ಹಾಕಿದರೂ ಅದು ವ್ಯರ್ಥ ಎಂದು ದರ್ಜಿ ಶಾಮಣ್ಣ ನನ್ನೂರ ಅನೇಕರ ಅಂಗಿಗಳಿಗೆ ಗುಂಡಿಯನ್ನೇ ಹಾಕುತ್ತಿರಲಿಲ್ಲ. ಇನ್ನು ಮೀನುಗುಂಡಿಯ ಅಂಗಿ ಅಗಸನ ಮನೆಗೆ ಹೋಗುತ್ತಿರಲೂ ಇಲ್ಲ. ಏಕೆಂದರೆ ಇದ್ದುದು ಇದೊಂದೇ ಅಂಗಿ. ಅದನ್ನು ಈ ಹೊತ್ತು ಒಗೆದರೆ ನಾಳೆಗೆ ಮತ್ತೆ ಬಗ್ಗಡ ಮೀನುವಾಸನೆಗಳ ನಂಟು. ಇದೆಲ್ಲಾ ಫಜೀತಿ ಏಕೆಂದು ಅದನ್ನು ಒಗೆಯುವ ಗೋಜಿಗೇ ಹೋಗುತ್ತಿರಲಿಲ್ಲ. ಹೀಗಾಗಿ ಅದು ಮೇಣದ ಬಟ್ಟೆಯಾಗಿತ್ತು. ಎಂತಹ ಮಳೆಯೂ ಅದಕ್ಕೆ ಕೆಂದುತ್ತಿರಲಿಲ್ಲ. ಇಂಥ ಅಂಗಿಯನ್ನು ಬಿಚ್ಚಿ ಏರಿಯ ಮೇಲಿಟ್ಟು ಮೀನುಗುಂಡಿ ಕಾಲುವೆಗೆ ಇಳಿದ. ಇದನ್ನು ಕಂಡು ಕೇಳಿದ ಏಡಿ ಸರಕ್ಕನೆ ಬಿಲದೊಳಕ್ಕೆ ಜಾರಿತು. ಕರಿಯ ಚಡ್ಡಿಯಲ್ಲಿ – ಅಂಗಿಯ ವರ್ಣನೆ ಮಾಡಿದಮೇಲೆ ಚಡ್ಡಿಯ ವರ್ಣನೆ ಅನಾವಶ್ಯಕ – ನಿಂತು ಸೂರ್ಯನ ಬೆಳಕಿನಲ್ಲಿ ಬಿಲದ ಒಳಭಾಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ. ಬಹಳ ದೂರ ಹೋಗಿತ್ತು ಬಿಲ. ಆ ಬಿಲದ ಅಗಲ ನೋಡಿದರೇ ಸಾಕು, ಅದರ ಯಜಮಾನ ಅಥವಾ ಯಜಮಾನಗಿತ್ತಿ ಭಾರಿ ಇರಬೇಕೆಂದು ಗೊತ್ತಾಗುತ್ತಿತ್ತು.

ಬಲಗೈಯಲ್ಲಿದ್ದ ಗಂಟುಮುರಿಯನ್ನು ಮೇಲಕ್ಕೆ ಎಳೆದು ಬಗ್ಗಿ ಬಿಲಕ್ಕೆ ಕೈಹಾಕಿದ. ಮೊಳಕ್ಕೆ ಪೂರ್ತ ಹೋದರೂ ಏನೂ ಸಿಕ್ಕಲಿಲ್ಲ. ಮತ್ತಷ್ಟು ಬಗ್ಗಿ ಕೈ ನೂಕಿದ. ಒತ್ತೋಳೂ ಸಾಲಲಿಲ್ಲ. ಸಿಟ್ಟು ಉಕ್ಕಿಬಂತು. ಒಳಗಿದ್ದ ಪ್ರಾಣಿಯ ಮೇಲೆ ಕಂಕುಳವರೆಗೂ ಕೈಹಾಕಿದ. ಅಲ್ಲಿಗೂ ಸಿಕ್ಕಲಿಲ್ಲ. ಸುತ್ತ ಬೆರಳಾಡಿಸಿದ. ಸಿಕ್ಕಿತು! ಇವನ ಕೈಗಲ್ಲ. ನಳ್ಳಿಯ ಹೆಗ್ಗೊಂಡಿಗಳಿಗೆ ಇವನ ಹೆಬ್ಬರಳು ಮತ್ತು ಕಿರುಬೆರಳು! ಕೊಂಚ ಮುಖ ಚುಳ್ಳಿಸಿದ ಅಷ್ಟೆ. ಉಳಿದ ಮೂರು ಬೆರಳುಗಳಿಂದ ಏಡಿಯ ಮೈಯನ್ನು ಅದುಮಿ ಹಿಡಿದು ನಿಧಾನವಾಗಿ ಅದನ್ನು ಹೊರಕ್ಕೆ ಎಳೆದ. ಏಡಿಯ ಸಮೇತ ಕೈ ಹೊರಗೆ ಬಂದಿತು, ರಕ್ತ ಸೋರುತ್ತಿತ್ತು. ಅದರೇನು? ಅವನ ಜೀವಮಾನದಲ್ಲಿ ಅಷ್ಟು ಭಾರಿಯಾದುದನ್ನು ನೋಡಿರಲಿಲ್ಲ.

ಕಾಲುವೆಯಲ್ಲಿಯೇ ನಿಂತು ಕೈಬಿಡಿಸಿಕೊಂಡರೆ ಏಡಿ ಎಲ್ಲಿ ಬಿಲ ಸೇರಿ ಬಿಡುತ್ತೋ ಎಂದು ಏರಿ ಹತ್ತಿ ಕೊಂಡಿಗಳನ್ನು ಎಡಗೈಯಿಂದ ಬಿಡಿಸಲು ಪ್ರಯತ್ನಪಟ್ಟ ಆದರೆ ಆಗಲಿಲ್ಲ. ಅಂಗಿಯನ್ನು ಎಡಗೈಯಲ್ಲಿ ಹಿಡಿದು ಏಡಿ ಬಲಗೈಯಲ್ಲಿ ಊರಿಗೆ ಬಂದ. ಮನೆಯ ಬಳಿ ಅವರ ಅಣ್ಣ ಪೂಜಾರಿ ಕರಿಯಣ್ಣ ಕುಳಿತಿದ್ದ. ಕರಿಯಣ್ಣನಿಗೂ ಮೀನು ಮಿಡಚೆ ಎಂದರೆ ಆಸೆ. ಆದರೆ ತಮ್ಮನಷ್ಟು ಇರಲಿಲ್ಲ. ಏಡಿಯ ಕೈ ತಮ್ಮನನ್ನು ನೋಡಿ "ಇದೇನೊ ಎಂತಾ ಹೆಗ್ಗನಳ್ಳಿ ಹಿಡಕಂಡು ಬಂದಿದೀಯಾ?" ಎನ್ನಲು, "ಅಣ್ಣೋ ಅದೇ ನನ್ನಿಡಕಂಡುಬುಟ್ಟದೆ. ಸ್ವಲ್ಪ ಕಿತ್ತಾಕು!" ಎಂದ ಮೀನುಗುಂಡಿ. ಕರಿಯಣ್ಣ ಬಲು ಶಕ್ತಿವಂತ. ರಂಗದಲ್ಲಿ ಬಿದ್ದಿರುವ ಕಾರಬ್ಬದ ಭಾರಿ ಗುಂಡನ್ನು ಸಲೀಸಾಗಿ ಎತ್ತಿ ಹಿಂದಕ್ಕೆಸೆಯಬಲ್ಲ. ಅವನಿಗೆ ಈ ಏಡಿ ಎದುರೆ? ಎಡಗೈಯಲ್ಲಿ ಕಿತ್ತೆಸೆಯಬಹುದೆಂದು ಭಾವಿಸಿ ಆ ಕೈಯಿಂದ ಕಿತ್ತು ನೋಡಿದ. ಊಹುಂ! 'ಎಲಾ ಇವ್ನಾ!' ಎನ್ನುತ್ತಾ ಬಲಗೈ ಹಾಕಿದ ಬಲವಾಗಿ ಎಳೆದ. ಮೀನುಗುಂಡಿ 'ಅಯ್ಯಯ್ಯೋ!' ಎಂದು ಕಿರಿಚಿದ. ಅದರ ಕೊಂಡಿಗಳು ಬೆರಳ ಮಾಂಸವನ್ನು ಕೊರೆದು ಮೂಳೆಯನ್ನು ಕಚ್ಚಿ ಹಿಡಿದಿದ್ದುವು. ಬೆಳ್ಳನೆಯ ಮಾಂಸ ಕಣ್ಣಿಗೆ ಕಾಣುತ್ತಿತ್ತು. ಈಗ ಮಾಡುವುದೇನು? ನಳ್ಳಿಯ ಮೈಯನ್ನು ಎರಡು ಕೈಯಲ್ಲೂ ಬಲವಾಗಿ ಹಿಡಿದು ತಿರಿಚಿದ. ಕೊಂಡಿಗಳು ಲಟಲಟನೆ ಮುರಿದವು. ದೇಹದಿಂದ ಕೊಂಡಿಗಳು ಬೇರೆಯಾದವು. ಆದರೆ ಕೊಂಡಿಗಳು ಹೆಬ್ಬೆರಳು ಕಿರುಬೆರಳುಗಳಲ್ಲೇ ಉಳಿದವು. ನಳ್ಳಿಯ ದೇಹ ಏನೆಲ್ಲಾ ಅಂದರೂ ಒಂದು ಪಾವು ತೂಗುತ್ತಿತ್ತು. ಮೀನುಗುಂಡಿ ತನ್ನ ಮಗ ಚೊಟ್ಟಗಾಲ ಮುದ್ದನಿಗೆ, 'ಲೇ ಮಗಾ, ಇದ ತಕ್ಕೊಂಡ್ಹೋಗಿ ನಿಮ್ಮವ್ವಿಗೆ ಕೊಡ್ಲಾ!' ಎಂದಾಗ ಆಗಲೇ ಸುತ್ತ ನೆರೆದಿದ್ದ ಜನ ನಗದೆ ಇರಲಾಗಲಿಲ್ಲ.

ಇನ್ನು ಬೆರಳಲ್ಲೇ ಉಳಿದ ಕೊಂಡಿಗಳನ್ನು ತೆಗೆಯುವುದು ಹೇಗೆ? ಕಲ್ಲು ಮೇಲಿಟ್ಟು ಜಜ್ಜಿದರೋ? ಜಜ್ಜಬಹುದು. ಆದರೆ ಹಾಗೆ ಜಜ್ಜುವಾಗ ಬೆರಳೇ ಜಜ್ಜಿ ಹೋದರೆ? ಅದಕ್ಕಿಂತ ಹೆಚ್ಚಾಗಿ ಆ ದಡಿಕೊಂಡಿಗಳಲ್ಲಿರುವ ಬಿಳಿಯ ತಿರುಳು ಹಾಳಾಗಿ ಹೋಗುವುದಲ್ಲಾ! ಅವೆರಡರಿಂದ ಒಂದು ಪಾವಿಗಿಂತ ಹೆಚ್ಚು ಎಂದೇ ಮೀನುಗುಂಡಿಯ ಲೆಕ್ಕಾಚಾರ! ಅಲ್ಲಿಯೇ ಇದ್ದ ನನ್ನೂರ ಹೆಣ್ಣಿಂಗ ಉರುಫ್ ಚಾರ್ಲಿಚಾಪ್ಲಿನ್, "ಈಗಾ ಒಂದ್ಕೆಲ್ಸ ಮಾಡಾನ, ಇಕ್ಕಳದಲ್ಲಿ ಹಿಗ್ಗಿಸಿಬುಡಾನ, ನಡೀರಿ ನಮ್ಮ ಆಯ್ತೀ ಆಚಾರ್‍ರತ್ರ" ಎಂದು ಹೊಸ ಸಲಹೆ ಮಾಡಿದ. ಒಳ್ಳೆಯ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು.

ಸರಿ, ಲಕ್ಕಮ್ಮನ ಗುಡಿಯ ಬಳಿ ಇದ್ದ ಆಯ್ತೀ ಆಚಾರ್‍ರ ಮನೆಗೆ ಹೋದರು. ಅವರಾಗಲೇ ಮಧ್ಯಾಹ್ನದ ಉರಿಬಿಸಿಲು ತಾಳಲಾರದೆ ನಡುಮನೆಯಲ್ಲಿ ಮಲಗಿಬಿಟ್ಟಿದ್ದರು. ಅವರನ್ನು ಎಚ್ಚರಿಸುವುದು ಸುಲಭವಾದರೂ ಅವರನ್ನು

ಎಬ್ಬಿಸಿ ಹೊರಗೆ ಬರುವಂತೆ ಮಾಡುವುದು ತುಂಬಾ ಕಷ್ಟವಾಯಿತು. ಹಳೆಯ ಶರೀರ. ಜೀವವಾಗಿದ್ದ ಅಸ್ತಿಪಂಜರವೆಂದರೆ ಅವರೊಬ್ಬರದೇ. ಅಂತೂ ಬಂದರು – ಉಟ್ಟಪಂಚೆಯ ಕುಲುಮೆಹಟ್ಟಿ ವಾಸನೆಯನ್ನು ಎಲ್ಲರಿಗೂ ಬೀರುತ್ತ. ಇಷ್ಟರಲ್ಲಿ ಕರಿಯಣ್ಣ ಮೂರು ಸಲ ಕೂಗಿದ್ದ. 'ಬಾರ್‍ಮಾವಯ್ಯ ಜಲ್ದೀಯ. ಹೆಗ್ಗನಳ್ಳಿ ಕೊಂಡಿ ಬೆಳ್ಳ ಕಚ್ಚಿಕೊಂಡು ಬುಟ್ಟಿವೆ, ಬುಡಸ್ಬೇಕು!' ಎಂದು. ಇದ್ಯಾವುದೂ ಅವರಿಗೆ ಕೇಳಿಸಿರಲಿಲ್ಲ. ಏಕೆಂದರೆ ಕಿವಿಗಳು ತಮ್ಮ ಕೆಲಸ ಮುಗಿಸಿ ಎಷ್ಟೋ ವರ್ಷಗಳಾಗಿದ್ದವು. ಅವರ ಮಗಳು 'ಪೂಜಾರಿ ಕರಿಯಣ್ಣ ಕೂಗ್ತಾನೆ' ಎಂದು ಕಿವಿಯಲ್ಲಿ ಹೇಳಿ ಅದೂ ಗೊತ್ತಾಗದೆ ಹೊರಗೆ ಬಂದರು. ಬಂದವರು 'ಇದೇನೋ ಕರಿಯಣ್ಣ ಆಯ್ತೇ, ಇದೇನು, ರಕ್ತ?" ಎಂದು ಕೇಳಿದರು.

ಕರಿಯಣ್ಣ ಹೇಳಿದ ಕಾರಣ ಏನು ಎಂದು. ಆದರೆ ಕೇಳಿಸಲಿಲ್ಲ. ತಮ್ಮ ಮೀನುಗುಂಡಿಯ ಕೈ ಮುಂದಕ್ಕೆ ಚಾಚಿ ಇಕ್ಕಳದಲ್ಲಿ ಕಿತ್ತುಹಾಕಬೇಕೆಂದು ಸನ್ನೆ ಮಾಡಿ ತಿಳಿಸಿದ. ಆದರೆ ಅದು ನಮ್ಮ ಆಚಾರ್‍ರಿಗೆ ಅರ್ಥವಾಗದೆ, "ಇದ್ರಲಿ ಯಾವೊಡವೆ ಮಾಡಸ್ಬೇಕು ಅಂತಾ? ಆಯ್ತೇ" ಎಂದು ಕೇಳಿದಾಜಿಗೆ ಮೀನುಗುಂಡಿಯೂ ನಕ್ಕುಬಿಟ್ಟ!

"ಇದ ಕಿತ್ತುಕೊಡಿ ಮಾವಯ್ಯ ಸಟಾಗಿ!"

"ಕಿತ್ತುಕೊಡ್ಬೇಕಾ! ಆಯ್ತೆ. ಯಾಕೆ, ಕೈಯ್ಲಿ ಕೀಲಾಕಾಕ್ಕಿಲ್ವೆ? ಆಯ್ತೇ."

"ಆಗಾಕಿಲ್ಲ. ನಾನಾಗ್ಲೇ ಕಿತ್ತುನೋಡ್ದೆ."

"ಕಿತ್ತು ನೋಡ್ದಾ, ಆಯೆ ಆಗ್ಲಿಲ್ವೇ, ಆಯ್ತೆ, ಇಕ್ಳದಲಿ ಕಿತ್ತು ಕೊಡ್ಬೇಕೇ? ಆಯ್ತೆ. ಎಲ್ಲೀವು ಈ ಕೊಂಡಿ? ಆಯ್ತೇ."

"ನಳ್ಳೀವು! ನಳ್ಳೀವು!"

"ಹಳ್ಳೀವಾ? ಯಾವ್ಹಳ್ಳೀ? ಆಯ್ತೇ"

"ಹಳ್ಳೀವಲ್ಲಾ, ನಳ್ಳೀವು"

"ನಳ್ಳೀವಾ, ಆಯ್ತೆ ಹಂಗನ್ನು ನಳ್ಳೇಲ್ಲೀ? ಆಯ್ತೆ"

"ಅದಿಲ್ಲಾ"

"ನಳ್ಳಿಲ್ದೇ ಕೊಂಡ್ಯಂಗೆ ಬಂದೊ! ಆಯ್ತೆ, ಯಂಗೆ ಬಂದೊ! ಆಯ್ತೇ"

"ಅದು ಅಲಾಯ್ದ ಕಿತ್ತಾಕಿಬುಟ್ಟೆ ಬರಿ ಕೊಂಡ್ಯುಳಕೊಂಡವೆ!"

ಪೂಜಾರಿ ಕರಿಯಣ್ಣ ಆಚಾರ್ರ ಕಿವಿಗೆ ಬಾಯಿ ಹಾಕಿ ಕೂಗಿದ.

"ಬರಿ ಕೊಂಡ್ಯುಳಕೊಂಡವಾ? ಆಯ್ತೇ ಎಂತಾ ನಳ್ಳಿ – ಹೆಣ್ಣಳ್ಳೋ ಗಂಡ್ನಳ್ಳೋ?"

"ಗಂಡ್ನಳ್ಳೀ ... ಅದ್ಯಾವ್ದಾರ ಆಗ್ಲಿ ಕಿತ್ತುಕೊಡಿ ಮಾವಯ್ಯ ಜಾಗ್ರತೆ. ಸತ್ತೋರ ಹಲ್ಲು ಗಿಟಕರಕೊಂಡ್ಹಂಗೆ ಗಿಟಕರಕೊಂಡವೆ."

ಇಷ್ಟೆಲ್ಲಾ ಕರಿಯಣ್ಣನ ಸನ್ನೆ ಆಚಾರ್ರ ಮಾತಿನಲ್ಲಿ ನಡೆದ ಸಂಭಾಷಣೆ. ಆಚಾರ್ರು ಇಕ್ಕಳ ತರಲು ಒಳಕ್ಕೆ ಹೋಗಿಬರಲು ಹತ್ತು ನಿಮಿಷ ಮಾಡಿದರು. ಹಾಗೆಯೇ ಹಿತ್ತಲಕಡೆಗೂ ಹೋಗಿಬಂದರು. ಬಂದವರು ಅಡಿಗಲ್ಲಿನ ಮುಂದೆ ಕುಕ್ಕರಗಾಲಲ್ಲಿ ಕುಳಿತು ಅದರ ಮೇಲೆ ಉರಿಗಡ್ಡಿ ಇಟ್ಟು ತೋರಿದ ಕಡೆ ಕೈ ಇಡುವಂತೆ ಸನ್ನೆ ಮಾಡಿದರು. ಹಿಂದು ಮುಂದು ನೋಡುತ್ತಿದ್ದ ಮೀನುಗುಂಡಿಗೆ "ಇಡೋ, ಆಯ್ತೇ, ಇಡು.ಹೆದರಿಕೋಬ್ಯಾಡ ಇಡು, ಆಯ್ತೇ ಇಡು" ಎಂದರು.

ಹಾಗೂ ಅಂಜುತ್ತಿದ್ದ ಮೀನುಗುಂಡಿಯ ಕೈಹಿಡಿದು ಅಣ್ಣ ಕರಿಯಣ್ಣನೇ ಕೈ ಎಳೆದು ಅಡಿಗಲ್ಲಿನ ಮೇಲಿಟ್ಟು ಭದ್ರವಾಗಿ ಹಿಡಿದುಕೊಂಡ. ಆಚಾರ್ರು ಬರಿಗಣ್ಣಲ್ಲಿ ಬಗ್ಗಿ ನೋಡಿದರು. ಏನೂ ಕಾಣಿಸಲಿಲ್ಲ. ಮಗಳಿಗೆ ಕೂಗಿ ಹೇಳಿದರು. 'ಪಾರ್ವತಿ, ಸುಲೋಚನ ತಕ್ಕೊಂಡ್ಬಾಮ್ಮ, ಆಯ್ತೇ, ಸುಲೋಚ್ನ ತಕ್ಕೊಂಡು ಬಾ' ಎಂದು. ಸುಲೋಚನ ಬಂತು. ಅಂಗಡಿಯಿಂದ ತರಿಸಿದಾಗ ಇದ್ದ ಸುಲೋಚನದ ಭಾಗಗಳಲ್ಲಿ ಗಾಜುಗಳೆರಡು ಮಾತ್ರ ಇದ್ದವು. ಉಳಿದವುಗಳನ್ನು ಆಚಾರ್ರೇ ಮಾಡಿ ಹಾಕಿದ್ದರು. ಅದನ್ನು ಕಿವಿಗೆ ತೊಡರಿಸಿ, ಕನ್ನಡಕ ಮೂಗಿಗೆ ಏರಿಸಿ, ಅದರ ಮೇಲಿನಿಂದ ಮತ್ತು ಕೆಳಗಿನಿಂದ ನೋಡಿ, ಕೊಂಡಿಗಳನ್ನು ಯಾವ ಜಾಗದಲ್ಲಿ ಹಿಡಿದು ಹಿಗ್ಗಲಿಸಬೇಕೆಂದು ಪರೀಕ್ಷೆ ಮಾಡಿ, ಅದು ಸಾಧ್ಯವಿಲ್ಲ ಎಂದಾಗ ಇಡೀ ಕೊಂಡಿಯನ್ನೇ ಕಿತ್ತು ಎಳೆದು ಬಿಸಾಕಿ ಬಿಡುವ ಮನಸ್ಸು ಮಾಡಿದರು. ಅದಕ್ಕೆ ಸಣ್ಣ ಇಕ್ಕಳ ಸಾಕೆಂದು ಅದನ್ನು ತರಿಸಿದರು. ಅದರಲ್ಲಿ ಒಂದು ಕೊಂಡಿಯನ್ನು ಹಿಡಿದು ಎರಡು ಕೈಯಲ್ಲೂ ಇಕ್ಕಳ ಹಿಡಿದು ತಮ್ಮ ಇಡೀ ಅಸ್ತಿಪಂಜರದ ಸಕಲ ಭಾಗಗಳನ್ನೂ ತೋರಿಸಿ ಹಲ್ಲು ಮಂಡಿ ಕಚ್ಚಿ ಎಳೆದರು. ಹಾಗೆ ಎಳೆದಾಗ ನಳ್ಳಿಯ ಒಂದಿಷ್ಟು ಭಾಗ ಕಿತ್ತು ಬಂದು ಹಿಂದಕ್ಕೆ ಧಡಾರನೆ ಬಿದ್ದು ಬಿಟ್ಟರು. ಪೂಜಾರಿ ಕರಿಯಣ್ಣ ಅವರನ್ನು ಎತ್ತಿ ಕುಳ್ಳಿರಿಸಿದ. ಆಚಾರ್ರು ಸುಧಾರಿಸಿಕೊಂಡರು.

ಅವರಿಗೆ ಈಗ ಹಟ ಬಂದು ಬಿಟ್ಟಿತ್ತು, ಕಿತ್ತೇ ತೀರಬೇಕೆಂದು. “ಈರಭದ್ರಾ ಚಾರೀತ ಹೋಗಿ, ಆಯ್ತೇ, ಹೆಗ್ಗಿಕ್ಕ ಈಸಿಕೊಂಡು ಬನ್ನಿ ಮತ್ತೆ, ಆಯ್ತೇ. ಈ ಸಣ್ಣಿಕ್ಕದಲಿ ಬರೋದಿಲ್ಲ ಆಯ್ತೆ” ಎಂದರು.

ಕುಲುಮೆ ಹಟ್ಟಿಗೆ ಹೋಗಿ ಅಲ್ಲಿಂದ ಹೆಗ್ಗಿಕ್ಕಳ ತಂದು, ಅದನ್ನು ಆಚಾರ‍್ರ ಕೈಗೆ ಕೊಟ್ಟು ಅವರಿಂದ ಅದನ್ನು ಸರಿಯಾಗಿ ಹಿಡಿಸಿ, ಮತ್ತೊಮ್ಮೆ ಕೀಳುವಾಗ ಅವರು ಇನ್ನೊಂದು ಸಲ ಬಿದ್ದು ಮೂಳೆ ಕೀಲು ತಪ್ಪಿ ಹೋದರೆ ಗತಿಯೇನೆಂದು ಯೋಚಿಸಿದ ಕರಿಯಣ್ಣ ಮೀನು ಗುಂಡಿಯ ಕೈಗಳನ್ನು ಅಲ್ಲಿಗೇ ಸಾಗಿಸುವುದೊಳ್ಳೆಯದೆಂದು ತೀರ್ಮಾನಿಸಿ “ಅಲ್ಲಿಗೇ ಹೋಯ್ತೀವಿ ಮಾವಯ್ಯಾ” ಎಂದ.

“ಅದಯಾಕಲ್ಲಿಗ್ಹೋಗ್ಬೇಕು, ಆಯ್ತೇ ತಡಿ ಚಾಣ ಸುತ್ತಿಗೇಲಿ ಕೆಲ್ಸಾ ಮಾಡಿ ಕೊಡ್ತೀನಿ ಆಯ್ತೆ. ಅದು ಸಲೀಸು ಆಯ್ತೇ” ಎಂದರು ಆಚಾರ‍್ರು.

ಇದು ಅಚಾರ‍್ರ ಕೈಲಿ ಆಗುವ ಕೆಲಸವಲ್ಲಾ ಎಂದು ಕರಿಯಣ್ಣ ಎದ್ದು ತಮ್ಮನ ಕೈ ಹಿಡಿದು, ಇಷ್ಟರಲ್ಲಿ ಊರಿಗೆಲ್ಲಾ ಸುದ್ದಿ ಹಬ್ಬಿ ಸೇರಿದ್ದ ಊರಿನ ಅರ್ಧ ಜನರ ಸಮೇತ ಈರಭದ್ರಾಚಾರಿ ಕುಲುಮೆ ಹಟ್ಟಿಗೆ ನಡೆದ. ಆ ಕುಲುಮೆ ಹಟ್ಟಿಯಲ್ಲಿ ಯಾವತ್ತೂ ಅಷ್ಟು ಜನ ಸೇರಿರಲಿಲ್ಲ. ಈರಭದ್ರಾಚಾರಿ ಕೊಡಲಿ ಮಾಡುವ ಕೆಲಸದಲ್ಲಿ ತೊಡಗಿದ್ದ. ಬೆಂಕಿಯಲ್ಲಿ ಕಾಯಿಸಿ ಗಣಗಣಿಸುತ್ತಿದ್ದ ಕಬ್ಬಿಣದ ತುಂಡನ್ನು ಆಚಾರಿ ಕಬ್ಬಿಣದ ಉರಿಗಡ್ಡಿಯಿಂದ ತೋರಿಸದ ಕಡೆ ಇಬ್ಬರು ದೊಡ್ಡ ದೊಡ್ಡ ಸುತ್ತಿಗೆಗಳಿಂದ ಢಮಾ ಢಮಾ ಎಂದು ಏಟು ಹಾಕುತ್ತಿದ್ದರು. ಇಡೀ ಊರೇ ತನ್ನ ಹಟ್ಟಿಗೆ ಬಂದಾಗ ಆಚಾರಿ ತನ್ನ ಕೆಲಸ ನಿಲ್ಲಿಸಿ ವಿಷಯ ಏನಿರಬೇಕೆಂದು ಅಚ್ಚರಿಯಿಂದ ನೋಡಿದ ಎಲೆ ಹಾಕಿ ಕೆಂಪಾದ ಹಲ್ಲುಗಳನ್ನು ಬಿಟ್ಟುಕೊಂಡು.

ಕರಿಯಣ್ಣ ವಿಷಯ ಏನೆಂದು ಹೇಳಬೇಕಾಗಿರಲಿಲ್ಲ. ಮೀನುಗುಂಡಿಯನ್ನು ನೋಡಿದ ಕೂಡಲೇ ಈರಭದ್ರಾಚಾರಿಗೆ ಅರ್ಥವಾಯಿತು ನಡೆದ ಸಂಗತಿ. ಹೆಚ್ಚು ಮಾತಿಲ್ಲದೆ ಹೆಗ್ಗಿಕ್ಕಳವನ್ನು ಕೈಗೆ ತೆಗೆದುಕೊಂಡ. ಅದರ ಬಾಯಗಲಿಸಿ, ಎಲ್ಲಿ ಹಿಡಿಯಬೇಕು ಎಂದು ಸೂಕ್ಷ್ಮವಾಗಿ ನೋಡಿ ಇಕ್ಕಳ ಹಾಕಿದ. ಎರಡೂ ಕೈಯಲ್ಲೂ ಎಳೆದು ನೋಡಿದ. ಈರಭದ್ರಾಚಾರಿ, ಆಯಿತೇ ಆಚಾರ‍್ರ ಹಾಗೆ ತರ ಕಟಾಲು ಮನುಷ್ಯ ಅಲ್ಲ. ಆದರೂ ಅವನಿಗೂ ಜುಮ್ಮೆನ್ನಲಿಲ್ಲ. ‘ಬಾರೋ ಕರಿಯಣ್ಣ ನೀನೂವೆ, ಎಳಿಯಾನ’ ಎಂದು ಕರಿಯಣ್ಣನನ್ನು ಕರೆದು ಅವನಿಗೊಂದು ಕೈ ಕೊಟ್ಟು ತಾನೊಂದು ಹಿಡಿದು ‘ಹೂಂ!’ ಎಂದು ಹೂಂಕರಿಸಿ ಒಂದೇ ಸಲ ಎಳೆದರು. ಕಿರುಬೆರಳನ್ನು ಕಚ್ಚಿದ್ದ ಕೊಂಡಿ ಅರ್ಧ ಬೆರಳಿನ ಸಮೇತ ಕಿತ್ತು ಬಂತು! ‘ಅಯ್ಯಯ್ಯೋ! ಅಯ್ಯಯ್ಯಪ್ಪೋ!’ ಎಂದು ಎಡಗೈಯಿಂದ ಬಾಯಿ ಬಡಿದು ಕೊಳ್ಳಲಾರಂಭಿಸಿದ ಮೀನುಗುಂಡಿ. ಈ ಕೂಗು ಕೇಳಿ ಊರಿನ ಉಳಿದರ್ಧ ಜನ ನೆರೆದರು.

ನೆರೆದ ಹತ್ತಾರು ತಲೆಗಳು ಹತ್ತಾರು ಬಗೆಯಲ್ಲಿ ಯೋಚನೆ ಮಾಡಲಾರಂಭಿಸಿದವು. ಒಬ್ಬೊಬ್ಬರು ಒಂದೊಂದು ಸಲಹೆ ಮಾಡಿದರು.

‘ಕಿರುಬೆರಳ ಕಿತ್ತಂಗೆ ಹೆಬ್ಬೆರಳ್ನೂ ಕೀಳೋದೊಳ್ಳೇದು. ಊರ ನಳ್ಳೀ ಬಿಲ ಒಂದ್ನೂ ಬುಡ್ತಾ ಇಲ್ಲ ಈ ಮೀನು ಗುಂಡಿ. ಬಾಣಂತೀರಿಗೆ ಕಷಾಯ ಕಾಯ್ಸಿ ಕೊಡಾನ ಅಂದ್ರೂ ಒಂದು ಕಿರ‍್ನೆಳ್ಳೂ ಸಿಕ್ದಂತೆ ಮಾಡ್ತಾನೆ. ಇವ್ನ ಮನೆ ಹಾಳಾಗ. ಕಿತ್ತಾಕಿ ಆ ಬೆಳ್ನೂ! ಹೆಬ್ಬೆಳ್ಳಿದ್ರೆ ತಾನೆ ಇವನ ಕೈ ಆಟ ಎಲ್ಲಾ!’ ಈ ಸಲಹೆ ಮಾಡಿದವನು ನನ್ನೂರ ಅಮಾನಿಗೌಡ.

‘ಬ್ಯಾಡಿ, ಬ್ಯಾಡಿ. ಅಂಗ್ಮಾಡೋದು ಬ್ಯಾಡ. ಈಗೊಂದು ಕೆಲ್ಸ ಮಾಡಾನ. ಕೊಂಡಿ ಬುಟ್ಟು ಉಳದಕೆಲ್ಲಾ ಸಗಣಿ ಮೆತ್ತಿ ಬುಟ್ಟು ಬೆಂಕೀಲಿ ಕಾಯ್ಸಿದ್ರೆ ಸಾಕು. ಕೊಂಡಿ ಅದರಷ್ಟಕದೇ ಬುಟ್ಟು ಕೊತ್ತದೆ!’ ಎಂದು ನನ್ನೂರಿನ ತೆನಾಲಿ ರಾಮಕೃಷ್ಣನ ಸಲಹೆ.

‘ಏನೂ ಮಾಡೋದು ಬ್ಯಾಡಿ. ಸುಮ್ನೆ ಹಂಗೆ ಬುಟ್ಬಿಡಿ, ಅದರಷ್ಟಕೆ ಅದೆ ಕೊಳತು ಬಿದ್ಹೋಯ್ತದೆ!’ ಇದು ಹಜಾಮರ ಬಾಳನ ಸಲಹೆ.

‘ಉಳಿ ಸುತ್ತಿಗೆ ತಕ್ಕೊಂಡು ಒಂದು ಕಡಿಂದ ಕೊಚ್ಚಿದರೆ ಹ್ಯಂಗೆ?’ ಇದು ಅಗಸರ ತಿಮ್ಮನ ಸಲಹೆ. ಇದ್ದುದರಲ್ಲಿ ಇದೇ ಒಳ್ಳೆಯ ಸಲಹೆ ಆಗಿತ್ತು. ಆದರೆ ಅಗಸನ ಸಲಹೆ ಎಂದು ತಾತ್ಸಾರವಾಗಿ ಕಂಡ ಅಮಾನಿಗೌಡ, ‘ಎಲಾ ಬುಟ್ಟು ಈ ಅಗಸಗಿತ್ತಿ ಮಾತ ಕೇಳಿ ಬೆಳ್ಳು ಕಳಕೋ ಬಾರ್ದು’ ಹೊಲೆ ಶ್ಯಾಲೆ ಒಗಿಯೋ ಅಗಸನಿಗೇನು ಗೊತ್ತಾದತ್ತು, ಇದ ಕೀಳೋ ಸಂದರ್ಪ? ಸುಮ್ಕನಿರ್ಲೇ ಅಗಸ!’ ಎಂದು ಗದರಿಸಿದ ಅಮಾನಿಗೌಡ, ಈರಭದ್ರಾಚಾರಿಗೆ ‘ಸುತ್ತಿಗೆ ಕೊಡೋ ಇಲ್ಲಿ’ ಎಂದ.

ಈರಭದ್ರಾಚಾರಿ ದೊಡ್ಡ ಸುತ್ತಿಗೆ ಕೊಟ್ಟ 'ಇದಲ್ಲ ಕಣೋ ಆಚಾರಿ, ಸಣ್ಣದು ಕೊಡೋ!' ಎಂದು ಸಣ್ಣ ಸುತ್ತಿಗೆ ಈಸಿಕೊಂಡು 'ಲೇ ಪುಕ್ಲು ಪೂಜಾರಿ! ದಡ್ಡೂಸ!' ಹಾಗೆ ಹೀಗೆ ಎಂದು ನೂರಾರು ನಾಮಗಳಿಂದ ಮೀನುಗುಂಡಿಯನ್ನು ಬೈಯುತ್ತಾ ಅಂಜುತ್ತಿದ್ದ ಅವನ ಕೈಹಿಡಿದು ಎಳೆದು ಅಡಿಗಲ್ಲಿನ ಮೇಲಿಟ್ಟು 'ಭದ್ರಾಗಿ ಹಿಡು ಕೊಳ್ಳಾ ಇದ ಕರಿಯ!' ಎಂದು ಕರಿಯಣ್ಣಗೆ ಅಬ್ಬರಿಸಿ ಹೇಳಿ ಸುತ್ತಿಗೆಯಿಂದ ಅದನ್ನು ಜಜ್ಜುವುದು ಅಷ್ಟು ಸುಲಭವಾಗಲಿಲ್ಲ. 'ಉಳಿ ಕೊಡೋ ಇಲ್ಲಿ ಆಚಾರಿ!' ಎಂದು ಉಳಿ ಕೇಳಿದ ಅಮಾನಿಗೌಡ.

'ಮತ್ತೆ ನಾನು ಹೇಳಿದ್ದು ಹಂಗೇ ಅಲ್ವೇ?' ಎಂದ ಅಗಸರ ತಿಮ್ಮ.

'ಸುಮ್ಮನಿರ್ಲೇ ಅಗಸ್ತೀ!' ಎಂದು ಗದರಿಸಿ ಅಮಾನಿಗೌಡ ಮೀನುಗುಂಡಿಯ ಬೆರಳಿನ ಮೇಲೆ ಬಡಗಿ ಕೆಲಸ ಮಾಡಲಾರಂಭಿಸಿದ. ಹೊಸದಾಗಿ ಉಳಿ ಸುತ್ತಿಗೆ ಹಿಡಿದ ಕೈಗಳು. ಅಡ್ಡಾದಿಡ್ಡಿ ಏಟುಗಳು ಬಿದ್ದವು. ಆ ಏಟುಗಳ ನೋವು ತಡೆಯಲಾರದೆ ಮೀನುಗುಂಡಿ 'ಯಪ್ಪೋ! ಯವ್ವೋ!' ಎಂದು ಗೋಳಾಡಿದ.

'ಯಪ್ಪನಂತೆ! ಯವ್ವನಂತೆ! ನಿಮ್ಮಜ್ಜಿ...! ನಿಮ್ಮಮ್ಮ...!' – ಹೀಗೆಲ್ಲಾ ಅನ್ನುತ್ತಾ ಅಮಾನಿಗೌಡ ಕಷ್ಟಪಟ್ಟು ಕೊಂಡಿ ಬಿಡಿಸಿದ. ಬೆರಳು ಮಾಂಸ ಕಚ್ಚಿಕೊಂಡಿದ್ದ ಚೂರಾದ ಕೊಂಡಿಯನ್ನು ಮೀನುಗುಂಡಿಯ ಕಡೆಗೆಸೆದು, 'ತಿನ್ನೊ ನಳ್ಳಿಯಾ! ನಿನ್ಮನೆ ಹಾಳಾಯ್ತು!' ಎಂದು ಆ ಕಡೆ ಸುಸ್ತಾಗಿ ಕುಳಿತ.

ಅಲ್ಲಿದ್ದವರಲ್ಲಿ ಹಸುರೌಷಧಿ ಬಲ್ಲ ಕಡೇ ಕೇರಿ ಕಾಡಮ್ಮ ಆಗಲೇ ಎಂತದೋ ಬೇಲಿ ಮೇಗಲ ಸೊಪ್ಪು ತಂದು ಕೈಯಲ್ಲಿ ಒಸಗಿ ಹಳೆ ಬಟ್ಟೆಯಲ್ಲಿ ಬೆರಳಿಗೆ ಸುತ್ತಿದಳು. ಮೀನುಗುಂಡಿ ತನ್ನ ಕಿರುಬೆರಳು ಮತ್ತು ಅದನ್ನು ಕಚ್ಚಿಕೊಂಡಿದ್ದ ನಳ್ಳಿಕೊಂಡಿಯ ಸಮೇತ ಮನೆಗೆ ನಡೆದು ಹೆಂಡತಿಗೆ ಹೇಳಿದ. 'ಒಳ್ಳೇ ನಳ್ಳೀ ಪಜ್ಜಿ ಮಾಡೇ ಈವತ್ತು!' ಎಂದು.

ಹೆಂಡತಿ ನಳ್ಳಿ ಪಜ್ಜಿ ಮಾಡಿದಳು. ಮೀನುಗುಂಡಿ ಕಿರುಬೆರಳನ್ನೂ ಬೇಯಿಸಿ ತಿಂದ ಬಾಡಿನ ಆಸೆಗೆ ಎಂದು ಕೆಲವರೂ ಇಲ್ಲ ಎಂದು ಕೆಲವರೂ ಮಾರನೆಯ ದಿನ ಕುಲುಮೆ ಹಟ್ಟಿಯಲ್ಲಿ ಕುಳಿತು ಮಾತಾಡುತ್ತಿದ್ದರು. 'ತಿಂದರೇನಂತೆ? ಎಲ್ಲಾ ಬಾಡಿನ ರುಚಿ ನೋಡಿದ ಅವನಿಗೆ ತನ್ನ ಕಿರುಬೆರಳಿನ ರುಚಿ ನೋಡಿದರೇನು ತಪ್ಪು!' ಎಂದು ಕೆಲವರು ವಾದ ಮಾಡಿದರು. ಅದು ಹೇಗಾದರೂ ಇರಲಿ, ಮೀನುಗುಂಡಿಗೆ ಅಂದಿನಿಂದ 'ಮೋಟ' ಎಂಬ ಹೊಸ ಅಡ್ಡ ಹೆಸರು ಬಂದಿತು. ನನ್ನೂರಿನಲ್ಲಿ ಇನ್ನೊಬ್ಬ ಮೋಟ ಇದ್ದದ್ದರಿಂದ ಬರಿ ಮೋಟ ಎನ್ನುವ ಬದಲು 'ಮೀನುಗುಂಡಿ ಮೋಟ' ಎಂದು ಕರೆದರು.

ಕಿರುಬೆರಳಿಲ್ಲದ, ಹೆಬ್ಬೆರಳು ಸೊಟ್ಟವಾದ ಅವನ ಕೈ ದೊಡ್ಡ ಗಂಟೆ ಹಿಡಿದು ಪೂಜೆ ಮಾಡಲು ಆಗಲಿಲ್ಲ. ಅಂದಿನಿಂದ ಪೂಜೆ ಕೆಲಸ ಅವನ ಮಗನ ಪಾಲಿಗೆ ಬಿತ್ತು. ಅಷ್ಟೇ ಸಾಕು ಎಂದು ಮೀನುಗುಂಡಿ ಮೋಟ ಇಡೀ ದಿನವನ್ನು ಮೀನುಗುಂಡಿಯಲ್ಲಿ ಬಿದ್ದು ಕಳೆಯಲಾರಂಭಿಸಿದ.

**ಕತೆಗಾರರ ಪರಿಚಯ:** ಎಚ್.ಎಲ್. ನಾಗೇಗೌಡ (೧೯೧೫–ಮಂಡ್ಯ) ಕನ್ನಡದ ಅಪರೂಪದ ಲೇಖಕ. ಕಂಡು ಕೇಳಿದ ಕತೆಗಳು, ಆಗಿನ ನನ್ನೂರು, ಪ್ರವಾಸಿ ಕಂಡ ಇಂಡಿಯಾ ಅವರ ಕೃತಿಗಳು.

**ಪ್ರಶ್ನೆಗಳು:**

೧. ಮೀನುಗುಂಡಿಯ ಅಂಗಿ ಹೇಗಿತ್ತು?
೨. ಹಳ್ಳಿ ಬದುಕಿನ ಚಿತ್ರಣ ನೀಡಿ.
೩. ಕರಿಯಣ್ಣ ಪಾತ್ರದ ವಿಶೇಷತೆ ಗುರುತಿಸಿ.

# ೩. ಸ್ತ್ರೀಯರೂ ಪುರುಷರೂ

–ಪು.ತಿ.ನ

**ಆಶಯ:** ಮಾತೃಪ್ರಧಾನತೆಯ ಹಂತವೊಂದು ಮಾನವ ಚರಿತ್ರೆಯಲ್ಲಿ ಇತ್ತು ಎಂಬ ಕಥನವಿದೆ. ಇದನ್ನು ಅನುಸರಿಸಿಯೇ ಏಂಗೆಲ್ಸ್ ಮಾತೃಪ್ರಧಾನತೆಯು ಪಿತೃಪ್ರಧಾನತೆಗೆ ಎಡೆಗೊಟ್ಟ ಚಾರಿತ್ರಿಕ ಹಂತವೇ ಹೆಣ್ಣಿನ ಪಾಲಿನ ದೊಡ್ಡ ಸೋಲು, ದುರಂತ ಎಂದು ವ್ಯಾಖ್ಯಾನಿಸಿದ. ಆದರೆ ಅಂಥಾ ಸುವರ್ಣಯುಗವೊಂದು ಹೆಣ್ಣಿನ ಪಾಲಿಗೆ ಎಂದೂ ಒದಗಲಿಲ್ಲ ಎಂದೇ ಬೋವಾ ವಾದಿಸುತ್ತಾಳೆ. ಈ ಪ್ರಬಂಧವು ಸ್ತ್ರೀಯೂ ಎಂದೂ ಅಬಲೆ ಅಲ್ಲ. ಅವಳು ಶಕ್ತಿ ರೂಪ. ಸ್ತ್ರೀ ಎನ್ನುವುದು ಅಸಾಧಾರಣವಾದ ಶಕ್ತಿ, ಸ್ತ್ರೀಯನ್ನು ಪುರುಷನು ಬಂಧನದಲ್ಲಿಡಲು ಸಾಧ್ಯವಿಲ್ಲ. ಪುರುಷನಂತೆ ಹೆಣ್ಣು ಸ್ವತಂತ್ರಳು. ಸ್ತ್ರೀಯರ ಬೆಂಬಲದಿಂದಲೆ ಪುರುಷ ಹಮ್ಮು ಇರಲು ಸಾಧ್ಯವಾಗಿದೆಂಬುದನ್ನು ತಿಳಿಸುತ್ತದೆ.

ಭಗವಾನ್ ಮನು "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದಾಗ ತನಗೆ ಸ್ತ್ರೀಯರ ವಿಚಾರದಲ್ಲಿದ್ದ ಮಹಾಭಯವನ್ನು ವ್ಯಕ್ತಪಡಿಸಿಸದನೇ ಹೊರತು ಮತ್ತೇನೂ ಅಲ್ಲ. ಗಂಡಸರಿಗೆ ಹೆಂಗಸರ ವಿಷಯದಲ್ಲಿ ಯಾವಾಗಲು ಭಯವಿದ್ದೇ ಇದೆ. ಬಡವರ ಶ್ರೀಮಂತಿಕೆಯಂತೆ ಇದು ಕೆಲವು ವೇಳೆ ತಿರಸ್ಕಾರದ ಸೋಗನ್ನು ತಾಳಬಹುದು, ನಮ್ಮ ವೈದಿಕರು ಪರಂಗಿಯವರನ್ನು ಕಾಣುವ ಹಾಗೆ. ತಜ್ಞರಿಗೆ ಈ ತೋರಿಕೆಯ ತಳದ ಭೀತಿ ಕಾಣದೆ ಇರದು. ಗಂಡಸಿಗೆ ಹೆಂಗಸರನ್ನು ಕಂಡರೆ ಶಂಕೆ ಇಲ್ಲದೆಯಿದ್ದ ಪಕ್ಷದಲ್ಲಿ ಆತ ಏಕೆ ಅವರ ಸ್ವಾತಂತ್ರ್ಯವನ್ನು ಹರಣ ಮಾಡಲು ಸತತವಾಗಿ ಶ್ರಮಿಸುತ್ತಿದ್ದ! ಈ ಪ್ರಯತ್ನವೇನೋ ವಿಪುಲವಾಗಿ ನಡೆದಿದ್ದರೂ ಅದು ಫಲಕಾರಿಯಾಗಿಲ್ಲ, ಆಗುವ ಸೂಚನೆಯೂ ಇಲ್ಲ. ಆದರೆ ಭಯವುಳ್ಳರಿಗೆ ಸುಖವಿಲ್ಲ. ಸುಖವನ್ನು ಅಪೇಕ್ಷಿಸುವವರು ಹೆಂಗಸರಿಗೆ ಸ್ವಾತಂತ್ರ್ಯವನ್ನು ಕೊಟ್ಟೇಕೊಡಬೇಕಾಗುತ್ತದೆ. ಅಷ್ಟಕ್ಕೂ ಕೊಡುವುದೆಂದರೆ ಇದು ನಾವು ದಾನ ಮಾಡತಕ್ಕ ವಸ್ತುವೇ? ನಮ್ಮ ವಶದಲ್ಲಿಯೇ ಅವರ ಬಿಡುಗಡೆ? ಹೆಂಗಸರನ್ನು ಹದ್ದಿನಲ್ಲಿಡುವವರು ಹೆಂಗಸರೇ ಹೊರತು ಗಂಡಸರೆಂದಿಗೂ ಅಲ್ಲ. ಅನಸೂಯೆ, ಸೀತೆ, ಸಾವಿತ್ರಿ, ದಯಯಂತಿ, ದ್ರೌಪದಿ, ಗಾಂಧಾರಿ ಇವರೆಲ್ಲಾ ಹೆಂಗಸರೇ ಅಲ್ಲವೆ. ಇವರ ನೆನೆಪು ನಮ್ಮ ಸ್ತ್ರೀಜನದಲ್ಲಿ ಉಳಿದಿರುವವರಿಗೆ ಗಂಡಂದಿರನ್ನು ಹೆಂಗಸರು ಗೌವರದಿಂದ ಕಾಣುತ್ತಾ ವೈಧವಕ್ಕೆ ಹೆದರಿಯಾರು. ಈ ಮೇಲ್ಪಂಕ್ತಿ ಅಳಿಸಿ ಹೋಯಿತೆಂದರೆ ನಮ್ಮ ಪಾಡೂ ಬೇರೆ ದೇಶ ಮತ್ತು ಮತಗಳ ಗಂಡಸರದಂತೆಯೇ ಆದೀತು. ಈ ಸ್ತ್ರೀ ಬೆಂಬಲದಲ್ಲಿ ಶಕ್ತಿಗಳ ನಮ್ಮ ಹಮ್ಮು ಇಲ್ಲಿಯವರೆಗೆ ಬೆಳೆದುಬಂದಿತು. ಇನ್ನು ಮೇಲೆ ಹೇಗೋ ಹೇಳುವ ಹಾಗಿಲ್ಲ. ಅಲ್ಲದೆ ಈ ಪಾತಿವ್ರತ್ಯಾತಿಶಯದಿಂದ ನಮ್ಮ ಪೌರುಷ ಕುಗ್ಗಿತೋ ಹಿಗ್ಗಿತೋ, ಈ ವಿಚಾರದಲ್ಲೂ ನನಗೆ ಸಂಶಯವಿದೆ.

ಇನ್ನೂ ಹಾಗೆಯೇ ಆಲೋಚಿಸಿದರೆ, ನಮ್ಮ ಹೆಂಗಸರು ನಮ್ಮನ್ನು ಬಂಧನದಲ್ಲಿಟ್ಟಿದ್ದಾರೆಯೇ ಹೊರತು ನಾವು ಅವರನ್ನಲ್ಲ. ಆದುದರಿಂದಲೇ ಅಲ್ಲವೆ ನಾವು ಹೊರನಾಡುಗಳ ಮೇಲೆ ದಾಳಿ ನಡೆಸಿ, ಸಾಮ್ರಾಜ್ಯವನ್ನು ಕಟ್ಟಿ ವಸಾಹತುಗಳನ್ನು ನಿರ್ಮಿಸದೆ, ಮನೆವಳರಾಗಿ ಇದುವರೆಗೂ ಭಾರತವನ್ನು ಬಿಟ್ಟು ಅಳ್ಳಾಡದೆ ಇದ್ದುದು. ಈಗ ನಾವು ಸ್ವತಂತ್ರರು. ನಮ್ಮ ಹೆಂಗಸರೂ ಸ್ವತಂತ್ರರು. ಅಂದರೆ ಅವರ ಅಧಿಕಾರ ನಮ್ಮ ಮೇಲೆ ಮೊದಲಿನಷ್ಟಿಲ್ಲ; ಅವರ ಹಂಗೂ ನಮಗೆ ಈಗ ಹಿಂದಿನಷ್ಟಿಲ್ಲ. ಇದರಿಂದ ನಮಗೇನೂ ಒಳ್ಳೆಯದಾಯಿತು. ಸ್ತ್ರೀಯರು ಈ ವಿಚಾರದಲ್ಲಿ ಏನು ಭಾವಿಸಿಕೊಂಡಿದ್ದಾರೋ ತಿಳಿಯದು. ನಮ್ಮ ಸ್ತ್ರೀಯರು ಪ್ರಗತಿಶೀಲರಾಗಿ ಅವರ ಹಂಗನ್ನು ನಮಗೆ ಕಡಿಮೆ ಮಾಡಿದಷ್ಟೂ ನಮ್ಮನ್ನು ಕಂಡರೆ ಪರದೇಶದವರಿಗೆ ಭಯ ಹೆಚ್ಚುತ್ತದೆ. ನಮ್ಮ ಪೌರುಷ ಬೆಳೆಯುತ್ತದೆ.

ಏಕೆಂದರೆ ಇದುವರೆಗೂ ಹೆಂಡತಿ ಗಂಡನ ವಾಮಾರ್ಧವೆಂದು ಪರಿಗಣಿತಳಾಗಿ ಮದುವೆಯಾದ ಕೂಡಲೇ ಗಂಡ ತನ್ನ ಎಳೆಯ ವಯಸ್ಸಿನಲ್ಲೆ ಅರ್ಧವಾಗಿಬಿಡುತ್ತದ್ದ; ಈಕೆ ಒಂದೂವರೆಯಷ್ಟು ವ್ಯಕ್ತಿತ್ವವನ್ನು ಪಡೆಯುತ್ತಿದ್ದಳು. ಆ ಪರಿಸ್ಥಿತಿಯಲ್ಲಿ ಈ ನವವಧುವನ್ನು ಹತೋಟಿಯಲ್ಲಿಡಲು ಅತ್ತೆ ನಾದಿನಿಯರಿಲ್ಲದೇ ಹೋಗಿದ್ದರೆ ನಮ್ಮ ಗತಿ ಏನಾಗುತ್ತಿತ್ತು, ಗಂಡಂದಿರು ಯೋಚಿಸಲಿ. ಹೆಂಗಸರಿಗೆ ಹೆಂಗಸರಿಂದಲೇ ಭಯ ಎನ್ನುವುದಕ್ಕೆ ಇದೂ ಒಳ್ಳೆಯ ಉದಾಹರಣೆ, ವೇದಮಂತ್ರಗಳೆಲ್ಲಾ ಹೆಂಗಸರ ಪರವಾಗಿವೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಆ ಕಾಲ ಆಕ್ರಮಣಶೀಲರಾದ ಆರ್ಯರು ತಮ್ಮ ಪೌರುಷವನ್ನು ಹೆಂಗಸರಿಂದ ಬಿಡಿಸಿಕೊಂಡಿದ್ದ ಕಾಲ. ಅವರು ವಲಸೆನಿಂತು ಗೃಹಸ್ಥರಾಗುತ್ತಾ ಆಗುತ್ತಾ ಧರ್ಮಶಾಸ್ತ್ರಗಳು ಬೆಳೆದುಬಂದವು, ಗಂಡಸರು ಆಳಾದರು, ಹೆಂಗಸರು ಆಳತೊಡಗಿದರು. ಸ್ವಾತಂತ್ರ ತೃಪ್ತರಾದ ಹೆಂಗಸರು ತಮ್ಮ ತಮ್ಮೊಳಗೆ ಆಡುತ್ತಿದ್ದ ಶಾಂತವಾಗದ ಜಗಳಗಳಿಂದ, ಅವರ ನೆಮ್ಮದಿಗಾಗಿಯೇ ಈ ಶಾಸ್ತ್ರಸೂತ್ರಗಳು ಹುಟ್ಟಿಕೊಂಡುವೆಂದು ನನಗೇನೋ ತೋರುತ್ತದೆ. ಈಗ ನಮ್ಮನ್ನು ದೂರಿ ಏನು ಪ್ರಯೋಜನ? ಹೀಗೆ ದೂರುವವರು ತಾನೆ

ಯಾರು? ನಮ್ಮ ಪ್ರಾಚೀನ ಸಂಪ್ರದಾಯನಿಷ್ಠರಾದ ಮಹಿಳೆಯರಲ್ಲ. ವಿಧವೆಯರಿಗೆ ಪುನರ್ ವಿವಾಹವಾಗಬೇಕು, ನಿಶ್ಚಯ. ಇದರಿಂದ ನಮಗೇನು ಕಷ್ಟ? ಕನ್ಯೆಯರಿಗೆ ನಷ್ಟ. ವಿವಾಹ ವಿಚ್ಛೇದಕ್ಕೆ ಆಸ್ಪದವಿರಬೇಕು ಹೌದು ಇದರಿಂದ ನಮಗೇನು ತೊಂದರೆ? ಮದುವೆ ನಮಗೆ ಇಷ್ಟವಾದ ಪಕ್ಷದಲ್ಲಿ ನಾವೇಕೆ ವರದಕ್ಷಿಣೆಯನ್ನು ಕೇಳುತ್ತಿದ್ದವು?

ನಾನು ಎಷ್ಟೇ ಆಲೋಚಿಸಿದರೂ ಗಂಡಸರಿಗೆ ಹೆಂಗಸರಿಂದ ತೊಂದರೆಯೇ ಹೊರತು ನೆಮ್ಮದಿಯಿಲ್ಲ ಎನ್ನುವ ನಿಲುಗಡೆಗೇ ಬರುತ್ತೇನೆ. ಏಕೆಂದರೆ ಸ್ತ್ರೀ ಎನ್ನುವುದು ಅಸಾಧಾರಣವಾದ ಶಕ್ತಿ. ಅದರ ಸಂಪೂರ್ಣ ಜ್ಞಾನ ನಮಗಿಲ್ಲವೇ ಇಲ್ಲ. ಪುರುಷನೆಂಬ ವ್ಯಕ್ತಿಯನ್ನು ಆತನ ಸರ್ವಾವಸ್ಥೆಗಳಲ್ಲಿಯೂ ಅದು ತನಗೆ ಇಷ್ಟಬಂದಂತೆ ಕುಣಿಸಬಲ್ಲದು, ಅದರ ಆಕರ್ಷಣೆ ಅಮಿತವಾದುದು, ಸಿನಿಮಾ ತಾರೆ ಪಟ್ಟಣಕ್ಕೆ ಬರಲಿ, ಆ ನಗರದ ಯುವಕವೃಂದವನ್ನು ಆ ಕಿಂದರಿಜೋಗಿಯ ಸಂಗೀತದಂತೆ ಸೆಳೆದುಕೊಳಬಲ್ಲಳು! ಹಾಗೆಯೇ ಪುರುಷನಕ್ಷತ್ರ ಬಂದರೆ ಆತನ ಮುಂದೆ ಸ್ತ್ರೀಯರು ಅಷ್ಟಾಗಿ ನೆರೆಯುವರೇ? ಸ್ತ್ರೀಯರನ್ನು ಅಬಲೆಯರೆಂದು ಕರೆದವರಿಗೆ ಹೊರನೋಟದಷ್ಟು ಒಳನೋಟವಿರಲಿಲ್ಲ ಎಂದು ಹೇಳಬೇಕು. ಸಾಧುಪ್ರಾಣಿ ಸೀತಾ ದೇವಿಯನ್ನು ನೆನೆದುಕೊಳ್ಳಿರಿ. ಆಕೆ ರಾವಣನಂಥವನನ್ನೇ ಹೇಗೆ ಚಿಟುಕು ಮುಳ್ಳಾಡಿದಳು! "ಮನೋ ಹರಸಿ ಮೇ, ಭೀರು, ಗರುಡಃ ಪನ್ನಗಂ ಯಥಾ". ಸೀತೆ ಗರುಡನ ಹಾಗಂತೆ, ರಾವಣ ಹಾವಿನ ಹಾಗಂತೆ. ನಿಶ್ಚಯ, ರಾವಣನನ್ನು ಜಯಿಸಿದವಳು ಸೀತೆ ರಾಮನಲ್ಲ. ರಾವಣವಧೆಗೆ ಆತ ನಿಮಿತ್ತ ಮಾತ್ರನಾದ ಅಷ್ಟೆ. ಆಮೇಲೆ ಸೀತೆಯ ವಿಷಯದಲ್ಲಿ ಸಂದೇಹಪಟ್ಟುಕೊಂಡು ಆಕೆಗೆ ಇಲ್ಲದ ಕಿರುಕುಳವನ್ನು ಕೊಟ್ಟ ರಾಮನ ಪಾಡು ಕೊನೆಗೆ ಏನಾಯಿತು? ಆಕೆ ನೆಲಕ್ಕೆ ಇಳಿದುಹೋದಳು ದಿಟ. ಆದರೆ ಆ ದುಃಖವನ್ನು ತಾಳಲಾರದೆ ರಾಮ ಸರಯೂ ನದಿಯಲ್ಲಿ ಮುಳುಗಿಕೊಂಡ. ಆಕೆ ಶುದ್ಧಳಾಗಿಯೇ ಉಳಿದಳು. ಆಕೆಯನ್ನು ಚೆನ್ನಾಗಿ ಬಾಳಿಸಲಿಲ್ಲ ಎಂಬ ಕಳಂಕ ಮಾತ್ರ ಈ ಮಹಾ ಯಶಸ್ವಿಗೆ ಅಂಟಿಕೊಂಡಿತು.

ಪುರುಷರ ದೌಷ್ಟ್ಯಕ್ಕೆಲ್ಲಾ ಸ್ತ್ರೀಯರೇ ಮದ್ದು. ಭಸ್ಮಾಸುರನನ್ನು ಕೊಲ್ಲಬೇಕಾದರೆ ವಿಷ್ಣುವೂ ಕೂಡ ಸ್ತ್ರೀಯಾಗಿ ಬರಬೇಕಾಯಿತು. ಸುಂದೋಪಸುಂದರನ್ನು ಕೊಂದವರ್ಯಾರು? ತಿಲೋತ್ತಮೆ. ಮಹಿಷಾಸುರನನ್ನು ಚಾಮುಂಡಿ, ಕಂಸನನ್ನು ದುರ್ಗೆ (ಕೃಷ್ಣ ನಿಮಿತ್ತಮಾತ್ರ), ಕೌರವನನ್ನು ದ್ರೌಪದಿ, ರಜಪೂತರನ್ನು ಸಂಯುಕ್ತೆ – ಹೀಗೆಯೇ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಸ್ತ್ರೀ ಎಂದರೆ ಶಕ್ತಿ ಎನ್ನುವುದು ಈಗ ಮನದಟ್ಟಾಯಿತಷ್ಟೆ, ಈ ಶಕ್ತಿಯ ಒಂದು ತರದ ಅಭಿವ್ಯಕ್ತಿಯೇ ಪುರುಷ. ಈ ಶಕ್ತಿಯಿಂದ ಮುಕ್ತಿಯನ್ನು ಪಡೆಯಬೇಕೆನ್ನುವವರು ಕಡುಪಾಡು ಪಡಬೇಕಾಗುತ್ತದೆ. ಇದಕ್ಕೆ ಸಾಧುಸಂತರೂ ಋಷಿಗಳೂ ಸಾಕ್ಷಿ. ಆದರೆ ಈ ಮುಕ್ತಿಯನ್ನು ಯಾವುದಾದರೊಂದು ಕಾಲದಲ್ಲಿ ಅಪೇಕ್ಷಿಸದ ಪುರುಷನಿಲ್ಲವೆಂದೇ ಹೇಳಬೇಕು. ತನ್ನ ಸಮಸ್ತ ಆತ್ಮಸಂಪತ್ತನ್ನೂ ಇದರ ಎದುರಿಗಿಟ್ಟು ಹೋರಾಡಿದರೂ ಅವನಿಗೆ ಜಯ ಸಿದ್ಧವೆಂದು ಹೇಳುವಹಾಗಿಲ್ಲ.

ಈ ಸಾಮರ್ಥ್ಯದ ಗುಟ್ಟು ಈ ಕಾಲದ ಹೆಂಗಸರಿಗೆ ಅಷ್ಟಾಗಿ ಗೊತ್ತಿಲ್ಲವೇನೋ ಎಂದು ಅನೇಕ ವೇಳೆ ಎನ್ನಿಸಿದೆ. ಹಿಂದು ಮುಂದನ್ನು ಯೋಚಿಸದೆ ಆಧುನಿಕ ಮಹಿಳೆಯರು ಪುರುಷರೊಡನೆ ಸ್ಪರ್ಧೆಗೆ ನಿಂತಿದ್ದಾರೆ. ಇದು ಗಂಡಸರೆಲ್ಲಾ ಸಂತೋಷಪಡತಕ್ಕ ವಿಷಯ–ಆ ಮಟ್ಟದಲ್ಲಿದ್ದವರು ಈ ಮಟ್ಟಕ್ಕಿಳಿದರಲ್ಲಾ ಎಂದು ಸಮಾಜದಲ್ಲಿ ಅವರ ಸ್ಥಾನಮಾನ ಹಕ್ಕು ಬಾಧ್ಯತೆ ಇತ್ಯಾದಿ ವಿಚಾರಗಳಲ್ಲಿ ನಮ್ಮ ಧರ ಶಾಸ್ತ್ರಗಳು ಬದಲಾವಣೆಯಾಗಬೇಕೆಂದು ಪುರುಷನೊಬ್ಬ ತಂದ ಮಸೂದೆಗೆ ಅನೇಕ ಆಧುನಿಕ ಮಹಿಳೆಯರ ಬೆಂಬಲ ದೊರೆತಿದೆ! ಇದು ಸೋಜಿಗವಾದ ಸಂಗತಿಯೇ ಸರಿ, ರಾಜೇಂದ್ರ ಪ್ರಸಾದರು ತಮ್ಮ ಕುಟುಂಬ ಇದಕ್ಕೆ ಬೆಂಬಲ ಕೊಡಲಾರಳೆಂದ ಸಂಗತಿ ನನಗೇನೂ ಅಷ್ಟು ಆಶ್ಚರವನ್ನು ತರಲಿಲ್ಲ. ಹೆಂಗಸರ ಮೂಲಪ್ರಜ್ಞೆ ಎಚ್ಚೆತ್ತೇ ಇದೆ. ಆಕೆಯಂಥವರೇ ಬಹುಮಂದಿ ಇದ್ದಾರೆ ಎಂಬ ಅಂಶ ನಮಗೆ ಧೈರ್ಯವನ್ನು ತರುವ ಸಂಗತಿಯಲ್ಲ. ಇಂಗ್ಲೀಷನ್ನು ಓದಿ ತಮ್ಮ ಪ್ರಾಚೀನ ಸಂಪ್ರದಾಯಗಳ ರಕ್ಷಾ ಕವಚಗಳನ್ನು ಕಳಚಿಟ್ಟಿರುವ ಹಲವು ಮಹಿಳೆಯರಿಗೆ ಪ್ರಾಚೀನ ಸಂಪ್ರದಾಯನಿಷ್ಠರಾದ ಸ್ತ್ರೀ ಜನತೆಗಿರುವಷ್ಟು ಆತ್ಮಪ್ರತ್ಯಯವಿಲ್ಲ ಎಂದೇ ಹೇಳಬೇಕಾಗುತ್ತದೆ. ಇವರ ಬಾಹ್ಯಾಲಂಕಾರ ವೈಖರಿಯೇ ಇದಕ್ಕೆ ಸಾಕ್ಷಿ. ಈ ಅಲಂಕಾರ ಹೆಚ್ಚುಹೆಚ್ಚಾದಷ್ಟೂ ಪುರುಷನನ್ನು ಆಕರ್ಷಿಸಿ ಹತೋಟಿಯಲ್ಲಿಟ್ಟುಕೊಳ್ಳಬಲ್ಲೆವೆಂಬ ವಿಶ್ವಾಸವು ಇವರಲ್ಲಿ ಕಡಿಮೆಯಾಗುತ್ತಿದೆ ಎಂದು ನಾವು ಊಹಿಸಬಹುದಲ್ಲವೆ?. ಈ ಆತ್ಮವಿಶ್ವಾಸ ಕಡಿಮೆಯಾದಂತೆಲ್ಲಾ ಹಕ್ಕು ಸಾಧ್ಯತೆಗಳಿಗೆ ಹೋರಾಟವಾಡುವ ಮನಸ್ಸೂ ಹೆಚ್ಚುತ್ತದೆ. ಇದೂ ಸಹಜ, ಯಾವ ದೈವಸಹಾಯದಿಂದಲೋ ಕಾಣೆ, ಗಂಡಸು ಈಗ ತಾಯಿ ಮತ್ತು ಇತರ ಸೋದರ ಸಂಬಂಧದವರ ವ್ಯಾಮೋಹದಿಂದ ಪಾರಾಗಿ ಹಾಯಾಗುತ್ತಿದ್ದಾನೆ. ಈ ವಿಮುಕ್ತಿಯನ್ನು ಸಾಧಿಸುವುದಕ್ಕೆ ಹೆಂಡತಿಯನ್ನು ನೆವಮಾಡಿಕೊಳ್ಳುತ್ತಾನೆ. ಇವನ ಈ ಪ್ರವೃತ್ತಿಯನ್ನು ಕಂಡು ಈಗೀಗ ಹೆಂಡತಿಗೂ ಭಯ ಹತ್ತಿರುವಹಾಗೆ ಕಾಣುತ್ತದೆ. ಇನ್ನಾವ ನೆವವನ್ನೊಡ್ಡಿ ತನ್ನ ಹಂಬಲವನ್ನು ಗಂಡ ಕಡಿಮೆ ಮಾಡಿಕೊಳ್ಳುತ್ತಾನೋ ಎಂದು. ಈಗ ಒಬ್ಬನ ಹೊರತು ಮಿಕ್ಕಾವ ದೇವತೆಗಳೂ ಸ್ತ್ರೀಯರ

ಬೆಂಬಳಿಗಿಲ್ಲವೆಂದು ನನ್ನ ಊಹೆ. ಆದರೆ ಹೆಂಗಸರು ದೀರ್ಘಜೀವಿಗಳು, ಯೌವನ ಸ್ಥಿರವಾದುದಲ್ಲ. ಕ್ಲಬ್ಬುಗಳು, ಹೊಟೇಲುಗಳು, ಸೈನ್ಯಗಳು, ಕಾರ್ಖಾನೆಗಳು ಇತ್ಯಾದಿ ಆತರಕ್ಷಣಾ ಕ್ಷೇತ್ರಗಳನ್ನು ಪುರುಷರು ಹೆಚ್ಚು ಹೆಚ್ಚಾಗಿ ಏರ್ಪಡಿಸಿಕೊಳ್ಳುತ್ತಿದ್ದಾರೆ. ಜತೆಗೆ ಸ್ತ್ರೀಗೆ ಸರ್ವಸ್ವಾತಂತ್ರ್ಯ ಮತ್ತು ಸಮಾನತೆ ಇರಬೇಕೆಂದು ಮಸೂದೆಗಳನ್ನು ಬೇರೆ ತರುತ್ತಿದ್ದಾರೆ. ಹೆಂಗಸರ ಹಂಗನ್ನು ಆದಷ್ಟು ಕಡಿಮೆ ಮಾಡಿಕೊಂಡು ತಮ್ಮ ಸ್ವಾತಂತ್ರ್ಯವನ್ನು ತಾವು ಗಳಿಸಿಕೊಳ್ಳಬೇಕೆಂಬ ಪುರುಷಯತ್ನಗಳ ಸಂಕೇತಗಳಿವು, ಗಂಡಸರ ಪ್ರಾಬಲ್ಯ ಈಗ ನಿಜವಾಗಿ ಹೆಚ್ಚುತ್ತಿದೆ. ಅವರವರು ಪ್ರಬಲರಾದ ಕಾಲಕ್ಕೆ ಆದಷ್ಟು ಮಟ್ಟಿಗೆ ಲೋಕವನ್ನೂ ತಮ್ಮ ದಾರಿಗೆ ಎಳೆದುಕೊಳ್ಳುವುದಕ್ಕೆ ಪ್ರಯತ್ನಪಡುವುದು ಎಲ್ಲ ಜಾತಿ ಮತ್ತು ಮತಗಳವರಿಗೆ ಆಗಿಬಂದದ್ದು. ನಮ್ಮ ದೇಶದಲ್ಲಿ ಹೆಂಗಸರ ಪ್ರಾಬಲ್ಯ ಅಧಿಕವಾಗಿದ್ದಾಗ ಗಂಡಸರೆಲ್ಲಾ ಹೆಂಗಸರ ಹಾಗೆಯೇ ಇದ್ದುದನ್ನು ನಾವು ಮರೆಯುವಂತಿಲ್ಲ. ಈಗ ಗಂಡಸರು ಪ್ರಬಲರಾಗುತ್ತಿರುವಾಗ ಸ್ತ್ರೀಯರೂ ಪುರುಷರಂತೆಯೇ ವರ್ತಿಸಬೇಕೆಂದು ಅವರು ಪ್ರಯತ್ನಿಸುತ್ತಿರುವುದೂ ಸಹಜವಾಗಿಯೇ ಇದೆ. ಆದರೆ ಹೆಂಗಸರಲ್ಲಿ ಶೇಕಡ ತೊಂಬತ್ತೊಂಬತ್ತು ಮಂದಿ ಕುಶಾಗ್ರಮತಿಗಳು, ಯಾವ ಆಪತ್ತಿಗೂ ಅವರು ಹೆದರುವವರಲ್ಲ, ಯಾವ ಭೇಷಜಕ್ಕೂ ಅವರು ಒಳಗಾಗರು. ಯಾವ ಧ್ಯೇಯವೂ ಅವರನ್ನು ವಂಚಿಸಲಾರದು. ಅವರು ಸ್ವಧರ್ಮನಿಷ್ಠರು, ಗಂಡಸರನ್ನು ಆಳುವ ಹಕ್ಕನ್ನು ಸುಲಭವಾಗಿ ಬಿಟ್ಟುಕೊಡತಕ್ಕವರಲ್ಲ, ನಿಮ್ಮ ಕಾಲ ಒಳ್ಳೆಯದೋ ನಿಮ್ಮ ಅಜ್ಜಿಯ ಕಾಲ ಒಳ್ಳೆಯದೋ ಎಂಬ ಚರ್ಚೆ ಒಂದು ಗರ್ಲ್ಸ್ ಹೈಸ್ಕೂಲಿನಲ್ಲಿ ನಡೆದಾಗ ನನ್ನ ಮಗಳು ನಮ್ಮ ಕಾಲವೇ ಒಳ್ಳೆಯದೆಂದು ನನ್ನ ಸಲಹೆಗಳನ್ನು ಅನುಸರಿಸಿ ಚರ್ಚಿಸಿದರೂ ಕೂಡ ಪ್ರತಿಪಕ್ಷವೇ ಗೆದ್ದಿತಂತೆ! ಎಳೆ ಮಕ್ಕಳ ಚರ್ಚೆಯಲ್ಲೂ ಅಜ್ಜಿಯ ಕಾಲ ಗೆಲ್ಲಬೇಕಾದರೆ ಗಾಳಿ ಹೇಗೆ ಬೀಸುತ್ತಿದೆ ನೋಡಿಕೊಳ್ಳಿ, ಲಂಗವುಡುವ ಹುಡುಗಿಯರಿಗೇ ಇಷ್ಟು ಹುರುಳಾದ ಬುದ್ಧಿಯಿರಬೇಕಾದರೆ, ಗಂಡಸರು ಸ್ವತಂತ್ರರಾಗುವ ಸಂಭವ ಕಡಿಮೆಯಲ್ಲವೆ? ಹಕ್ಕುಬಾಧ್ಯತೆ ಹೆಚ್ಚಾಗಿದ್ದು ಸಮಾನತೆ ಮತ್ತು ಗೌರವ ಇವುಗಳು ಹೊರಗಡೆ ಬೇಕಾದಷ್ಟು ತೋರುವ ಪಾಶ್ಚಾತ್ಯ ಸ್ತ್ರೀಯರು, ತಮ್ಮ ಗಂಡಸರು ತಮ್ಮನ್ನು ನಮ್ಮಷ್ಟು ಕನಿಕರದಿಂದಲೂ ಪ್ರೇಮದಿಂದಲೂ ನೋಡುತ್ತಿಲ್ಲ ಎಂದು ಗೊಣಗುಟ್ಟುತ್ತಿದಾರಂತೆ. ಅದು ನಮ್ಮ ಮಹಿಳೆಯರ ಕಿವಿಗೂ ಬಿದ್ದಿರಬಹುದು. ಬೀಳದಿದ್ದರೂ ಅವರ ಅಂತರಾಂತರ್ಯದಲ್ಲಿ

ಈ ಗುಟ್ಟು ಹೊಳೆದಿರಬಹುದು. "ಸ್ತ್ರೀಯೋ ಹಿ ಮೂಲಂ ಸಕಲಸ್ಯ ಪುಂಸಾಂ" ಗಾದೆ ಈ ಕಾಲಕ್ಕಾದರೂ ಸುಳ್ಳಾಗುತ್ತಿದೆಯಲ್ಲಾ ಎಂದು ನಾವು ಸಂತೋಷಪಟ್ಟುಕೊಳ್ಳುವ ಸಮಯಕ್ಕೆ ಸರಿಯಾಗಿ ಈ ವಿದ್ಯಾರ್ಥಿನಿಯರ ಮತ ನನ್ನ ಗಮನಕ್ಕೆ ಬಂದಿತು. ನಿಜವಾಗಿ ಚಕಿತನಾದೆ, ನಮ್ಮ ಭವಿಷ್ಯದ ವಿಚಾರವಾಗಿ ತಲ್ಲಣಗೊಂಡೆ. ಆದರೆ ಇವರಿನ್ನೂ ಹೈಸ್ಕೂಲಿನ ಹುಡುಗಿಯರು, ವಿಶ್ವವಿದ್ಯಾನಿಲಯಗಳಲ್ಲಿ ಇವರ ಬುದ್ಧಿ ಇನ್ನೂ ನುರುಗಿ ಹದವಾಗಿಲ್ಲ. ನಮ್ಮ ಪೌರುಷವನ್ನು ನಾವು ನಮ್ಮ ಹೆಂಗಸರಿಂದ ಬಿಡಿಸಿಕೊಂಡು ಮ್ಲೇಚ್ಛರಿಗೆ ಹೆದರದೆ, ಮ್ಲೇಚ್ಛರು ನಮಗೆ ಹೆದರುವಂತಾಗಬೇಕಾದರೆ, ನಮಗೆ ನವವಿದ್ಯಾವತಿಯರ ಬೆಂಬಲ ಬೇಕೇಬೇಕು. ನಮ್ಮ ವಿನಯದಿಂದ ಅದನ್ನು ಗಳಿಸಿಕೊಳ್ಳುವ ಉಪಾಯವನ್ನು ಈಗ ನಾವು ಚಿಂತಿಸಿವುದೊಳ್ಳೆಯದು.

**ಲೇಖಕರ ಪರಿಚಯ:** ಪುತಿನ ಎಂದು ಚಿರಪರಿಚಿತರಾಗಿದ್ದ ಪುರೋಹಿತ ತಿರುನಾರಾಯಣ ನರಸಿಂಹಾಚಾರ್ ಅವರು ಕನ್ನಡ ನವೋದಯ ಕವಿಗಳಲ್ಲಿ ಪ್ರಮುಖರು. ಮೇಲುಕೋಟೆಯಲ್ಲಿ ೧೯೦೫ರ ಮಾರ್ಚ್ ೧೭ರಂದು ಜನಿಸಿದರು. ತಂದೆ ತಿರುನಾರಾಯಣ ಅಯ್ಯಂಗಾರ್, ತಾಯಿ ಶಾಂತಮ್ಮ. ಬಾಲ್ಯದ ವಿದ್ಯಾಭ್ಯಾಸವನ್ನು ಮೇಲುಕೋಟೆ ಮತ್ತು ಮೈಸೂರಿನಲ್ಲಿ ಮುಗಿಸಿದ ನಂತರ ಬಿ.ಎ. ಪದವಿಯನ್ನು ಗಳಿಸಿ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರ (೧೯೬೩-೬೬), ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್-ಕನ್ನಡ ನಿಘಂಟು (೧೯೬೬-೭೧) ಸಂಪಾದಕ ವರ್ಗದಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದರು.

ಇವರು ರಚಿಸಿದ 'ಹಂಸ ದಮಯಂತಿ ಮತ್ತು ಇತರ ರೂಪಕಗಳು' ಎಂಬ ಕೃತಿಗೆ ಕೇಂದ್ರ ಸಾಹಿತ್ಯಾ ಅಕಾಡೆಮಿ ಬಹುಮಾನ (೧೯೬೫), ೧೯೬೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (೧೯೬೬), ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ (೧೯೭೧) ಪದವಿ ನೀಡಿ ಗೌರವಿಸಲಾಗಿತ್ತು. ಚಿಕ್ಕಮಗಳೂರಿನಲ್ಲಿ ನಡೆದ ೫೩ನೇ ಕನ್ನಡ ಸಾಹಿತ್ಯ ಸಮ್ಮೇಳನ (೧೯೮೧) ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಪದ್ಮಶ್ರೀ ಪ್ರಶಸ್ತಿ (೧೯೯೦), ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಮತ್ತು ಸೃಜನಶೀಲ ಕೃತಿ ಶ್ರೀ ಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ (೧೯೯೦) ದೊರೆತಿದ್ದವು. ಅವರು ೧೯೯೮ರ ಅಕ್ಟೋಬರ್ ೧೩ರಂದು ನಿಧನರಾದರು. ಕನ್ನಡ, ತಮಿಳು, ಇಂಗ್ಲಿಷ್, ಸಂಸ್ಕೃತ, ಫ್ರೆಂಚ್ ಭಾಷೆಗಳಲ್ಲಿ ಪರಿಣಿತಿ ಹೊಂದಿದ್ದ ವಿದ್ವಾಂಸರಾಗಿದ್ದ ಪು.ತಿ.ನ. ಅವರು ಗೇಯಕಾವ್ಯ ನಾಟಕ ಪ್ರಬಂಧ ಕ್ಷೇತ್ರಗಳಲ್ಲಿ ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ.

ಕೆಲವು ಕೃತಿಗಳು: ಗೋಕುಲ ನಿರ್ಗಮನ, ಸತ್ಯಾಯನ ಹರಿಶ್ಚಂದ್ರ, ಹಂಸದಮಯಂತಿ ಮತ್ತು ಇತರ ರೂಪಕಗಳು, ಅಹಲ್ಯೆ, ಶ್ರೀರಾಮ ಪಟ್ಟಾಭಿಷೇಕ ಮೊದಲಾದ ಗೀತ ರೂಪಕಗಳು, ರಥ ಸಪ್ತಮಿ ಮತ್ತು ಇತರ ಚಿತ್ರಗಳು (೧೯೪೫), ಈಚಲು ಮರದ ಕೆಳಗೆ (೧೯೪೯), ಧೇನುಕ ಪುರಾಣ (೧೯೪೭), ಇತ್ಯಾದಿ ಪ್ರಬಂಧಗಳು, ಕಾವ್ಯಕುತೂಹಲ, ರಸಪ್ರಜ್ಞೆ, ದೀಪರೇಖೆ ಇತ್ಯಾದಿ ವಿಮರ್ಶಾ ಗ್ರಂಥಗಳು, ಹತ್ತಾರು ವರ್ಷಗಳ ಪರಿಶ್ರಮದಿಂದ ರಚಿಸಿದ ಅನುವಾದಗಳು– ಕನ್ನಡ ಭಗವದ್ಗೀತೆ, ಸಮಕಾಲೀನ ಭಾರತೀಯ ಸಾಹಿತ್ಯ.

**ಪ್ರಶ್ನೆಗಳು:**

೧. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಈ ಹೇಳಿಕೆಯನ್ನು ಲೇಖನ ಹಿನ್ನಲೆಯಲ್ಲಿ ಚರ್ಚಿಸಿ.
೨. ಹೆಂಗಸರನ್ನು ಹದ್ದಿನಲ್ಲಿಡುವವರು ಯಾರು? ವಿಶ್ಲೇಷಿಸಿ.
೩. "ಪುರುಷರ ದೌಷ್ಟ್ಯಕ್ಕೆಲ್ಲ ಸ್ತ್ರೀಯರೇ ಮದ್ದು" ಈ ಹೇಳಿಕೆಯನ್ನು ಸಮರ್ಥಿಸಿ.
೪. ಗಂಡಸು ಸಂಬಂಧದಿಂದ ದೂರವಾಗಲು ಹೆಂಗಸನ್ನು ನೆವಮಾಡಿಕೊಳ್ಳುತ್ತಾನೆ ಹೇಗೆ?
೫. ಸರ್ವಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪಡೆಯುವಲ್ಲಿ ಸ್ತ್ರೀಯ ನಡೆ ಏನು?

# ಘಟಕ : ೩

# ೧. ಅಳ್ಳೀಮರ

**–ಜಿ.ಪಿ. ರಾಜರತ್ನಂ**

**ಆಶಯ:** 'ಅಳ್ಳೀಮರ' – ದೇಸಿ ಸಂಸ್ಕೃತಿಯ ಸಂಕೇತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅರಳಿಮರದ ಕೆಳಗೆ ಅನೇಕ ಆಚರಣೆಗಳು ಮತ್ತು ಊರಿನ ಆಗುಹೋಗುಗಳನ್ನು ಚರ್ಚಿಸುತ್ತಿದ್ದ ಕಾಲವೊಂದಿತ್ತು. ಈಗ ಅದು ಆಧುನಿಕತೆ, ಜಾಗತೀಕರಣದ ಭರದಲ್ಲಿ ತನ್ನ ಅಸ್ತಿತ್ವನ್ನು ಕಳೆದುಕೊಂಡಿರುವ ಸಂಗತಿ ಗಮನಾರ್ಹ.

ವೋಯ್ತಲ್ಲೋ ವೋಯ್ತಲೋ ನಂ ಅಳ್ಳೀಮರ
ಪ್ಯಾಟೆಪಟ್ಲಕೆ ಬಂದು ಈ ಸುಡುಗಾಡಿನ ಸೌದೇಬರ

ಕೆಂಪು ಚಿಗರಿನ ಕುಂಕ್ಮದಂಗಿತ್ ಅಳ್ಳಿ ಮಕದಾಗೇ
ಬಲ್ತ ಕರಿಯೆಲೆ ಚಿತ್ರಿಯಂಗಿತ್ ಚಾಪ್ಡಿ ಪಕದಾಗೇ
ನೂರು ಸಾವಿರ ಅಕ್ಕಿ ಪಕ್ಸಿ ಎಸ್ಟು ಸುಕದಾಗೇ
ಇಂತದೂ ಅನ್ಯಾಯ ವುಂಟಾ ದೇವ್ರೆ ಜಗದಾಗೇ

ಮಕ್ಕಳಿಲ್ಲದ ಮುತ್ತೈದೀರ್ ಇಲ್ ಬರೋರು ಸುತಿಸುತ್ತಿ
ದೂರದ್ ಅಳ್ಯೋರ್ ಇಲ್ಲೆ ಕುಂತ್ ಬಿಚ್ತಿದ್ರು ತಂದ್ ಬುತ್ತಿ
ತಂಪು ಪಾನಕ ಕೋಸುಮರಿ ಇಲ್ಲಿ ತಪ್ಪದೊಪ್ಪತ್ತೂ
ಇದ್ದಕ್ಕಿದ್ದಂಗ್ ಮರಕೆ ಬಂತ್ ಬರಬಾರದಾಪತ್ತೂ

ವೋಯ್ತು ಮರ–ವೋ–ಮುಮಡಿವಿಲ್ಲದ ರುಂಡವೇ ತೇಟು
ಸಾಲು ನಾಗರಕಲ್ಲ ತಲೆಮೇಲ್ ಜೋರು ಬಿಸಿಲೇಟು
ಕ್ಷಾಪಮಾಡ್ಕಂಡ್ ಕೆಂಡವಾದಂಗ್ ಕುದದು ಕಲ್ ಜಗತಿ
ಮುಟ್ಟದರೆ ಮುನಿತೈತೆ – ಆದ್ರೂ ಆಗ್‌ಬಾರ್ದು ಯಿಂಗೆ ಅತಿ

**ಕವಿ ಪರಿಚಯ:** ಜಿ. ಪಿ. ರಾಜರತ್ನಂ ೦೫ ಡಿಸೆಂಬರ್ ೧೯೦೪ ರಾಮನಗರದಲ್ಲಿ ಜನಿಸಿದರು. 'ಭ್ರಮರ' ಎಂಬುದು ಇವರ ಕಾವ್ಯನಾಮ. ಕೃತಿಗಳು: ತುತ್ತೂರಿ, ರತ್ನನ ಪದಗಳು, ಎಂಡ ಕುಡುಕ ರತ್ನ, ನಾಗನ ಪದಗಳು, ಬುದ್ಧನ ಜಾತಕಗಳು, ಧರ್ಮದಾನಿ ಬುದ್ಧ, ಭಗವಾನ್ ಮಾಹಾವೀರ, ಗುಲಗಂಜಿ, ಕಂದನ ಕಾವ್ಯಾ ಮಾಲೆ ಇತ್ಯಾದಿ.

**ಪ್ರಶ್ನೆಗಳು:**

೧. ಅಳ್ಳೀಮರದ ಸುತ್ತ ಇದ್ದ ಆಚರಣೆಗಳನ್ನು ಬರೆಯಿರಿ.
೨. ಅಳ್ಳೀಮರ ಯಾರಿಗೆ ಆಶ್ರಯತಾಣವಾಗಿತ್ತು?
೩. ಅಳ್ಳೀಮರ ಎಂಬುದು ದೇಸಿ ಸಂಸ್ಕೃತಿಯ ಪ್ರತೀಕವೇ? ವಿವರಿಸಿ.
೪. ಅಳ್ಳೀಮರದ ಬಗೆಗೆ ಕವಿಗಿರುವ ಆಪ್ತತೆ ಮತ್ತು ವಿಷಾದವನ್ನು ನಿರೂಪಿಸಿ.

# ೧. ವಾಣಿಯ ಸಮಸ್ಯೆ

**–ಕೊಡಗಿನ ಗೌರಮ್ಮ**

**ಆಶಯ:** ವಿವಾಹದ ವಿಷಯದಲ್ಲಿ ಪುರುಷನಿಗಿರುವ ಸ್ವಾತಂತ್ರ್ಯ ಹಾಗೂ ಪುನರ್ ವಿವಾಹದ ಅವಕಾಶ ಹೆಣ್ಣಿಗಿಲ್ಲ. ಸಮಾಜದ ನಿರ್ಬಂಧ ಹಾಗೂ ಸಾಂಪ್ರದಾಯಿಕ ಕಟ್ಟು ಕಟ್ಟಳೆ, ಆಚಾರ–ವಿಚಾರ, ರೂಢಿ, ನೀತಿ–ನಿಯಮಗಳ ನಡುವೆ ತನ್ನ ಆಸೆ, ಕನಸು ಕಲ್ಪನೆಗಳನ್ನು ಅದುಮಿಟ್ಟುಕೊಂಡು ಬಹುತೇಕ ಹೆಣ್ಣುಮಕ್ಕಳು ಬದುಕುತ್ತಿರುವುದು ಸುಳ್ಳಲ್ಲ. ಅಂಥದ್ದೇ ಹೆಣ್ಣಿನ ಭಾವನೆಗಳ ತುಮುಲದ ಅನಾವರಣ ಇಲ್ಲಿದೆ.

೧

ಇಂದು ಆ ದಿನ ಬೆಳಗ್ಗೆ ಎದ್ದು ಹೊರಗೆ ಬರುವಾಗ ವರ್ಷಗಳಿಂದ ಖಾಲಿಯಾಗಿದ್ದ ನೆರೆಮನೆಗೆ ಯಾರೋ ಒಕ್ಕಲು ಬಂದಿದ್ದಂತೆ ತೋರಿತು. ಮನೆಯ ಇದಿರೊಂದು ಸಾಮಾನು ತುಂಬಿದ ಲಾರಿ ನಿಂತಿತ್ತು.ಒಳಗಿನಿಂದ ಮಾತು ಕೇಳಿಸುತ್ತಿತ್ತು. ನೋಡಿ ಐದಾರು ವರ್ಷಗಳಿಂದ ಖಾಲಿ ಬಿದ್ದಿದ್ದ ಆ ಮನೆಗೆ ಬಂದವರು ಯಾರು ಎಂದು ತಿಳಿದುಕೊಳ್ಳುವ ಕುತೂಹಲಕ್ಕಿಂತಲೂ ಹೆಚ್ಚಾಗಿ ಇಂದುಗೆ ಬೇಸರವಾಯ್ತು. 'ನೆರೆಮನೆ ಅಜ್ಜಿ ಹೋದರೆ ಕರು ಕಟ್ಟಲು ಸ್ಥಳವಾಯ್ತು' ಎನ್ನುವ ಸ್ವಭಾವ ಇಂದುವಿನದಲ್ಲವಾದರೂ ಆ ಮನೆಗೆ ಒಕ್ಕಲು ಬಂದುದರಿಂದ ಅವಳಿಗೆ ಸಂತೋಷಕ್ಕಿಂತ ವ್ಯಸನವೇ ಹೆಚ್ಚಾಯಿ ಎಂದರೆ ತಪ್ಪಾಗಲಾರದು. ಅವಳಿಗೆ ಹಾಗಾಗಲು ಕಾರಣವೂ ಇತ್ತು.

ಇಂದು ಹುಟ್ಟುವ ಮೊದಲೇ ತಂದೆಯನ್ನೂ ಹುಟ್ಟುವಾಗ ತಾಯನ್ನೂ ಕಳೆದುಕೊಂಡು ದಾಯಾದಿಗಳ ಮನೆಯಲ್ಲಿ ಎಲ್ಲರಿಗೂ ಹೊರೆಯಾಗಿ ಬೆಳೆದವಳು. ಇಷ್ಟೇ ಸಾಲದು ಎಂದೇನೋ– ಮದುವೆಯಾಗಿ ಆರು ತಿಂಗಳಾಗುವ ಮೊದಲೇ ವೈಧವ್ಯ ಬೇರೆ ಪ್ರಾಪ್ತವಾಗಿ ಹೋಗಿತ್ತು. ಅವಳೀಗ ವಾಸಿಸುತ್ತಿರುವ ಅ ಪುಟ್ಟ ಮನೆಯೇ ಅವಳಿಗೆ ಒಂದಾನೊಂದು ಕಾಲದಲ್ಲಿ ಮದುವೆಯಾಗಿತ್ತು ಎಂಬುದರ ಗುರುತು. ತಾನು ಬದುಕುವುದು ಅಸಂಭವೆಂದು ತಿಳಿದಾಗ ಅವಳ ಗಂಡ ಅವಳ ಹೆಸರಿಗೆ ಮಾಡಿಟ್ಟಿದ ಸ್ವಲ್ಪ ಹಣವೂ ಆ ಮನೆಯೂ ಸಿಕ್ಕಿ, ಇಂದುವಿನ ಜೀವನವೇನೋ ಇತರರ ಹಂಗಿಲ್ಲದೆ ಸುಸೂತ್ರವಾಗಿ ಸಾಗುತ್ತಿತ್ತು.

ಮನೆ ಎಂದರೆ ಅವಳಿಗೆ ಬಲು ಪ್ರೀತಿ. ಅದನ್ನು ಸುಂದರವಾಗಿಟ್ಟುಕೊಳ್ಳುವುದೊಂದೇ ಅವಳ ಜೀವನದ ಗುರಿ. ತಾನು, ತನ್ನದು ಎಂಬುದಕ್ಕೆ ಎಡೆಯಿಲ್ಲದೆ ಬೆಳೆದು ಬೇಸತ್ತ ಅವಳಿಗೆ ಆ ಮನೆಯ ಮೇಲೆ ಅಷ್ಟೊಂದು ಪ್ರೀತಿ ಇದ್ದುದೇನೂ ಆಶ್ಚರ್ಯವಲ್ಲ. ಮತ್ತೆ ಅವಳ ಜೀವನದಲ್ಲಿ ಸ್ವಲ್ಪವಾದರೂ ಸುಖವನ್ನು ಕಂಡಿದ್ದರೆ ಅದೂ ಆ ಮನೆಯಲ್ಲಿಯೇ. ಅವನು ಸತ್ತು ಹೋದರೆ ತನ್ನ ಜೀವನವೇ ಹಾಳಾಯ್ತು ಎಂಬ ತಿಳಿವಳಿಕೆ ಬರುವ ಮೊದಲೇ ಅವಳ ಗಂಡ ಸತ್ತುಹೋಗಿದ್ದ. ಮದುವೆಯಲ್ಲವನ ಮುಖ ಕಂಡವಳು ಮತ್ತೊಮ್ಮೆ ನೋಡಿದ್ದು ಸತ್ತಮೇಲೇ. ಹಾಗೆ ನೋಡುವುದಾದರೆ ಅವನು ಸತ್ತಮೇಲೆಯೇ ಅವಳ ಜೀವನ ಕೊಂಚ ಸುಖಮಯವಾಯಿತೆನ್ನಬೇಕು. ಏಕೆಂದರೆ ಅವಳಿಗಾಗಿ ಅವನಿಟ್ಟಿದ್ದ ಧನದ ಲೋಭದಿಂದ ಮನೆಯವರ ಪ್ರೀತಿ ಅವಳ ಮೇಲೆ ಹೆಚ್ಚಾಯಿತು. ಆದರೆ ಇಂದು ಬುದ್ಧಿ ಬಂದು ತಿಳಿದುಕೊಳ್ಳುವಷ್ಟಾದ ಮೇಲೆ ತಾನೇ ಬೇರೆಯಾಗಿ ಸ್ವತಂತ್ರವಾಗಿರಲು ಬಯಸಿದಳು. ಅವಳ ಮೇಲಲ್ಲದಿದ್ದರೂ ಅವಳ ಹಣದ ಮೇಲಿನ ಪ್ರೀತಿಯಿಂದ ಮನೆಯವರು 'ತರುಣಿಯಾದ ನೀನೊಬ್ಬಳೇ ಒಂದು ಮನೆಯಲ್ಲಿರುವುದು ಸರಿಯಲ್ಲ' ಎಂದು ಎಷ್ಟೋ ಹೇಳಿದರೂ ಇಂದು ಮಾತ್ರ ತನ್ನ ನಿಶ್ಚಯವನ್ನು ಬದಲಾಯಿಸಲಿಲ್ಲ.

ಇದು ಆರು ವರ್ಷಗಳ ಹಿಂದಿನ ಮಾತು. ಆಗವಳಿಗೆ ಇಪ್ಪತ್ತು ವರ್ಷ ವಯಸ್ಸು. ಅವಳು ಊರು ಬಿಟ್ಟು ಆ ಮನೆಗೆ ಬರುವಾಗಲೇ ನೆರೆಮನೆ ಖಾಲಿಯಿತ್ತು. ಅಂದಿನಿಂದಿಂದಿನವರೆಗೂ ಇಂದುಗೆ ತನ್ನ ಮನೆಯ ಹಿತ್ತಲಷ್ಟೇ ಸ್ವತಂತ್ರದಿಂದ ನೆರೆಮನೆಯ ಹಿತ್ತಲಲ್ಲೂ ಹೋಗಿಬರುವುದು ವಾಡಿಕೆಯಾಗಿ ಹೋಗಿತ್ತು. ಕಾಲಕ್ರಮದಲ್ಲಿ ಮುರಿದ ಮಧ್ಯದ ಬೇಲಿಯನ್ನು ಸಹ ಕಟ್ಟಿಸುವ ಅವಶ್ಯಕತೆ ಅವಳಿಗೆ ತೋರಿಬರಲಿಲ್ಲ.

ಅವಳದು ಏಕಾಂತವನ್ನು ಬಯಸುವ ಜೀವ. ಹುಟ್ಟಿದಂದಿನಿಂದ ತನ್ನವರು, ತನ್ನದು ಎಂಬುದಿಲ್ಲದೆ ಒಂಟಿಯಾಗಿ ಬೆಳೆದಿದ್ದ ಅವಳಿಗೆ ಸ್ವತಂತ್ರವಾದಮೇಲೂ ಬೇರೆಯವರ ಸಹವಾಸ, ಸ್ನೇಹ, ಪ್ರೀತಿಗಳು ಅಗತ್ಯವಾಗಿ ಕಾಣಬರಲಿಲ್ಲ. ಹಾಗೊಮ್ಮೆ ಅವಶ್ಯವೆಂದು ತೋರಿದ್ದರೂ ತಾನಾಗಿ ಇನ್ನೊಬ್ಬರ ಸ್ನೇಹವನ್ನು ಕೋರದಷ್ಟು ಸಂಕೋಚವುಳ್ಳ ಪ್ರಕೃತಿ ಅವಳದು. ಅದರಿಂದ ತಾನೇ ತಾನಾಗಿದ್ದ ಅವಳಿಗೆ ನೆರೆಮನೆಗೆ ಒಕ್ಕಲು ಬಂದಿರುವುದು ಎಂದು ತಿಳಿದಾಗ ಸಂತೋಷವಾಗದಿದ್ದುದು ಆಶ್ಚರ್ಯವಲ್ಲ. ಆದರೆ ಅವಳ ಸಂತೋಷವನ್ನೇನೂ ನೆರೆಮನೆಯ ಒಕ್ಕಲು ಹೊಂದಿಕೊಂಡಿರಲಿಲ್ಲ. ಅದು ಅವಳಿಗೂ

ತಿಳಿಯದಿದ್ದರೂ 'ಬಂದರಲ್ಲಾ' ಎಂದಾಗದೆ ಮಾತ್ರ ಹೋಗಲಿಲ್ಲ. ಇನ್ನು ಮುರಿದ ಬೇಲಿಯನ್ನು ಕಟ್ಟಿಸದಿದ್ದರೆ ತನ್ನ ಏಕಾಂತಕ್ಕೆ ಭಂಗ ಬರುವುದೆಂದುಕೊಂಡು ಇಂದು ಒಳಗೆ ಹೋದವಳು ಆ ದಿನ ಮತ್ತೆ ಹಿತ್ತಲ ಕಡೆಗೆ ಹೋಗಲಿಲ್ಲ.

೨

ಮರುದಿನ ಇಂದು ಮುರಿದ ಬೇಲಿಯನ್ನು ಸರಿಮಾಡಿಸುತ್ತಿದ್ದಾಗ ನೆರೆಮನೆಯ ಹಿತ್ತಲ ಬಾವಿಯ ಹತ್ತಿರ ತನ್ನ ಪ್ರಾಯದ ಹೆಂಗಸೊಬ್ಬಳನ್ನು ನೋಡಿದಳು. ಅವಳೂ ಇವಳನ್ನು ನೋಡಿದಳು. ನೋಡಿ ಮುಗುಳು ನಕ್ಕಳು. ಆ ನಗುವಿನ ಪ್ರತಿಬಿಂಬ ಇಂದುವಿನ ಮೋರೆಯಲ್ಲೂ ಮೂಡಿತು. ಸರಿ, ಮತ್ತೆರಡು ದಿನಗಳ ಕೆಲಸವಿದ್ದರೂ ಆ ದಿನದ ತರುವಾಯ ಬೇಲಿಯ ಕೆಲಸವು ಮುಂದುವರಿಯಲಿಲ್ಲ.

ಈ ರೀತಿ ನಗುವಿನಿಂದ ಮೊದಲಾದ ಇಂದು ಮತ್ತು ನೆರೆಮನೆಯ ವಾಣಿಯ ಪರಿಚಯವು ಒಂದು ವಾರ ತುಂಬುವುದರೊಳಗೆ ಸ್ನೇಹದ ದಾರಿ ಹಿಡಿದಿತ್ತು. ಯಾರ ಸ್ನೇಹವನ್ನೂ ಬಯಸದ ಇಂದುಗೇ ವಾಣಿಯ ವಿಷಯಕ್ಕೆ ತನ್ನಲ್ಲಿ ಮೂಡಿದ್ದ ಆದರವನ್ನು ನೋಡಿ ಆಶ್ಚರ್ಯವಾಗುತ್ತಿತ್ತು. ವಾಣಿಯೇನೋ ಊರಿಗೆ ಹೊಸಬಳು. ಯಾರೊಬ್ಬರ ಗುರುತು ಪರಿಚಯವೂ ಇಲ್ಲ. ದಿನ ಬೆಳಗಾದರೆ ನೆರೆಮನೆಯ ಇಂದುವಿನ ಮುಖ ಕಾಣುವುದು. ವಾಣಿಗೆ ಅವಳ ಪರಿಚಯ ಕ್ರಮವಾಗಿ ಸ್ನೇಹವಾದುದು ಆಶ್ಚರ್ಯದ ಮಾತಲ್ಲ. ಆದರೆ ಅಷ್ಟೇ ಸಹಜ ಸ್ನೇಹದ ಸುಳಿವನ್ನೇ ಅರಿಯದ ತನ್ನ ಹೃದಯದಲ್ಲೂ ಆ ಸ್ನೇಹ ಪ್ರತಿಬಿಂಬಿಸುವುದೆಂದು ಮಾತ್ರ ಇಂದುಗೆ ತಿಳಿಯದು.

ಆ ಮನೆಯಲ್ಲಿ ವಾಣಿ ಮತ್ತು ಅವಳ ಗಂಡ ರತ್ನ ಇಬ್ಬರೇ. ರತ್ನ ಆ ಊರಿಗೆ ಹೊಸದಾಗಿ ವರ್ಗವಾಗಿ ಬಂದ ಡಾಕ್ಟರ್. ಊರಿಗೆ ಒಬ್ಬನೇ ಡಾಕ್ಟರ್ ಆದುದರಿಂದ ಊಟ ತಿಂಡಿಗಳಿಗೆ ಸಹ ಬಿಡುವಿಲ್ಲದಷ್ಟು ಕೆಲಸ ಅವನಿಗೆ. ವಾಣಿಗಂತೂ ಮನೆಯೊಳಗೊಬ್ಬಳೇ ಇರುವುದಕ್ಕೆ ಬೇಸರ. ಅದರಿಂದ ಅವಳ ಮುಕ್ಕಾಲು ಸಮಯವೆಲ್ಲಾ ಇಂದುವಿನ ಮನೆಯಲ್ಲೇ ಕಳೆಯುತ್ತಿತ್ತು. ಇಂದುವೂ ಒಂದೆರಡು ಸಾರಿ ಅವಳ ಮನೆಗೆ ಹೋಗಿದ್ದಳು.

ಇಂದು ಮೊಟ್ಟಮೊದಲು ವಾಣಿಯ ಮನೆಗೆ ಹೋದಾಗ ಬಟ್ಟೆ ಬರೆ, ಪಾತ್ರೆ–ಪದಾರ್ಥಗಳೆಲ್ಲಾ ಮನೆತುಂಬ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ವಾಣಿ ಏನೋ 'ಹೊಸದಾಗಿ ಬಂದುದರಿಂದ ಮನೆಯನ್ನಿನ್ನೂ ವ್ಯವಸ್ಥಿತ ರೀತಿಗೆ ತರಲು ಸಮಯವಾಗಲಿಲ್ಲ' ಎಂದು ಹೇಳಿದರೂ ತನ್ನ ಮನೆಯನ್ನು ಸದಾ ಸುವ್ಯವಸ್ಥಿತ ರೀತಿಯಲ್ಲಿಟ್ಟುಕೊಂಡಿದ್ದ ಇಂದುಗೆ 'ಬಂದು ಹದಿನೈದು ದಿನಗಳಾದರೂ ಇನ್ನೂ ಸಮಯವಾಗಿಲ್ಲವೇ?' ಎಂದು ಆಶ್ಚರ್ಯ. ಆ ದಿನ ಅವುಗಳನ್ನೆಲ್ಲಾ ಸರಿಮಾಡಿಡಲು ವಾಣಿಗೆ ನೆರವಾದಳು. ಮಧ್ಯಾಹ್ನ ಎರಡು ಗಂಟೆಗೆ ಕೆಲಸ ಸುರು ಮಾಡಿದ್ದರೂ ಎಲ್ಲವನ್ನೂ ಸರಿಯಾಗಿ ಮಾಡುವಾಗ ಕತ್ತಲಾಗುವ ಸಮಯವಾಗಿತ್ತು. ಅಂತೂ ಎಲ್ಲಾ ಮುಗಿಯುವಾಗ ಮನೆಯು ಸ್ವಚ್ಛವಾಗಿ, ಸುಂದರವಾಗಿ ತೋರಿತು.

ಈ ಕೆಲಸದಲ್ಲಿ ವಾಣಿಗೆ ಇಂದು ನೆರವಾದಳು ಎನ್ನುವುದಕ್ಕಿಂತ ಇಂದುಗೆ ವಾಣಿ ನೆರವಾದಳು ಎಂದರೆ ಸರಿಯಾಗಬಹುದು. ಮುಕ್ಕಾಲು ಕೆಲಸ ಮಾಡಿದವಳು ಇಂದು. ಯಾವ ಯಾವ ಪದಾರ್ಥವನ್ನು ಎಲ್ಲೆಲ್ಲಿ ಇಡಬೇಕು; ಹೇಗೆ ಇಟ್ಟರೆ ಹೆಚ್ಚು ಸುಂದರವಾಗಿ ತೋರಬಹುದು ಎಂದು ಆಲೋಚಿಸಿ ಸರಿಮಾಡಿ ಅಣಿಯಾಗಿಟ್ಟವಳು ಇಂದು. ಇಂದು ಹೊರಲಾರದ ದೊಡ್ಡದೊಡ್ಡ ವಸ್ತುಗಳನ್ನು ಎತ್ತಿಡಲು ಸಹಾಯ ಮಾಡುವುದು ಅಥವಾ ಅವಳು ಹೇಳಿದ ಸಾಮಾನುಗಳನ್ನು ತಂದು ಕೊಡುವುದು– ಇವು ವಾಣಿಮಾಡಿದ ಕೆಲಸ. ಅಂತೂ ಅವರ ಕೆಲಸ ಮುಗಿಯುವಾಗ ಮನೆಯೊಂದು ಹೊಸ ಕಳೆ ತಳೆದಿತ್ತು. ವಾಣಿಗಂತೂ ರೂಪು ಬದಲಾದ ತನ್ನ ಮನೆಯನ್ನು ನೋಡಿ ಹಿಡಿಸಲಾರದಷ್ಟು ಆಶ್ಚರ್ಯ–ಆನಂದ.

ಅವಳದು ಜನ್ಮತಃ ಉದಾಸೀನ ಪ್ರವೃತ್ತಿ.ಯಾವ ಕೆಲಸವನ್ನಾದರೂ ನಾಳೆ ಮಾಡಿದರಾಯ್ತು ಎನ್ನುವ ಪ್ರಕೃತಿ. ನಾಳೆ ನಾಳೆ ಎಂದು ಯಾವಾಗಲೂ ಅವಳ ಕೆಲಸಗಳು ನಾಳೆಗಾಗಿ ಬಿದ್ದಿರುತ್ತಿದ್ದುವು. ಅದರಿಂದ ಸಹಜವಾಗಿಯೇ ಅವಳ ಮನೆ ಎಂದೂ ಅಂದಿನಷ್ಟು ಸುಂದರವಾಗಿ ತೋರಲಿಲ್ಲ.

ಆ ದಿನ ಸಾಯಂಕಾಲ ರತ್ನ ಸ್ವಲ್ಪ ಬೇಗನೆ ಬಂದ. ಅವನಿಗೂ ತನ್ನ ಮನೆಯ ಸುವ್ಯವಸ್ಥಿತ ರೀತಿಯನ್ನು ನೋಡಿ ಬಹಳ ಆಶ್ಚರ್ಯವಾಗದಿರಲಿಲ್ಲ. ಆದರೆ ಕಾಫಿ ಕುಡಿದು ಮುಗಿಯುವ ಮೊದಲೇ ವಾಣಿಯ ಬಾಯಿಂದ ಮನೆಯ ಆ ರೂಪಿಗೆ ಕಾರಣಳಾದವಳು ನೆರೆಮನೆಯ ಇಂದು ಎಂದು ತಿಳಿಯಿತು. ತಿಳಿದು–'ನನ್ನ ವಾಣಿಯೂ ಗೃಹಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುವಂತಾಗಿದ್ದರೆ' ಎಂದೆನ್ನಿಸಿತವನಿಗೆ. ತನ್ನ ಬಯಕೆಗಳು ಪೂರ್ತಿಯಾಗುವುದು ತಾನು ಬಯಸಿದಷ್ಟು ಸುಲಭವಲ್ಲ ಎಂಬುದು ರತ್ನನ ಐದು ವರ್ಷಗಳ ದಾಂಪತ್ಯ ಜೀವನದ ಅನುಭವ. ಆದರೆ ಇನ್ನೂ ರತ್ನನಿಗೆ 'ಹಾಗಾಗಿದ್ದರೆ–ಹೀಗಾಗಿದ್ದರೆ' ಎಂದು ಅಂದುಕೊಳ್ಳದಿರುವಷ್ಟು ನಿರಾಸೆಯಾಗಿರಲಿಲ್ಲ.

ರತ್ನ ಕೆಲಸ ತೀರಿಸಿ ದಣಿದು ಬರುವಾಗ ವಾಣಿ ಇಂದುವಿನ ಮನೆಯಲ್ಲಿ ಹರಟೆ ಹೊಡೆಯುತ್ತ ಕೂತು ಬಿಡುತ್ತಿದ್ದಳು. ರತ್ನ ಬಂದ ಮೇಲೆ ಓಡಿ ಹೋಗಿ ಮತ್ತೆ ಕಾಫಿ ಮಾಡಬೇಕು. ವಾಣಿಯ ಕಾಫಿಯಾಗುವುದರೊಳಗೆ ರತ್ನನನ್ನು ಕೂಗಲು ಯಾರಾದರು ಬಂದೇ ಬರುವರು. ಎಷ್ಟೋ ಸಾರಿ ಅವನು ಏನನ್ನೂ ತೆಗೆದುಕೊಳ್ಳದೆ ಹಾಗೆಯೇ ಹೊರಟು ಹೋಗಿ ಬಿಡಬೇಕಾಗುತ್ತಿತ್ತು. ಆ ಮೇಲೆ ಸ್ವಲ್ಪ ಹೊತ್ತು 'ಅಯ್ಯೋ, ಬೇಗನೆ ಕಾಫಿ ತಿಂಡಿ ಮಾಡಿಟ್ಟಿರಬೇಕಿತ್ತು' ಎಂದು ವಾಣಿ ನೊಂದು ಕೊಳ್ಳುತ್ತಿದ್ದಳೇನೋ ನಿಜ; ಆದರೆ ಅದು ಸ್ವಲ್ಪ ಹೊತ್ತು ಮಾತ್ರ. ಮರು ದಿನ ಯಥಾ ಪ್ರಕಾರ ... ರತ್ನನ ಬಟ್ಟೆಬರೆಗಳೂ ಹಾಗೆಯೇ– ಅವನೀಗೆ ಬೇಕಾದಷ್ಟು ಬಟ್ಟೆಬರೆಗಳಿದ್ದರೂ ಬೇಕಾದಾಗ ಒಂದು ಟೈ ಸಹ ಸರಿಯಾಗಿ ಸಿಕ್ಕುವುದು ಕಷ್ಟವಾಗುತ್ತಿತ್ತು.

ಮದುವೆಯಾದ ಹೊಸತರಲ್ಲಿ, ರತ್ನನಿಗೆ ನವಪ್ರಣಯದ ಭರದಲ್ಲಿ ವಾಣಿಯ ಈ ಕುಂದುಕೊರತೆಗಳೊಂದೂ ತಿಳಿಯದಿದ್ದರೂ ದಿನಗಳು ಕಳೆದಂತೆ ಅವನಿಗೆ 'ನನ್ನ ವಾಣಿಯು ಹೀಗೇಕೆ?' ಎಂದಾಗದೆ ಹೋಗುತ್ತಿರಲಿಲ್ಲ. ಆದರೆ ಅವಳ ಪಶ್ಚಾತ್ತಾಪದಿಂದ ಕೂಡಿದ ಮುಖ, ತುಂಬಿದ ಕಣ್ಣುಗಳನ್ನು ನೋಡುವಾಗ ಅವನಿಗೆ ಏನನ್ನುವುದಕ್ಕೂ ತೋರದೆ ಅವಳನ್ನು ಸಂತೈಸಿ, ನಗಿಸಿ, ನಕ್ಕು ನಲಿಯುತ್ತಿದ್ದ. ಇನ್ನು ಮುಂದೆ ಹೀಗೆ ಮಾಡಬೇಡವೆಂದು ಹೇಳಿ ಸ್ವಲ್ಪ ಕೋಪಿಸಿ ವಾಣಿಗೆ ಬುದ್ಧಿ ಕಲಿಸಬೇಕೆನ್ನುವ ಅವನ ಪ್ರಯತ್ನಗಳೆಲ್ಲಾ ಇದೇ ರೀತಿಯ ಅಂತ್ಯಗಳಾಗುತ್ತಿದ್ದುವು.

ದಿನಕಳೆದಂತೆ–ಅವರವರ ಸ್ನೇಹ ಬೆಳೆದಂತೆ ವಾಣಿಯ ಈ ತರದ ಅಲಕ್ಷತನ ಇಂದುಗೆ ತಿಳಿಯದಿರಲಿಲ್ಲ. ಅವಳಿಗೆ ತಿಳಿಯದಿದ್ದರೂ ಹೀಗೇನಾದರೂ ನಡೆದಾಗಲೆಲ್ಲ ವಾಣಿ ಇಂದುವಿನೆದುರು ತಾನೇ ಹೇಳುತ್ತಿದ್ದಳು. ತನ್ನ ತಿಳಿಗೇಡಿತನವನ್ನು ಹಳಿದು ಕೊಳ್ಳುತ್ತಿದ್ದಳು. ಮೊದ ಮೊದಲು ಇಂದು ವಾಣಿಯನ್ನು ಸಮಾಧಾನಪಡಿಸುತ್ತಿದ್ದಳು. ಆದರೆ ಯಾವಾಗಲೂ ಅವಳ ಪ್ರಕೃತಿಯೇ ಹೀಗೆಂದು ತಿಳಿದ ಮೇಲೆ ಮಾತ್ರ ಇಂದುಗೆ 'ರತ್ನನಂಥ ಗಂಡನನ್ನು ಪಡೆದೂ ಅವನನ್ನು ಸುಖದಲ್ಲಿಟ್ಟಿರಲಾರಳಲ್ಲ ಈ ವಾಣಿ!' ಎಂದು ಆಶ್ಚರ್ಯ. 'ತನ್ನ ಪತಿಯಾಗಿದ್ದರೆ ತಾನು ಹೇಗೆ ನಡೆದುಕೊಳ್ಳುತ್ತಿದ್ದೆ' ಎಂದು ಒಂದು ನಿಟ್ಟುಸಿರು. ಮತ್ತೆ 'ಥೂ, ಹುಚ್ಚು ಯೋಚನೆ' ಎಂದೊಂದು ಮೋಡ ಮುಚ್ಚಿದ ನಗು.

೩

ಒಂದು ದಿನ ಬೆಳಗ್ಗೆ ಸುಮಾರು ಹನ್ನೊಂದು ಗಂಟೆಯ ಹೊತ್ತಿನಲ್ಲಿ ಇಂದು ಅಡಿಗೆ ಮಾಡುತ್ತಿರುವಾಗ ವಾಣಿ ಬಂದಳು. ಇಂದುವಿನ ಮನೆಗೆ ವಾಣಿ ಬರುವುದಕ್ಕೆ ಸಮಯಾಸಮಯಗಳ ಕಟ್ಟುಗಳಿರಲಿಲ್ಲ. ಬೆಳಗ್ಗೆ ಎದ್ದಂದಿನಿಂದ ರಾತ್ರಿ ಮಲಗುವ ತನಕ ಆ ಮನೆಯಿಂದ ಈ ಮನೆಗೆ, ಈ ಮನೆಯಿಂದ ಆ ಮನೆಗೆ ಓಡಾಡುವುದು ಅವಳ ಪದ್ಧತಿ ಅವಳು ಬಂದು ಹೋಗುವುದರಲ್ಲಿ ವಿಶೇಷವೇನೂ ಇಲ್ಲ. ಆದರೆ ಆ ದಿನದ ವಾಣಿಯ ಬರುವು ಇಂದುವಿನ ಶಾಂತ ಜೀವನ ಪ್ರವಾಹವನ್ನು ಅಲ್ಲೋಲ ಕಲ್ಲೋಲ ಮಾಡಲು ಕಾರಣವಾಯ್ತು. ವಾಣಿ ಬಂದುದು ಹೆಚ್ಚಿನ ಕೆಲಸಕ್ಕೇನೂ ಅಲ್ಲ. ಸಾರಿಗೆ ಬೇಳೆ ಬೇಯಲು ಹಾಕಿ ಅದು ಬೇಯುವ ತನಕ ಸುಮ್ಮನೆ ಕೂತಿರಬೇಕೇಕೆಂದು ಇಂದುವಿನ ಮನೆಗೆ ಹರಟೆ ಹೊಡೆಯಲು ಬಂದಿದ್ದಳಷ್ಟೆ.

ಮಧ್ಯಾಹ್ನದ ಮೇಲೆ ತುಂಬಾ ಕೆಲಸವಿದ್ದ ರತ್ನ, ಬೇಗನೆ ಊಟ ತೀರಿಸಿ ಹೋಗಬೇಕೆಂದು ಆ ದಿನ ಬೇಗನೆ ಮನೆಗೆ ಬಂದ. ಮನೆಯಲ್ಲಿ ವಾಣಿ ಇಲ್ಲ– ಒಂದೆರಡು ಬಾರಿ ಕೂಗಿದ. ಪ್ರತ್ಯುತ್ತರವೂ ಇಲ್ಲ. ಕೊನೆಗೆ ಹಿತ್ತಲಲ್ಲಿರಬಹುದೇನೋ ಎಂದು ಬಂದು ನೋಡುವಾಗ ಇಂದುವಿನ ಮನೆಯಿಂದ ವಾಣಿಯ ಮಾತು ಕೇಳಿಸಿತು. ಮಧ್ಯಾಹ್ನದ ವೇಳೆಯಲ್ಲಿ ಮಾಡುವ ಕೆಲಸ ಬಿಟ್ಟು ನೆರೆಮನೆಗೆ ಹೋಗಿ ಸಮಯ ಕಳೆಯುತ್ತಿರುವಳಲ್ಲ  ಎಂದು ಸ್ವಲ್ಪ ಕೋಪವೂ ಬಂತು. 'ವಾಣೀ' ಎಂದು ಸ್ವಲ್ಪ ಗಟ್ಟಿಯಾಗಿಯೇ ಕೂಗಿದ. ಮಾತಿನ ಸಂಭ್ರಮದಲ್ಲಿ ಅವಳಿಗದು ಕೇಳಲಿಲ್ಲ. ಅವಳ ಮಾತಿನ ಗಲಾಟೆಯಲ್ಲಿ ಇಂದುಗೂ ಕೇಳಿಸುವಂತಿರಲಿಲ್ಲ. ಆದುದರಿಂದ ಮಾತಿನಲ್ಲಿ ಮುಳುಗಿದ್ದ ಅವರಿಗೆ ರತ್ನ ಹಿತ್ತಲ ಬೇಲಿಯ ಹತ್ತಿರ ಬಂದು ಪುನಃ ಜೋರಾಗಿ 'ವಾಣೀ' ಎನ್ನುವಾಗ ತುಂಬ ಗಾಬರಿಯಾಯ್ತು. ವಾಣಿಯಂತೂ 'ಅಯ್ಯೋ ಇಂದೂ, ಇನ್ನೂ ಅಡಿಗೇ ಆಗ್ಲಿಲ್ಲ' ಎಂದು ಅವಸರದಿಂದ ಹೊರಗೆ ಬಂದಳು. ಇಂದುವೂ ಅವಳನ್ನು ಹಿಂಬಾಲಿಸಿ ಬಾಗಿಲನ ಹತ್ತಿರ ಬರುವಾಗ ಬೇಲಿಯ ಹತ್ತಿರ ನಿಂತಿದ್ದ ದಣಿದ ರತ್ನನನ್ನು ನೋಡಿದಳು. ವಾಣಿ 'ಎಷ್ಟೊತ್ತಾಯ್ತು ಬಂದೂ. ಈಗ್ಲೇ ಆಸ್ಪತ್ರೆಗೆ ಮತ್ತೆ ಹೋಗ್ಬೇಕೇ?' ಎಂದು ಕೇಳುತ್ತಿದ್ದಳು. ಇಂದು ಅವಳ ಮಾತುಗಳನ್ನು ಕೇಳಿ ರತ್ನನಿಗೆ ಪುನಃ ಉಪವಾಸವ್ರತ ಎಂದು ತಿಳಿದುಕೊಂಡಳು.

ರತ್ನನಿಗೇನೋ ಹಿಂದೆ ಅನೇಕ ಸಾರಿ ಈ ತರದ ಅನುಭವಗಳಾಗಿದ್ದರೂ ಇಂದುವಿಗೆ ಆಗಲೇ ಅದರ ಖುದ್ದಾದ ಅನುಭವ. ತಾನು ವಾಣಿಯ ಸಮಯವನ್ನು ಹಾಳು ಹರಟೆಯಲ್ಲುಪಯೋಗಿಸಲು ಸಹಾಯಕಳಾದೆನಲ್ಲಾ ಎಂದು ಬಹಳ

ಬೇಸರವೂ ಆಯ್ತು. ಬಾಗಿಲ ಸಂದಿನಿಂದ ದಣಿದು ಬೆಂಡಾಗಿದ್ದ ರತ್ನನನ್ನು ನೋಡುತ್ತಿದ್ದಂತೆ ಮನಸ್ಸಿನಲ್ಲಿ ಈ ಭಾವನೆಗಳು ಮೂಡುತ್ತಿದ್ದುವು. ಮತ್ತೆ ಎಂದೂ ಇಲ್ಲದ ಏನೇನೋ ಯೋಚನೆಗಳು ಒಂದರ ಮೇಲೊಂದಾಗಿ ಬರತೊಡಗಿದುವು. ಅವುಗಳನ್ನೇ ಹಿಂಬಾಲಿಸುವಂತೆ ನಿಡಿದಾದ ನಿಟ್ಟುಸಿರೊಂದು ಹೊರಬಿತ್ತು. ಕಣ್ಣೀರ ಕಾಲುವೆಯೊಡೆಯಲು ಇಷ್ಟೇ ಸಾಕಾಗಿತ್ತು. 'ಅಯ್ಯೋ ದೇವರೇ' ಎಂದು ಉಕ್ಕುತ್ತಿದ್ದ ಕಣ್ಣೀರನ್ನು ಸೆರಗಿನಿಂದ ಒರಸುತ್ತಾ ಒಳಗೆ ಬಂದಳು. ಅಷ್ಟು ಹೊತ್ತಿಗೆ ವಾಣೀರತ್ನರೂ ತಮ್ಮನೆಯ ಜಗಲಿ ತಲುಪಿದ್ದರು.

೪

ಇಂದು ಒಳಗೆ ಬಂದಳು. ಒಂದೇ ಒಂದು ಗಳಿಗೆಯ ಹಿಂದೆ ಅವಳ ಜೀವನದಲ್ಲಿ ಶಾಂತಿಯಿತ್ತು– ಸಂತೋಷವಿತ್ತು – ಏನೋ ಒಂದು ತರಹದ ತೃಪ್ತಿಯೂ ಇತ್ತು. ಮತ್ತೆ ತನ್ನ ಮನೆ, ಅದರ ಸೌಂದರ್ಯ ಸ್ವಚ್ಛತೆಗಳಿಗಾಗಿ ಅಭಿಮಾನವಿತ್ತು. ಅದೇಕೋ – ಆ ಒಂದು ಗಳಿಗೆಯ ಹಿಂದಿದ್ದ ಅವಳ ಆ ಆನಂದ, ಅಭಿಮಾನ, ಶಾಂತಿ, ತೃಪ್ತಿ ಎಲ್ಲಾ ಇಂದು ಒಳಗೆ ಬರುವಾಗ ಮಾಯವಾಗಿದ್ದುವು. ಬದಲಾಗಿ ಅವುಗಳ ಸ್ಥಾನವನ್ನು ಹಿಂದೆಂದೂ ಇಂದುವನ್ನು ಬಾಧಿಸದ ಪ್ರಶ್ನೆಗಳು ಬಂದು ಆವರಿಸಿದ್ದುವು. 'ವಾಣಿಗೆ–ಯಾವುದರ ಬೆಲೆಯನ್ನೂ ಅರಿಯದ ವಾಣಿಗೆ– ಎಲ್ಲವನ್ನೂ ಕೊಟ್ಟ ದೇವರು ತನ್ನ ಜೀವನವನ್ನೇಕೆ ಅಂಧಕಾರಮಯವನ್ನಾಗಿ ಮಾಡಿದ?' ಎಂಬುದು ಎಲ್ಲದುದಕ್ಕಿಂತಲೂ ಅವಳಿಗೆ ಬಲು ದೊಡ್ಡದಾದ ಪ್ರಶ್ನೆಯಾಗಿ ತೋರಿತು. ಎಷ್ಟು ಯೋಚಿಸಿದರೂ ಪ್ರತ್ಯುತ್ತರ ದೊರೆಯದ ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದರಲ್ಲೇ ತಲ್ಲೀನಳಾದ ಇಂದು ಆದಿನ ಸಾಯಂಕಾಲ ಪುನಃ ವಾಣೀ ಬರುವತನಕವೂ ಕೂತಲ್ಲಿಂದ ಎದ್ದಿರಲಿಲ್ಲ. ಮಾಡಿಟ್ಟಿದ್ದ ಅಡಿಗೆಯೂ ಹಾಗೆಯೇ ಇತ್ತು.

ವಾಣಿಯ ದೀನ ಮುಖಮುದ್ರೆಯನ್ನು ನೋಡಿ ಹಿಂದೆ ಮರುಕಗೊಳ್ಳುತ್ತಿದ್ದ ಇಂದುಗೆ ಆ ದಿನ ಅವಳ ಅಳುಮೋರೆಯನ್ನು ನೋಡಿ ಸ್ವಲ್ಪ ಸಂತೋಷವೇ ಆಯಿತು. ದೇವರು ತನಗೊಬ್ಬಳಿಗೆಂದೇ ದುಃಖವನ್ನು ಮೀಸಲಾಗಿರಿಸಬೇಕೇಕೆ? ವಾಣಿಗೂ ಅದರ ರುಚಿ ಕೊಂಚ ಗೊತ್ತಾಗಲಿ ಎಂದು ಮನದಲ್ಲೇ ಹೇಳಿಕೊಂಡಳು. ತಾನು ಆ ರೀತಿ ಬಯಸುವುದು ಸ್ವಾರ್ಥವೆಂದೂ ತನ್ನ ದುಃಖಕ್ಕೆ ಕಾರಣಳು ವಾಣಿ ಅಲ್ಲವೆಂದೂ ಇಂದುಗೆ ತಿಳಿದಿದ್ದರೂ ವಾಣಿಯ ಬಾಡಿದ ಮುಖವು ಅವಳಲ್ಲಿ ಕರುಣೆಯನ್ನು ಹುಟ್ಟಿಸಲಿಲ್ಲ. ವಾಣಿ ಅಳುತ್ತಾ 'ಎಂದೂ ಏನೂ ಅನ್ನದಿದ್ದವರು ಕೋಪಿಸಿಕೊಂಡು ಹೊರಟುಹೋದರು' ಎಂದು ಹೇಳುವಾಗ ಇಂದುಗೆ ಒಂದು ತರದ ಆನಂದವೇ ಆಯ್ತು. ಆದರೆ ಮರುಕ್ಷಣದಲ್ಲಿ ಆ ರೀತಿ ಸಂತೋಷಪಡುವುದು ತಪ್ಪು ಎಂದು, ಎಂದೂ ಆ ತರದ ಭಾವನೆಗಳಿಗೆ ಎಡೆಕೊಡದಿದ್ದ ಇಂದುವಿನ ಮನವು ಎಚ್ಚರಿಸಿದಾಗ ಅವಳಿಗೇ ತನ್ನ ನೀಚ ಭಾವನೆಗಳಿಗಾಗಿ ನಾಚಿಕೆಯಾಯ್ತು. ಆ ಭಾವನೆಗಳಿಗೆ ಎಡೆಕೊಟ್ಟ ತಪ್ಪಿನ ಪ್ರಾಯಶ್ಚಿತ್ತ ಸ್ವರೂಪವಾಗಿ ವಾಣಿಯನ್ನು ಸಂತೈಸಿ ಅವಳ ಕೆಲಸಕ್ಕೆ ನೆರವಾದಳು.

ಎಲ್ಲ ಕೆಲಸಗಳನ್ನು ತೀರಿಸಿ ಇಂದು ತನ್ನ ಮನೆಗೆ ಹಿಂತಿರುಗುವುದೂ ರತ್ನ ತನ್ನ ಮನೆಗೆ ಬರುವುದೂ ಸರಿಯಾಯ್ತು. ಅವನಿಗೂ ಮಧ್ಯಾಹ್ನದಿಂದ ನೆಮ್ಮದಿ ಇಲ್ಲ. ಎಂದೂ ವಾಣಿಯೊಡನೆ ಕೋಪಿಸಿಕೊಂಡವನಲ್ಲ. ಬಹಳ ದಿನಗಳಿಂದ ತಡೆದಿದ್ದ ಅವನ ಸಮಾಧಾನವು ಆ ದಿನ ಹಸಿವಿನ ಭರದಲ್ಲಿ ತಡೆಯಲಾರದೆ ಕೋಪಕ್ಕೆ ಎಡೆಕೊಟ್ಟಿತ್ತು. ಕೋಪ ಇಳಿಯುತ್ತ ಬಂದಂತೆ ಅವನಿಗೆ ತನ್ನ ವರ್ತನೆಗಾಗಿ ಸ್ವಲ್ಪ ನಾಚಿಕೆಯಾಯ್ತು. ವಾಣಿ ಎಷ್ಟು ನೊಂದುಕೊಂಡಿರುವಳೋ ಎಂದು ಕ್ಲಬ್ಬಿಗೆ ಸಹ ಹೋಗದೆ ಮನೆಗೇ ನೇರವಾಗಿ ಬಂದಿದ್ದ. ಆದರೆ ಅವನೆಣಿಸಿದಂತೆ ವಾಣಿ ದೀಪವನ್ನು ಸಹ ಹತ್ತಿಸದೆ ಅಳುತ್ತ ಮಲಗಿರಲಿಲ್ಲ. ಅವನ ಮನೆ ಇಂದುವಿನ ಕೈವಾಡದಿಂದ ನೂತನ ರೂಪ ತಳೆದು ದೀಪದ ಬೆಳಕಿನಲ್ಲಿ ಬೆಳಗುತ್ತಿತ್ತು. ನಗುಮುಖದ ವಾಣಿ ಅವನ ಬರುವನ್ನೇ ಇರು ನೋಡುತ್ತ ಅಡುಗೆಯನ್ನು ಸಿದ್ಧಪಡಿಸಿ ಕಾಯುತ್ತಿದ್ದಳು.

ಆದರೆ ಇದೆಲ್ಲಾ ನೋಡಿ ಅವನಿಗಾದ ಆಶ್ಚರ್ಯ–ಆನಂದ ಕೇವಲ ಒಂದೇ ಒಂದು ಗಳಿಗೆ ಮಾತ್ರ. ವಾಣಿಯು ಬಡಿಸುತ್ತಿದ್ದ ಅಡಿಗೆಯನ್ನು ಊಟ ಮಾಡುತ್ತಿರುವಾಗಲೇ ನೆರೆಮನೆಯ ಇಂದುವಿನ ಕೃತಿ ಇದು ಎಂದವನಿಗೆ ತಿಳಿಯದೆ ಹೋಗಲಿಲ್ಲ. ತಿಳಿದು ಹಿಂದಿನಂತೆ 'ನನ್ನ ವಾಣಿಯೂ ಹೀಗಯೇ ಕಾರ್ಯ ಕುಶಲೆಯಾಗಿದ್ದರೆ'– ಎಂದೆಂದುಕೊಳ್ಳುವ ಬದಲು ತಾನೆಂದೂ ನೋಡದ ಇಂದುವಿನ ರೂಪವನ್ನು ಕಲ್ಪಿಸತೊಡಗಿದ. ಅವನನ್ನು ಮೆಚ್ಚಿಸಬೇಕೆಂದು ಆ ದಿನ ವಾಣಿಯು ಆಡಿದ ಮಾತುಗಳೆಲ್ಲಾ ಅವನಿಗೆ ಬಲು ದೂರದಿಂದ ಕೇಳಿಸಿದಂತಿದ್ದುವು. ಅವನ ಅನ್ಯಮನಸ್ಕತೆಯನ್ನು ಕಂಡು ವಾಣಿ 'ಬೆಳಗಿನಿಂದಲೂ ಊಟವಿಲ್ಲದೆ ಬಹಳ ದಣಿದಿರುವರು' ಎಂದು ಮನದಲ್ಲಿಯೇ ಹಲುಬಿದಳು. 'ಇನ್ನು ಮುಂದೆಂದೂ ಹೀಗಾಗಗೊಡುವುದಿಲ್ಲ' ಎಂದು ಪ್ರತಿಜ್ಞೆಯನ್ನು ಮಾಡಿಕೊಂಡಳು. ಹಿಂದೆಷ್ಟೋ ಸಾರಿ ವಾಣಿ ಇದೇ ರೀತಿಯ ಪ್ರತಿಜ್ಞೆಗಳನ್ನು ಮಾಡಿಕೊಂಡಿದ್ದರೂ ಅವುಗಳನ್ನೆಂದೂ ನೆರವೇರಿಸಲಿಲ್ಲ. ಆದರೆ ಈ ಸಾರಿ ದಿನಬೆಳಗಾದರೆ ಇಂದು

ಕೆಲಸಕ್ಕೆ ಇಂದು ನೆರವಾಗುತ್ತಿದ್ದುದರಿಂದ ವಾಣಿಗೆ ಪ್ರತಿಜ್ಞಾ ಪಾಲನೆಯು ಕಷ್ಟವಾಗಿ ತೋರಲಿಲ್ಲ. ನಿಜವಾಗಿ ನೋಡಿದರೆ ಇಂದುವೇ ವಾಣಿಯ ಪ್ರತಿಜ್ಞೆಯನ್ನು ಪಾಲಿಸುವವಳಾಗಿದ್ದಳು.

೫

ಯೋಚನೆಗಳಿಗೆ ಎಡೆಕೊಡಬಾರದೆಂದು ಇಂದು ತನ್ನ ಹೆಚ್ಚಿನ ಸಮಯವನ್ನು ವಾಣಿಯ ಗೃಹಕೃತ್ಯಗಳಿಗಾಗಿ ಉಪಯೋಗಿಸತೊಡಗಿದಂದಿನಿಂದ ಅವರ ಗೃಹಕಾರ್ಯಗಳು ಸುಸೂತ್ರವಾಗಿ ನಡೆಯತೊಡಗಿದುವು. ತನ್ನ ಮನೆಯಲ್ಲಾದ ಈ ಮಾರ್ಪಾಡನ್ನು ರತ್ನ ನೋಡದಿರಲಿಲ್ಲ. ನೋಡುತ್ತಿದ್ದಂತೆ ತಾನೆಂದೂ ನೋಡದಿದ್ದ ಇಂದುವಿನ ಕಾರ್ಯಕುಶಲತೆಗಾಗಿ ಅವನ ಮೆಚ್ಚಿಕೆಯು ಬೆಳೆಯದಿರಲಿಲ್ಲ. ಮನೆಯ ಪ್ರತಿಯೊಂದು ವಸ್ತುವಿನ ಸುವ್ಯವಸ್ಥಿತ ಶಿಸ್ತಿನಲ್ಲಿಯು ಅವನಿಗೆ ಇಂದುವಿನ ನೆನಪಾಗುತ್ತಿತ್ತು. ಅವಳನ್ನವನು ಪ್ರತ್ಯಕ್ಷವಾಗಿ ನೋಡಿರದಿದ್ದರೂ ಅವಳ ಕೆಲಸಗಳನ್ನು ನೋಡಿ ಅವಳ ಚಿತ್ರವನ್ನು ಕಲ್ಪಿಸಿಕೊಂಡಿದ್ದನು. ಅವನ ಆ ಕಾಲ್ಪನಿಕ ಇಂದುವು ಆದರ್ಶ ಸ್ತ್ರೀಯಾಗಿದ್ದಳು. ಸುಯೋಗ್ಯ ಗೃಹಿಣಿಯಾಗಲು ಬೇಕಾದ ಎಲ್ಲಾ ಸುಗುಣಗಳೊಡನೆ ಅವಳಿಗೆ ಅಪೂರ್ವ ಸೌಂದರ್ಯವೂ ಇತ್ತು. ಆದರೆ ಅದೇಕೋ! ಇಷ್ಟೆಲ್ಲ ಸುಂದರವಾಗಿ ಚಿತ್ರಿಸಿದ ಆ ಇಂದುವಿನ ಮೋರೆಯಲ್ಲಿ ನಗುವಿಲ್ಲ–ಅವಳ ಕಣ್ಣುಗಳಲ್ಲಿ ಹಾಸ್ಯವಿಲ್ಲ. ಬಹುಶಃ ಯಾವಾಗಲೂ ನಗುನಗುತ್ತಿರುವ ವಾಣಿಯನ್ನು ನೋಡಿ ಕೊಡಿದ್ದುದರಿಂದಲೇನೋ! ಅವಳಿಗಿಂತ ಎಲ್ಲಾ ತರದಲ್ಲೂ ಬೇರೆಯಾದ ಇಂದುವಿನ ಮುಖದಲ್ಲಿ ನಗುವಿರಬಾರದೆಂದು ಹಾಗೆ ಚಿತ್ರಿಸಿರಬಹುದು.

ಮೊದಮೊದಲು ಅವಳ ಕೆಲಸಗಳನ್ನು ಮೆಚ್ಚಿ, ಇಷ್ಟೊಂದು ಕಾರ್ಯಕುಶಲೆಯಾದ ಇಂದು ಹೇಗಿರಬಹುದು ಎಂದು ಒಂದು ತರದ ಕುತೂಹಲದಿಂದ ಇಂದುವಿನ ಚಿತ್ರವನ್ನು ಮನದೊಳಗೇ ಚಿತ್ರಿಸತೊಡಗಿದ್ದ ರತ್ನನಿಗೆ ಬರಬರುತ್ತ ಅವಳನ್ನು ಯಾವಾಗಲೂ ಚಿತ್ರಿಸುವುದೇ ಒಂದು ಹವ್ಯಾಸವಾಗಿ ಹೋಯ್ತು. ಒಮ್ಮೊಮ್ಮೆ ತುಂಬಾ ಕೆಲಸದ ಮಧ್ಯದಲ್ಲೂ ಅವನಿಗೆ ಇಂದುವಿನ ಯೋಚನೆ ಬಂದು ಬಿಡುತ್ತಿತ್ತು. ತಾನು ಯತ್ನಿಸದಿದ್ದರೂ ತಾನಾಗಿ ಮೂಡುವ ಅವಳ ಯೋಚನೆ, ರೂಪಗಳಿಗಾಗಿ ಅವನಿಗೇ ಆಶ್ಚರ್ಯವಾಗುತ್ತಿತ್ತು. ಇದೆಂಥಾ ಭ್ರಾಂತಿ! ಎಂದು ಸ್ವಲ್ಪ ಕೋಪವೂ ಬರುತ್ತಿತ್ತು. ಆದರಿದೆಲ್ಲಾ ವಾಣಿಯ ಪ್ರತಿಜ್ಞೆಗಳಂತೆ ಒಂದು ಸ್ವಲ ಹೊತ್ತಿಗೆ ಮಾತ್ರವಷ್ಟೆ. ಇತರರ ಅಸಾಧ್ಯ ರೋಗಗಳನ್ನು ತನ್ನ ಔಷಧಿಗಳ ಬಲದಿಂದ ವಾಸಿಮಾಡುತ್ತಿದ್ದ ರತ್ನನಿಗೆ ಕೊನೆಕೊನೆಗೆ ಇಂದುವನ್ನು ಚಿತ್ರಿಸುವ ರೋಗದಿಂದ ಪಾರಾಗಲು ಅಸಾಧ್ಯವಾಗಿ ತೋರಿತು. ಏನೇನು ಮಾಡಿದರೂ ತನ್ನ ಮನೋರಾಜ್ಯದಿಂದ ಮಾಸದ ಇಂದುವಿನ ಕಾಲ್ಪನಿಕ ರೂಪವನ್ನು ಸಂಪೂರ್ಣವಾಗಿ ಉಜ್ಜಿ ಬಿಡಲು ಅವನಿಗೆ ಕೊನೆಗೆ ತೋರಿದ ಒಂದೇ ಒಂದು ಉಪಾಯವೆಂದರೆ ಅವಳನ್ನು ಪ್ರತ್ಯಕ್ಷವಾಗಿ ನೋಡಿ ಬಿಡುವುದು. ತಾನು ಚಿತ್ರಿಸಿದಷ್ಟು ಸುಂದರವಾಗಿರದ ಅವಳನ್ನು ಸ್ವತಃ ನೋಡಿದರೆ ತನ್ನ ಭ್ರಾಂತಿ ಮಾಸಬಹುದೆಂದು ಅವನಿಗೆ ತೋರಿತು.

ರತ್ನನಿಗೆ ಇಂದುವನ್ನು ಪ್ರತ್ಯಕ್ಷ ನೋಡಿಕೊಳ್ಳುವುದೇನೂ ಕಷ್ಟದ ಮಾತಾಗಿರಲಿಲ್ಲ. ತಾನು ಮನೆಯಲ್ಲಿಲ್ಲದ ವೇಳೆಯಲ್ಲೆಲ್ಲಾ ಅವಳು ತನ್ನ ಮನೆಗೆ ಬರುವಳೆಂದು ಅವನಿಗೆ ಗೊತ್ತಿದ್ದ ವಿಷಯ. ಅನಿರೀಕ್ಷಿತವಾಗಿ ತಾನು ಮನೆಗೆ ಬಂದುದಾದರೆ ಅವಳು ಕಾಣಸಿಕ್ಕುವಳೆಂದೂ ಅವನಿಗೆ ಗೊತ್ತು. ಅದೇ ಒಂದು ದಿನ ಸಾಯಂಕಾಲ ಮನೆಗೆ ಬರಲು ಹೊತ್ತಾಗುವದೆಂದು ಹೇಳಿ ಹೋದವನು ಮೂರು ಗಂಟೆ ಹೊಡೆಯುವ ಮೊದಲೇ ಮನೆಗೆ ಬಂದ. ತನ್ನೆಣಿಕೆಯಂತೆ ಇಂದುವು ಮನೆಯಲ್ಲಿರುವಳೆಂದು ಬಾಗಿಲಿಗೆ ಬರುವಾಗಲೇ ಒಳಗೆ ನಡೆಯುತ್ತಿದ್ದ ಸಂಭಾಷಣೆಯಿಂದ ಅವನಿಗೆ ತಿಳಿಯಿತು. ನಿಧಾನವಾಗಿ ಒಳಗೆ ಹೋದ.

ನಡುಮನೆಯ ಮೇಜಿನ ಮೇಲೆ ಬಿದ್ದಿದ್ದ ಒಂದು ಮೂಟೆ ಅವನ ಬಟ್ಟೆಗಳನ್ನು ಇಸ್ತ್ರಿ ಮಾಡಿ ಮಡಿಸಿಡುತ್ತಾ ಬಾಗಿಲಿಗೆ ಬೆನ್ನುಹಾಕಿ ನಿಂತಿದ್ದಳು, ಇಂದು. ವಾಣಿ ಅದೇ ಮೇಜಿನ ಒಂದು ಕೊನೆಯಲ್ಲಿ ಕಾಲುಗಳನ್ನು ಇಳಿಬಿಟ್ಟುಕೊಂಡು ಕುಳಿತು ಮಾತಿನ ಸಂಭ್ರಮದಲ್ಲಿ ಮೈಮರೆತಿದ್ದಳು.

ಬಾಗಿಲ ಹತ್ತಿರವೇ ಐದಾರು ನಿಮಿಷಗಳಿಂದ ರತ್ನ ನಿಂತಿದ್ದರೂ ಇಬ್ಬರಿಗೂ ಅವನು ಬಂದುದು ತಿಳಿಯಲಿಲ್ಲ. ರತ್ನ ಮಾತಿನ ಮಳೆ ಸುರಿಸುತ್ತಿದ್ದ ತನ್ನ ಹೆಂಡತಿಯನ್ನೂ, ಕೆಲಸದಲ್ಲಿ ಮುಳುಗಿದ್ದರೂ ಅವಳಿಗೆ ಸಮಯೋಚಿತವಾದ ಉತ್ತರಗಳನ್ನು ಹೇಳುತ್ತಿದ್ದ ಇಂದೂವನ್ನೂ ಜೊತೆಯಾಗಿ ನೋಡಿದ. ಅವರಿಬ್ಬರೊಳಗಿನ ಅಜಗಜಾಂತರ ವ್ಯತ್ಯಾಸವನ್ನೂ ನೋಡಿ ಇಂದುವಿನ ಚಿತ್ರಣವನ್ನು ಸಂಪೂರ್ಣವಾಗಿ ಉಜ್ಜಿ ಬಿಡಬೇಕೆಂದು ಬಂದಿದ್ದವನು ಹೊಸದಾಗಿ ಚಿತ್ರಿಸತೊಡಗಿದ. ಹೌದು, ಅವನ ಕಾಲ್ಪನಿಕ ಇಂದುವಿನ ಅಪ್ರತಿಮ ಸೌಂದರ್ಯವು ನಿಜವಾದ ಇಂದುಗಿಲ್ಲದಿದ್ದರೂ ಅವಳ ಕಾರ್ಯತತ್ಪರತೆಯು ಆ ಕಮ್ಮಿಯನ್ನು ತುಂಬಿಕೊಟ್ಟಿತು. ಐದು, ಹತ್ತು, ಹದಿನೈದು, ನಿಮಿಷಗಳಾದರೂ ರತ್ನ ನಿಂತಲ್ಲಿಂದ ಕದಲಲಿಲ್ಲ. ಈ ಮಧ್ಯೆ ವಾಣಿ ಅದೇಕೋ ಬಾಗಿಲ ಕಡೆ ತಿರುಗಿದವಳೂ ರತ್ನನನ್ನು ನೋಡಿ–'ಏನು ಇಷ್ಟೊಂದು ಬೇಗ?

ಸಿನಿಮಾಕ್ಕೋಗೋದಕ್ಕೋ..' ಎಂದು ಮೇಜಿನಿಂದ ಕೆಳಗಿಳಿದಳು. ಆಗಲೇ ಇಂದುವಿಗೂ ರತ್ನ ಬಂದುದರ ಅರಿವಾದುದು. ಅವನ ಆಕಸ್ಮಿಕ ಬರುವಿನಿಂದ ಅಪ್ರತಿಭಳಾದ ಅವಳು ಫಕ್ಕನೆ ಇಸ್ತ್ರಿ ಪೆಟ್ಟಿಗೆಯನ್ನು ಕೆಳಗಿಟ್ಟು ತಿರುಗಿದಳು. ಸರಿ, ರತ್ನನ ಚಿತ್ರದಲ್ಲಿ ಬಾಕಿ ಉಳಿದಿದ್ದ ಮುಖವೂ ಪೂರ್ಣವಾಯ್ತು.

ತಿರುಗಿದ ಇಂದು ಎವೆಯಿಕ್ಕದೆ ತನ್ನ ಮುಖ ನೋಡುತ್ತಿದ್ದ ರತ್ನನನ್ನು ನೋಡಿ ಸಂಕೋಚದಿಂದ ಮಾಡುವ ಕೆಲಸವನ್ನು ಅಷ್ಟಕ್ಕೇ ಬಿಟ್ಟು ಹಿತ್ತಲ ಬಾಗಿಲಿಯಿಂದ ತನ್ನ ಮನೆಗೆ ನಡೆದು ಬಿಟ್ಟಳು. ರತ್ನ ತನ್ನನ್ನು ಸಿನಿಮಾಕ್ಕೆ ಕರೆದು ಕೊಂಡು ಹೋಗುವ ಸಲುವಾಗಿ ಬೇಗ ಬಂದಿರುವನೆಂದೆಣಿಸಿದ ವಾಣಿ ಅವನೊಡನೆ ಪ್ರಶ್ನೆ ಕೇಳುವ ಸಂಭ್ರಮದಲ್ಲಿ ಅವಳನ್ನು ತಡೆಯಲೂ ಇಲ್ಲ.

ಮತ್ತೆ ಒಂದೂವರೆ ಗಂಟೆಯ ತರುವಾಯ ವಾಣಿ ಇಂದುವನ್ನೂ ತಮ್ಮೊಡನೆ ಸಿನಿಮಾಕ್ಕೆ ಕರೆದುಕೊಂಡು ಹೋಗುವ ಸಲುವಾಗಿ ಅವಳ ಮನೆಗೆ ಹೋದಾಗ ಇಂದು ತಲೆನೋವೆಂದು ಮಲಗಿದ್ದಳು. ವಾಣಿ 'ಸಿನಿಮಾಕ್ಕೆ ಬಾ' ಎಂದು ಮಾಡಿದ ಬಲವಂತವೆಲ್ಲವೂ ವ್ಯರ್ಥವಾಯ್ತು. ನಿಜಕ್ಕೂ ಅವಳಿಗೆ ತಲೆನೋವಿದ್ದುದೇನೋ ಹೌದು. ಆದರೆ ಆ ತಲೆನೋವು ಬರಲು ಕಾರಣ ಬಗೆಹರಿಯದಿದ್ದೊಂದು ಸಮಸ್ಯೆ ಎಂದು ಮಾತ್ರ ವಾಣಿಗೆ ತಿಳಿಯಲಿಲ್ಲ. ತಿಳಿದಿದ್ದರವಳು ಸಿನಿಮಾಕ್ಕೆಂದು ಹೊರಟು ನಿಂತಿದ್ದ ರತ್ನನನ್ನು ಇಂದುವಿನ ಮನೆಗೆ ಕರೆತರುತ್ತಿರಲಿಲ್ಲ.

ಸಿನಿಮಾವನ್ನು ನೋಡಿಯಾದರೂ ಇಂದುವಿನ ಚಿತ್ರವು ಅಳಿಸಿ ಹೋಗಬಹುದೆಂದು ರತ್ನ ವಾಣಿಯ ಇಚ್ಛೆಯಂತೆ ಸಿನಿಮಾಕ್ಕೆ ಹೊರಟಿದ್ದ. ಆದರೆ ಅಷ್ಟಕ್ಕೇ ಹುಡುಗಾಟಿಕೆಯ ವಾಣಿ ಸುಮ್ಮನಾಗದೆ 'ಇಂದುವನ್ನೂ ಕರೆದುಕೊಂಡು ಹೋಗೋಣ' ಎಂದು ರತ್ನ ವಿರೋಧಿಸುತ್ತಿದ್ದಂತೆಯೆ ಇಂದುವನ್ನು ಕರೆದುಕೊಂಡು ಬರಲು ಓಡಿದಳು. ವಾಣಿ ಹಿಂತಿರುಗುವಾಗ ಇಂದು ಅವಳ ಜೊತೆಯಲ್ಲಿಲ್ಲದುದನ್ನು ನೋಡಿ ರತ್ನನಿಗೆ ಸಮಾಧಾನವಾಯ್ತು. ಆದರೆ ವಾಣಿ ಬಂದು 'ಇಂದುವನ್ನು ಸ್ವಲ್ಪ ನೋಡಿ ಔಷಧಿ ಮಾಡಿ ಕೊಡಿ' ಎನ್ನುವಾಗ ಅವನಿಗೆ ವಾಣಿಯ ಹುಡುಗಾಟಿಕೆಗಾಗಿ ಕೋಪ ಬಂತು. 'ಸ್ವಲ್ಪ ತಲೆನೋವಾದ್ರೆ ಏನ್ಮಹಾ! ಒಂದು ಏಸ್ಪರಿನ್ ಮಾತ್ರೆ ಕೊಟ್ಟು ಬೇಗ ಬಾ–ಹೊತ್ತಾಗಿ ಹೋಗುತ್ತೆ' ಎಂದು ಸ್ವಲ್ಪ ಒರಟಾಗಿಯೇ ಹೇಳಿದ. ಬೇರೆ ಸಮಯದಲ್ಲಾಗಿದ್ದರೆ ಇಂದುವನ್ನು ನೋಡಿ ಔಷಧಿ ಕೊಡಲು ಅವನಿಗೆ ಯಾವ ಅಭ್ಯಂತರವೂ ಇರುತ್ತಿರಲಿಲ್ಲ. ದಿನ ಬೆಳಗಾದರೆ ನೋಡುವ ಇತರ ರೋಗಿಗಳ ಗುಂಪಿಗೆ ಅವಳು ಸೇರಿಹೋಗುತ್ತಿದ್ದಳು.

ಆದರೆ ಆಗ, ಇಂದುವನ್ನು ಮರೆಯಬೇಕೆಂದು ಯತ್ನಿಸುತ್ತಿರುವಾಗ, ಅವಳ ಮನೆಗೇ ಹೋಗಿ ಔಷಧಿ ಮಾಡಿಕೊಡಬೇಕೆಂದು ಬಲವಂತಪಡಿಸುವ ವಾಣಿಯ ಮಾತುಗಳು ಅವನಿಗೆ ಅಸಹ್ಯವಾಗಿದ್ದವು. ಇದು ಸರಳ ವಾಣಿಯ ಹುಡುಗಾಟಿಕೆಯ ಬುದ್ಧಿಗೆ ತಿಳಿಯುವುದು ಹೇಗೆ? ಒಂದೇ ಸಮನೆ ಹಠಮಾಡಿ ಕೊನೆಗೂ ರತ್ನನನ್ನು ಇಂದುವಿನ ಮನೆಗೆ ಎಳೆದೊಯ್ದಳು.

ಒಂದೇ ದಿನದಲ್ಲಿ, ಕೆಲವೇ ಗಂಟೆಗಳ ಅಂತರದಲ್ಲಿ, ಅದೂ ಅವಳ ಮನೆಯಲ್ಲೇ ರೋಗಿಯ ಅವಸ್ಥೆಯಲ್ಲಿ ಇಂದುವನ್ನು ಪುನಃ ನೋಡುವ ಪ್ರಸಂಗವು ಬರಬಹುದೆಂದು ರತ್ನ ಎಂದೂ ಯೋಚಿಸಿರಲಿಲ್ಲ. ಅದರಲ್ಲೂ ತಾನು ಇನ್ನೊಮ್ಮೆ ನೋಡುವಾಗ ಅವಳಳುವುದನ್ನು ನೋಡಬಹುದು ಎಂಬುದು ಅವನು ಕನಸಿನಲ್ಲಿ ಸಹ ಊಹಿಸದ ಮಾತು. ಹೌದು; ಇಂದು ಅಳುತ್ತಿದ್ದಳು– ಬಿಕ್ಕಿ ಬಿಕ್ಕಿ ಚಿಕ್ಕಮಕ್ಕಳಂತೆ ಅಳುತ್ತಿದ್ದಳು. ತಲೆನೋವಿನ ಬಾಧೆಗಾಗಿ ತಾನಳುವುದಿಲ್ಲವೆಂದು ಗೊತ್ತಿದ್ದರೂ, ಅಳುವ ಕಾರಣವು ಏನೇಂದು ಅವಳಿಗೇ ತಿಳಿಯದಷ್ಟು ಸೂಕ್ಷ್ಮವಾಗಿತ್ತು.

ವಾಣಿ ಮೊದಲನೆಯ ಸಾರಿ ಬಂದುಹೋದ ತರುವಾಯ ಅವಳ ಅಳು ಸುರುವಾಗಿತ್ತು. ತಾನತ್ತರೂ–ಸತ್ತರೂ ಬಂದು ನೋಡುವವರು ಯಾರೂ ಇಲ್ಲವೆಂಬ ಧೈರ್ಯದಿಂದಲೇ ಅಳುವೂ ನಿರಾತಂಕವಾಗಿ ಸಾಗಿತ್ತು. ಅವಳೆಣಿಸಿದಂತೆ ವಾಣಿ ಸಿನಿಮಾಕ್ಕೆ ಹೋಗದೆ ರತ್ನನನ್ನು ತಮ್ಮನೆಗೆ ಕರೆದುಕೊಂಡು ಬರುವಳೆಂದು ಅವಳಿಗೆ ಹೇಗೆ ಗೊತ್ತಾಗಬೇಕು?

ಅವಳಳುವಿಗೆ ವಾಣಿ ರತ್ನ ಇಬ್ಬರಿಗೂ ತೋರಿದ ಒಂದೇ ಒಂದು ಕಾರಣ ಅವಳ ಅಸಾಧ್ಯವಾದ ತಲೆನೋವು. ಎಷ್ಟು ಅಕಸ್ಮಾತ್ತಾಗಿ ಇಂದುವಿನ ಅಳೂವು ಸುರುವಾಗಿತ್ತೋ ಅಷ್ಟೇ ಬೇಗನೆ ರತ್ನ ವಾಣಿಯರನ್ನು ನೋಡಿ ನಿಂತುಹೋಯ್ತು. ಚಿಕ್ಕ ಮಕ್ಕಳಂತೆ ತಾನಳುವುದನ್ನು ಅವರು ನೋಡಿಬಿಟ್ಟರಲ್ಲಾ ಎಂದು ಅವಳು ಭೂಮಿಗಿಳಿದು ಹೋದಳು. ಮತ್ತೆ ತನಗೆ ಹೇಳದೆಯೇ ವಾಣಿ ರತ್ನನನ್ನು ಕರೆದುಕೊಂಡು ಬಂದಳಲ್ಲಾ ಎಂದು ಬೇರೆ. ರತ್ನನಿಗೂ ಹಾಗೆಯೇ. ಇಂದು– ಅಳುತ್ತಿರುವ ಇಂದುವನ್ನು ನೋಡಿ ಮನಸ್ಸಿನ ಬೇರಲ್ಲಾ ಯೋಚನೆಗಳೂ ಮಾಯವಾಗಿ, ಚಿಕ್ಕಮಕ್ಕಳನ್ನು ಸಂತೈಸುವಂತೆ ಅವಳನ್ನೂ ಸಂತೈಸಿ ಸಮಾಧಾನ ಪಡಿಸಬೇಕೆಂದು ತೋರಿತು. ಆದರೆ ಪಕ್ಕದಲ್ಲೇ ನಿಂತಿದ್ದ ವಾಣಿಯೂ ಅವನ ನಾಲ್ಕಾರು ವರ್ಷಗಳ ರೋಗಿಗಳನ್ನು ನೋಡಿದ ಅಭ್ಯಾಸ ಬಲವೂ ಅವನನ್ನು ಬದುಕಿಸಿದವು. ಮನದೊಳಗೆ ಯೋಚನೆಗಳ ಯುದ್ಧವೇ

ನಡೆಯುತ್ತಿದ್ದರೂ ಹೊರಗೆ ಗಂಭೀರವಾಗಿ ಅವಳ ತಲೆಮುಟ್ಟಿ ನೋಡಿದ. ಮತ್ತೆ ವಾಣಿಯ ಕಡೆ ತಿರುಗಿ 'ಜ್ವರವೂ ಇದೆ' ಎಂದ. ಅದಕ್ಕೆ ವಾಣಿ 'ನೀವು ಔಷಧಿ ಮಾಡಿಕೊಟ್ಟು ಸಿನಿಮಾಕ್ಕೆ ಹೋಗಿ; ನಾನಿಲ್ಲೇ ಇರುತ್ತೇನೆ' ಎಂದು ಇಂದುವಿನ ವಿರೋಧವನ್ನು ಮೂಲೆಗೊತ್ತಿ ಅಲ್ಲೇ ಕುಳಿತುಬಿಟ್ಟಳು. ರತ್ನ ಒಬ್ಬನೇ ಸಿನಿಮಾಕ್ಕೆ ಹೋದ. ಆದರೆ ಆ ದಿನ ರಾತ್ರಿ ವಾಣಿ 'ನೀವು ನೋಡಿದ ಚಿತ್ರ ಯಾವುದು?' ಎಂದು ಕೇಳಿದರೆ 'ಅಳುತ್ತಿದ್ದ ಇಂದುವಿನ ಮುಖ' ಎಂದವನು ಹೇಳಬೇಕಾಗುತ್ತಿತ್ತು.

೬

ಅಂದಿನ ತಲೆನೋವು ಇಂದು ರತ್ನರ ಪರಿಚಯಕ್ಕೆ ಅಡಿಗಲ್ಲಾಯಿತು. ಮೊದಮೊದಲು ರತ್ನನಿದಿರು ಹೋಗಲು ನಾಚುತ್ತಿದ್ದ ಇಂದು ಈಗವನೊಡನೆ ನಿಸ್ಸಂಕೋಚವಾಗಿ ಮಾತಾಡುತ್ತಿದ್ದಳು. ಅವರಿಬ್ಬರೊಡನೆ ಸಿನಿಮಾಕ್ಕೆ ಹೋಗುವುದು ಸಹ ಅವಳ ಕಾರ್ಯಕ್ರಮಗಳಲ್ಲಿ ಸೇರಿ ಹೋಯ್ತು. ಹೀಗೆ ನೆರೆಮನೆಯ ಒಕ್ಕಲು ಬಂದು ಆರು ತಿಂಗಳು ತುಂಬುವ ಮೊದಲು ಇಂದುವಿನ ಏಕಾಂತ ಜೀವನ ಸಂಪೂರ್ಣ ಬದಲಾಯಿತು. ಬದಲಾಯಿತು ಅಷ್ಟೆ–

ಆದರಿಂದವಳಿಗೆ ಹೆಚ್ಚಿನ ಶಾಂತಿ ಯಾ ಸುಖ ದೊರೆಯಿತೆಂದರೆ ತಪ್ಪಾಗುವುದು. ಆ ಮನೆಗೆ ಮೊದಲು ಬಂದಾಗಿದ್ದ ತನ್ನ ಮನೆ, ತಾನು, ಸ್ವತಂತ್ರವಾಗಿ ಸುಖವಾಗಿದ್ದೇನೆ ಎಂಬ ಅಭಿಮಾನವೂ ತೃಪ್ತಿಯೂ ಈಗಿರಲಿಲ್ಲ ಅಷ್ಟರಲ್ಲೇ ನಾನು ಸುಖವಾಗಿದ್ದೇನೆ–ಇರಬಲ್ಲೆ ಎಂದಿದ್ದ ಅವಳ ಭಾವನೆಯು ವಾಣಿ ರತ್ನರ ಸಂಸಾರವನ್ನು ನೋಡಿದಂದಿನಿಂದ ತನ್ನ ಜೀವನದಲ್ಲೂ ಒಂದು ದೊಡ್ಡ ಅಭಾವವಿದೆ ಎಂಬುದನ್ನು ಕಂಡುಕೊಂಡಿತ್ತು. ಮೊದಲು ಬಲು ಅಸ್ಪಷ್ಟವಾಗಿ ಮೊಳೆತ ಈ ಭಾವನೆಯು ವಾಣಿ ರತ್ನರಲ್ಲಿ ಹೆಚ್ಚಿನ ಬಳಕೆಯಾದಂತೆಲ್ಲಾ ಚಿಗುರುತ್ತಲೇ ಇತ್ತು. ಮತ್ತೆ ರತ್ನನೂ ಸದಾ ಇವಳನ್ನು ಯೋಚಿಸುತ್ತಿದ್ದುದರಿಂದಲೇನೋ! ಅವಳ ಮನವು ಇಚ್ಛೆಗೆ ವಿರೋಧವಾಗಿ ರತ್ನನ ಕಡೆ ಒಲಿಯತೊಡಗಿತು.

ಇಂದು ರತ್ನರ ಮನಸ್ಸಿನಲ್ಲಿ ಒಬ್ಬರದೊಬ್ಬರಿಗೆ ತಿಳಿಯದಂತೆ ಈ ರೀತಿಯ ಭಾವನೆಗಳು ಮೂಡಿ ಮೊಳೆಯುತ್ತಿದ್ದಾಗ, ವಾಣಿಗೆ ಅಕಸ್ಮಾತ್ತಾಗಿ ತೌರುಮನೆಗೆ ಹೋಗುವ ಪ್ರಸಂಗ ಬಂದಿತು. ಬೇಸಿಗೆಯಲ್ಲಿ ಒಂದು ತಿಂಗಳು ರಜಾ ಪಡೆದು ಗಂಡಹೆಂಡಿರಿಬ್ಬರೂ ಜೊತೆಯಾಗಿ ಹೋಗುವುದೆಂದು ಮೊದಲೇ ನಿಶ್ಚಯವಾಗಿತ್ತು. ಆದರೆ ಅನಿರೀಕ್ಷಿತವಾಗಿ ಅವಳ ತಾಯಿಗೆ ಖಾಯಿಲೆ ಎಂದು ಅವಳಣ್ಣ ಅವಳನ್ನು ಕರೆದುಕೊಂಡು ಹೋಗಲು ಬಂದುಬಿಟ್ಟ. ರತ್ನನಿಗೆ ಆಗ ರಜಾ ಸಿಕ್ಕುವಂತಿರಲಿಲ್ಲ. ಆದುದರಿಂದ ವಾಣಿಯೊಬ್ಬಳೇ ಅಣ್ಣನೊಡನೆ ಹೊರಟು ಹೋದಳು.

ಹುಚ್ಚು ಹುಡುಗಿ! ಹೋಗುವಾಗ ಇಂದುವಿನೊಡನೆ 'ಇಂದೂ, ಅಮ್ಮನಿಗೆ ಕಾಯಿಲೆ; ವಾಸಿಯಾದೊಡನೆಯೇ ಬಂದುಬಿಡುತ್ತೇನೆ. ನಾನು ಬರುವ ತನಕ ಸ್ವಲ್ಪ ನಮ್ಮ ಮನೆ ಕಡೆ ನೋಡಿಕೋ' ಎಂದಳು ರತ್ನನೂ ಅಲ್ಲೇ ನಿಂತಿದ್ದ. ಇಂದು ಬೇರೇನೂ ಹೇಳಲಾರದೆ 'ಹೂಂ' ಎಂದಳು. ಆದರೆ ವಾಣಿಯೊಡನೆ 'ಹೂಂ' ಎಂದುದೆಷ್ಟೋ ಅಷ್ಟೇ– ಅವಳು ಹೊರಟುಹೋದ ತರುವಾಯ ಇಂದು ಆ ಕಡೆ ಹೋಗಲಿಲ್ಲ. ಅವಳು ಸ್ವಭಾವತಃ ಪಾಪಭೀರು. ಸಮಾಜದ ಕಟ್ಟು–ಕಟ್ಟಲೆಗಳನ್ನೇ ದೇವರ ನಿಯಮಗಳು ಎಂದು ತಿಳಿದು ಬೆಳೆದವಳು. ಅವಳಿಗೆ ತನ್ನೊಲವು ರತ್ನನ ಕಡೆ ತಿರುಗಿದೆ ಎಂಬುದರ ಅರಿವು ಆದಾಗಲೇ ಬಹಳ ಭಯವಾಯಿತು. ವಾಣಿ ಹೊರಟುಹೋದ ಮೇಲಂತೂ ಅವಳ ಭಯವು ಒಂದಕ್ಕೆ ಹತ್ತಾಗಿ ಬೆಳೆಯತೊಡಗಿತು. ತನ್ನ ಶಾಂತ ಜೀವನ ಪ್ರವಾಹವನ್ನು ಕಲಕಿ ಕದಡಿಸುವ ಯೋಚನೆಗಳಿಗೆ ಹೃದಯದಲ್ಲೆಡೆ ಕೊಟ್ಟೆ ಹೇಗೆ? ಏಕೆ? ಎಂಬ ಪ್ರಶ್ನೆಗಳು ಸದಾ ಅವಳನ್ನು ಬಾಧಿಸತೊಡಗಿದವು. ಆದರೆ ಈ ಯೋಚನೆಗಳ ಜೊತೆಯಲ್ಲೇ ರತ್ನನ ಮೂರ್ತಿಯೂ ಅವಳ ಹೃದಯದಲ್ಲಿ ಮೂಡಿಹೋಗಿತ್ತು. ವಾಣಿಯ ಪತಿಯನ್ನು ತಾನು ಪ್ರೀತಿಸುವುದು ಅವಳ ಶಕ್ತಿಗೆ ಮೀರಿದ ಮಾತಾಗಿತ್ತು. ತನ್ನ ಈ ಅನುಚಿತ ಪ್ರೇಮವು ರತ್ನನಿಗೆಲ್ಲಿ ತಿಳಿದು ಬಿಡುವುದೋ ಎಂಬ ಭಯದಿಂದಲೇ ಅವಳು ವಾಣಿ ಹೊರಟು ಹೋದ ತರುವಾಯ ಆ ಕಡೆ ಸಹ ಹೋಗಲಿಲ್ಲ. ಹಿತ್ತಲಲ್ಲಿದ್ದ ಹೂ ಗಿಡಗಳ ಆರೈಕೆ ಮಾಡುವುದು ಸಹಾ ನಿಂತು ಹೋಯ್ತು. ತಾನಲ್ಲಿದ್ದಾಗ ನೆರೆಮನೆಯ ಹಿತ್ತಲಲ್ಲಿ ರತ್ನ ಭೇಟಿಯಾಗಬಹುದೆಂಬ ಭಯವೇ ಇದಕ್ಕೆ ಕಾರಣ.

ಈಗಂತೂ ಹೋಗದ ಹೊತ್ತನ್ನು ಕೊಲ್ಲುವುದಕ್ಕೆ ಇಂದುವುಗುಳಿದ ಒಂದೇ ಒಂದು ಸಾಧನ; ಭಾವನಾ ಪ್ರಪಂಚದಲ್ಲಿ ಹಗಲು ಕನಸುಗಳನ್ನು ಹಣೆಯುವುದು; ಎಷ್ಟಾದರೂ ಇವೆಲ್ಲಾ ಕನಸುಗಳೇ ಎಂದು ಕಣ್ಣೀರು ತಂದುಕೊಳ್ಳುವುದು.

ವಾಣಿ ಇದ್ದಾಗ ಪ್ರತಿದಿನ ಇಂದುವನ್ನು ನೋಡುತ್ತಿದ್ದ ರತ್ನನಿಗೆ ಈಗವರಿಬ್ಬರೂ ಜೊತೆಯಾಗಿ ಇಲ್ಲದಂತಾದುದರಿಂದ ತುಂಬಾ ಬೇಸರವಾಯ್ತು. ದಿನಾ ಇಂದು ಅವರ ಮನೆಗೆ ಹೋಗುತ್ತಿದ್ದಾಗ ಸ್ವಲ್ಪ ಸ್ವಲ್ಪವಾಗಿ ಅವನ ಹೃದಯವನ್ನಾಕ್ರಮಿಸಿದ್ದರ ಅರಿವು ಅವನಿಗಾದುದು ಅವಳು ಒಮ್ಮೆಗೇ ಆ ಕಡೆ ಹೋಗುವುದನ್ನು ನಿಲ್ಲಿಸಿದಾಗ, ಆಗ ಅವನಿಗೂ ಅವಳು ತಮ್ಮನೆಗೆ ಬರದಿರುವುದು ಒಳ್ಳೆಯದಾಯಿತು ಎಂದು ತೋರಿದರೂ ಚಪಲ ಮನಸ್ಸು ಮಾತ್ರ ಅವಳ ದರ್ಶನಕ್ಕೆ ತವಕಿಸುತ್ತಿತ್ತು.

ವಾಣಿ ಹೊರಟುಹೋದ ಮೇಲವನಿಗೆ ಹೋಟೆಲಿನಲ್ಲಿ ಊಟ; ಕ್ಲಬ್ಬಿನಲ್ಲಿ ವಾಸ. ಮನೆಗೆ ಬರಬೇಕಾದರೆ ಬಟ್ಟೆ ಬದಲಾಯಿಸುವುದಕ್ಕೆ, ಮತ್ತೆ ರಾತ್ರಿ ನಿದ್ರೆ ಮಾಡುವುದಕ್ಕೆ ಅಷ್ಟೆ. ಕ್ಲಬ್ಬಿನಿಂದ ಕೊನೆಯ ವ್ಯಕ್ತಿ ಹೋಗುವ ತನಕವು ಅವನಲ್ಲೇ ಇರುತ್ತಿದ್ದ. ಮತ್ತೆ ಹೋಟಲಿಗೆ ಹೋಗಿ ಊಟ ಮಾಡಿ ಮನೆ ತಲುಪಬೇಕಾದರೆ ಹನ್ನೊಂದು ಗಂಟೆ ಹೊಡೆದು ಹೋಗುತ್ತಿತ್ತು. ಆದರೂ ಹಗಲೆಲ್ಲಾದರೂ ಮನೆಗೆ ಬಂದರೆ ಹಿತ್ತಲ ಕಡೆಗೆ ಹೋಗಿ ಇಂದು ಎಲ್ಲಾದರೂ ಇರುವಳೋ ಎಂದು ನೋಡದಿರುತ್ತಿರಲಿಲ್ಲ.

ವಾಣಿ ಹೋಗಿ ಎರಡು ತಿಂಗಳುಗಳಾಗಿದ್ದರೂ ಸದ್ಯದಲ್ಲೇ ಬರುವ ಸೂಚನೆ ಏನೂ ಇರಲಿಲ್ಲ. ಒಂದು ದಿನ ಬೆಳಗ್ಗೆ ಇಂದು ನೀರು ಸೇದುತ್ತಿರುವಾಗ ರತ್ನ ಹಿತ್ತಲ ಬೇಲಿಯ ಹತ್ತಿರ ಬಂದ. ವಾಣಿ ಹೊರಟು ಹೋದ ಮೇಲೆ ಅದೇ ಅವರು ಮೊದಲ ಸಾರಿ ಒಬ್ಬರನ್ನೊಬ್ಬರು ನೋಡಿದ್ದು. ಅವಳಿರುವಾಗ ನಿಸ್ಸಂಕೋಚವಾಗಿ ಮಾತಾಡಿಕೊಂಡಿದ್ದ ಅವರಿಗೆ ಆಗ ಮಾತಾನಾಡಲು ಏನೂ ತೋರಲಿಲ್ಲ. ಆದರೂ ಇಂದು ತಾನು ಸುಮ್ಮನಿದ್ದರೆ ಮನದ ಭಾವನೆಗಳೆಲ್ಲಿ ಬಯಲಾಗುವುದೋ ಎಂಬ ಭಯದಿಂದ–ವಾಣಿ ಯಾವತ್ತು ಬರ್‍ತಾಳೆ?' ಎಂದು ಕೇಳಿದಳು. ಅವಳ ಆ ಪ್ರಶ್ನೆಗೆ ಪ್ರತುತ್ತರ ಕೊಡುವ ಬದಲು ರತ್ನ 'ಆರೋಗ್ಯವಾಗಿರುವೆಯಾ ಇಂದಿರಾ? ಇದೇನು ಇತ್ತೀಚೆಗೆ ನಿನ್ನನ್ನೂ ಕಾಣುವುದಿಲ್ಲ?' ಎಂದು ಕೇಳಿದ.

ಅದೇ ಮೊದಲವಳು ಅವನ ಬಾಯಿಂದ ತನ್ನ ಹೆಸರನ್ನು ಕೇಳಿದ್ದು. ಅಂದಿನವರೆಗೂ ಅವಳಿಗೆ ತನ್ನ ಹೆಸರು ಅಷ್ಟೊಂದು ಸುಂದರವೆಂದು ತಿಳಿದಿರಲಿಲ್ಲ.

ರತ್ನ ಬಾಯಿಂದ ಹೊರಟ ಮಾತ್ರಕ್ಕೆ ತನ್ನ ಹೆಸರಿನಲ್ಲಾದ ಬದಲಾವಣೆಯು ಅವಳ ಮುಖವನ್ನರಳಿಸಿತು. ಕಣ್ಣಗಳು ಹೃದಯದ ಗುಟ್ಟುಗಳನ್ನೆಲ್ಲಾ ಹೊರಗೆಡವಿ ಅವನ ಮುಖವನ್ನು ನೋಡಿದವು. ರತ್ನನ ಕಣ್ಣುಗಳೂ ಮನದ ಭಾವನೆಗಳನ್ನು ಮುಚ್ಚಿಟ್ಟುಕೊಂಡಿರಲಿಲ್ಲ. ಅವನ ಆ ನೋಟವೇ ಭೂಮಿಯಿಂದ ಮೇಲಕ್ಕೆ– ಬಹು ಮೇಲಕ್ಕೆ ಹೋಗಿದ್ದ ಇಂದುವನ್ನು ಧರೆಗಿಳಿಸಿ ಮರೆತಿದ್ದ ಕರ್ತವ್ಯವನ್ನು ಜಾಗೃತಗೊಳಿಸಿದ್ದು. ಮರುಕ್ಷಣ ಸೇದಿದ್ದ ನೀರನ್ನು ಸಹ ತೆಗೆದುಕೊಳ್ಳದೆ ಒಳಗೆ ಹೋಗಿ ಬಿಟ್ಟಳು. ರತ್ನ ಬಹಳ ಹೊತ್ತು ಅಲ್ಲೇ ನಿಂತಿದ್ದರೂ ಪುನಃ ಅವಳು ಹೊರಗೆ ಬರಲಿಲ್ಲ.

ಮರುದಿನ, ಮರುದಿನ, ಮರು ದಿನವೆಂದು ಮೂರು ದಿನ ರತ್ನ ಇಂದುವನ್ನು ನಿರೀಕ್ಷಿಸಿದರೂ ಅವಳ ದರ್ಶನವಾಗಲಿಲ್ಲ. ನಾಲ್ಕನೆಯ ದಿನ ಟಪ್ಪಾಲು ಮೂಲಕ ಇಂದುವಿಗೊಂದು ಕಾಗದ ಬಂತು. ರತ್ನನ ಅಕ್ಷರಗಳ ಪರಿಚಯವಿದ್ದ ಅವಳಿಗದು ಅವನದೆಂದು ನೋಡಿದೊಡನೆಯೇ ತಿಳಿಯಿತು. ತಿಳಿದು ಬಹಳ ಹೊತ್ತು ಒಡೆಯದೆ ಅದನ್ನು ಕೈಯಲ್ಲಿ ಹಿಡಿದುಕೊಂಡು ಆಲೋಚಿಸುತ್ತ ಕುಳಿತಿದ್ದಳು. ಮತ್ತವಳು ಬಲುಹೊತ್ತಿನ ಮೇಲೆ ಅಲ್ಲಿಂದೇಳುವಾಗಲೂ ಅದು ಒಡೆಯಲ್ಪಟ್ಟಿರಲಿಲ್ಲ; ಆದರೆ ಅವಳ ಕಣ್ಣೀರಿನಿಂದ ಅಭಿಷಿಕ್ತವಾಗಿ ಒದ್ದೆಯಾಗಿಹೋಗಿತ್ತು. ಎದ್ದವಳು ಹಾಗೆಯೇ ಆ ಕಾಗದವನ್ನು ಹಿಡಿದುಕೊಂಡು ಅಡಿಗೆಮನೆಗೆ ಹೋದಳು. ಮತ್ತೊಂದು ನಿಮಿಷದಲ್ಲಿ ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿಯಲ್ಲದು ಬೂದಿಯಾಗಿ ಹೋಯ್ತು–

ಮತ್ತೊಂದು ವಾರದ ತರುವಾಯ ವಾಣಿ ತೌರುಮನೆಯಿಂದ ಬಂದಳು. ಬಂದವಳು ನೇರವಾಗಿ ಇಂದುವಿನ ಮನೆಗೇ ಹೋದಳು. ಇಂದುವಿನ ಮನೆಗೆ ಬೀಗ ಹಾಕಿತ್ತು. ನೋಡಿ ವಾಣಿಯ ಆಶ್ಚರ್ಯಕ್ಕೆ ಮಿತಿಯಿಲ್ಲ! ತನ್ನವರೆಂಬವರಿಲ್ಲದ ಇಂದು ಅದೆಲ್ಲಿಗೆ ಹೋಗಿರಬಹುದು ಎಂದವಳಿಗೆ. ಇದಿರು ಮನೆಯಲ್ಲಿ ವಿಚಾರಿಸಿದಳು. ಇಂದು ತನ್ನನ್ನು ಸಾಕಿದವರ ಮನೆಗೆ ಹೋಗಿರುವಳೆಂದು ತಿಳಿಯಿತು. ಇದನ್ನು ಕೇಳಿ ಅವಳಿಗೆ ಇನ್ನಷ್ಟು ಆಶ್ಚರ್ಯ. ತಾನೆಂದೆಂದಿಗೂ ಅವರ ಮನೆಗೆ ಹೋಗುವುದಿಲ್ಲವೆನ್ನುತ್ತಿದ್ದ ಇಂದು, ಈಗೇಕೆ ತಾನಾಗಿ ಅಲ್ಲಿ ಹೋದಳು ಎಂಬುದನ್ನು ತಿಳಿಯುವುದು ವಾಣಿಯ ಸರಳ ಶಕ್ತಿಗೆ ಮೀರಿದ ಮಾತಾಗಿತ್ತು. ಕೊನೆಗೂ ಅವಳಿಗೆ ಇಂದುವಿನ ಆಶ್ಚರ್ಯಕರವಾದ ವರ್ತನೆಯ ಕಾರಣವು ತಿಳಿಯಲಿಲ್ಲ. ತಿಳಿದಿದ್ದ ರತ್ನನೂ ಹೇಳುವ ಪ್ರಯತ್ನಕ್ಕೆ ಕೈ ಹಚ್ಚದುದರಿಂದ ಕೊನೆಯ ತನಕವೂ ವಾಣಿಗದು ಸಮಸ್ಯೆಯಾಗಿಯೇ ಉಳಿಯಿತು.

**ಕಥೆಗಾರ್ತಿಯ ಪರಿಚಯ:** ಗೌರಮ್ಮನವರು ೧೯೧೨ರಲ್ಲಿ ಮಡಿಕೇರಿಯಲ್ಲಿ ಜನಿಸಿದರು. ಮಿಸೆಸ್ ಬಿ.ಟಿ.ಜಿ ಕೃಷ್ಣ ಎನ್ನುವ ಹೆಸರಿನಿಂದಲೇ ಕಥೆಗಳನ್ನು ಬರೆದಿದ್ದಾರೆ. ೧೯೩೧–೧೯೩೯ರವರೆಗೆ ರಚಿಸಿದ ಸಣ್ಣ ಕಥೆಗಳನ್ನು ಕಂಬನಿ ಹಾಗೂ ಚಿಗುರು ಎಂಬ ಶೀರ್ಷಿಕೆಗಳಲ್ಲಿ ಪ್ರಕಟವಾಗಿದೆ. ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಕೊಡಗಿನಲ್ಲಿ ಪ್ರವಾಸ ಕೈಗೊಂಡಾಗ ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಆಭರಣಗಳನ್ನೆಲ್ಲಾ ದಾನ ನೀಡಿದರು.

**ಪ್ರಶ್ನೆಗಳು:**

೧. ವಾಣಿಯ ಸ್ವಭಾವವನ್ನು ವಿವರಿಸಿ.
೨. ಇಂದು ಹಾಗೂ ರತ್ನನ ಮನಸ್ಸಿನ ತುಮುಲಗಳನ್ನು ವಿವರಿಸಿ.
೩. ವಾಣಿ ಹಾಗೂ ಇಂದು ನಡುವಿನ ಸ್ನೇಹದ ಪರಿಯ ಬಗೆಗೆ ಬರೆಯಿರಿ.
೪. ವಾಣಿಯ ಸಮಸ್ಯೆ ಯಾವುದು?

# ೩. ಸಾವೆ ಮನೆಗೆ ಭೂಷಣ!

**–ಕೆ. ಸತ್ಯನಾರಾಯಣ**

**ಆಶಯ:** ಮನಸ್ಸಿನಂತೆ ಮನೆಗಳು ಬದಲಾಗುತ್ತಿವೆ. ಎಷ್ಟು ಅಲಂಕಾರವಾಗಿದೆ, ವಾಸ್ತು ಪ್ರಕಾರವಾಗಿದೆ ಎಂಬುವುದು ಮುಖ್ಯವಲ್ಲ. ಮನೆಯೂ ಎಷ್ಟು ಅನುಭವನ್ನು ಕೊಡುತ್ತದೆ ಎಂಬುದು ಮುಖ್ಯ. ಪರಂಪರೆ ಹೊಂದಿರುವ ಮನೆಯೂ ಅನುಭವವನ್ನು ನೀಡುತ್ತದೆ ಎನ್ನಬಹುದು. ಅಷ್ಟೇ ಅಲ್ಲ ಪರಂಪರೆಯ ಒಂದು ಭಾಗವಾಗಿ ಅನುಭವಿಸುವ ಯಾವುದೇ ಸಂಗತಿಯೂ ನಮಗೊಂದು ರೀತಿಯ ವ್ಯಕ್ತಿತ್ವನ್ನೂ, ಘನತೆಯನ್ನು ತಂದು ಕೊಡುತ್ತದೆ. ಮನುಷ್ಯನಿಗೆ ಹುಟ್ಟು ಸಾವು ಎರಡು ಸಹಜ. ಹುಟ್ಟನ್ನು ಪ್ರೀತಿಸುವಂತೆ, ಒಪ್ಪುವಂತೆ ಸಾವನ್ನು ಒಪ್ಪಬೇಕು, ಗೌರವಿಸಬೇಕು, ಆತ್ಮೀಯವಾಗಿಸಿಕೊಳ್ಳಬೇಕು ಎಂಬುದನ್ನು ಈ ಲೇಖನ ತಿಳಿಸುತ್ತದೆ.

ಸೈಟುಕೊಂಡು ಹೊಸಮನೆ ಕಟ್ಟಿಸುವಷ್ಟು ವ್ಯವಧಾನ, ತಾಳ್ಮೆ ಜಾಣ್ಮೆ ಯಾವುದೂ ಇಲ್ಲದ ನಾನು ಈಗಾಗಲೇ ಕಟ್ಟಿರುವ ಮನೆಯನ್ನು ಕೊಳ್ಳುವುದೆಂದು ನಿರ್ಧರಿಸಿ, ನನ್ನ ಹೆಂಡತಿಯನ್ನು ಒಪ್ಪಿಸಿ ಬೆಂಗಳೂರು ಮಹಾನಗರದಲ್ಲಿ ಮನೆಯನ್ನು ತಲಾಶು ಮಾಡಲು ಪ್ರಾರಂಭಿಸಿದೆ. ಸ್ನೇಹಿತರು, ಹಿತೈಷಿಗಳು, ಹಿತಶತ್ರುಗಳು, ಬ್ರೋಕರ್‌ಗಳು, ಫೂಟ್‌ಲಾಯರಿಗಳು– ಎಲ್ಲರೂ ಎಲ್ಲ ರೀತಿಯ ಮನೆಗಳನ್ನು ತೋರಿಸಲು ಪ್ರಾರಂಭಿಸಿದರು. ಫ್ಲಾಟ್, ಪೆಂಟ್‌ಹೌಸ್, ತಾರಸಿ ಮನೆ, ಕಾಂಪೌಂಡ್ ಇರುವ ಮನೆ, ಸಣ್ಣ ಬಂಗಲೆ, ತೋಟದ ಮನೆ ಎಲ್ಲವೂ ಈಚೆಗೆ ಕಟ್ಟಿದವು. ಈಚಿನ ವಾಸ್ತು ಶೈಲಿಯನ್ನು ವಾಸ್ತುಶಾಸ್ತ್ರದ ಬಯಕೆಯನ್ನು ಅಳವಡಿಸಿಕೊಂಡವು. ಜ್ಯೋತಿಷ್ಯಶಾಸ್ತ್ರದ ಪ್ರಕಾರ ನಮ್ಮ ಕುಟುಂಬದ ಸದಸ್ಯರ ನಕ್ಷತ್ರಯೋಗಕ್ಕೆ ಪ್ರಶಸ್ತವಾದಂತವು. ಆದರೂ ಯಾವುದೇ ಮನೆಯನ್ನು ನೋಡಿದಾಗ ಏನೋ ಪಿಚ್ಚೆನಿಸುತ್ತಿತ್ತು. ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ. ಕೊನೆಗೆ ನಾನು ಒಪ್ಪಿಕೊಂಡದ್ದು ಜಗುಲಿ, ತೊಟ್ಟಿ ತುಳಸಿಕಟ್ಟೆಯೆಲ್ಲ ಇರುವ ಒಂದು ಹಳೆಕಾಲದ ಮನೆ, ಸಕಲರಿಗೂ ಆಶ್ಚರ್ಯ, ಕುತೂಹಲ, ನಾನಂತೂ ಆ ಮನೆಯನ್ನು ಒಪ್ಪಲು ಕಾರಣವೆಂದರೆ ಮನೆಯನ್ನು ಪರಿಚಯಿಸುವಾಗ ಮನೆಯ ಹಿಂದಿನ ಮಾಲೀಕ ಮನೆಯ ವೈಶಿಷ್ಟ್ಯವನ್ನು ನನಗೆ ವಿವರಿಸುತ್ತಾ, "ನೋಡಿ ಈ ಮನೆಯಲ್ಲಿ ನಾವು ಈಗಾಗಲೇ ಮೂರು ನಾಲ್ಕು ತಲೆ ಕಳೆದಿದ್ದೇವೆ. ನಮ್ಮಜ್ಜಿ ಗೊತ್ತಲ್ಲ. ಅವರು ಈ ತುಳಸಿಕಟ್ಟೆ ಪ್ರದಕ್ಷಿಣೆ ಹಾಕುವಾಗ ಕುಸಿದು ಸತ್ತರು. ನಮ್ಮ ಮುತ್ತಾತ ಸತ್ತದ್ದು ಈ ಮೂಲೆಯಲ್ಲಿರುವ ಕರಿಮರದ ಮಂಚದ ಮೇಲೆ, ನಮ್ಮ ಮನೆ ಹಸು ಬಾವಿ ಕಟ್ಟೆಗೆ ಮೈಯನ್ನು ಉಜ್ಜಿಕೊಳ್ಳುತ್ತಿದ್ದಾಗ ಸತ್ತು ಹೋಯಿತು. ಮನೆಯ ಎಡ ಜಗುಲಿ ಮೇಲೆ ಸತ್ತವರ ದೇಹ ಮಲಗಿಸಿ ಪೂಜೆ ಮಾಡಿಯೇ ನಾವು ಸ್ಮಶಾನಕ್ಕೆ ಒಯ್ಯುವುದು ಲಾಗಾಯ್ತಿನಿಂದ ನಡೆದು ಬಂದಿರುವಂತದ್ದು". ವಿವರಣೆಯಲ್ಲಿ ಶ್ರದ್ಧೆಯಿತ್ತು, ತನ್ಮಯತೆಯಿತ್ತು. ಮನೆ ನನಗೆ ಸುತರಾಮ ಇಷ್ಟವಾಗಿಬಿಟ್ಟಿತು ಒಂದೇ ಕ್ಷಣದಲ್ಲಿ.

ಯಾರೂ ಸತ್ತಿಲ್ಲದ ಯಾರೊಬ್ಬರ ಸಾವನ್ನೂ ಅನುಭವಿಸದ ಮನೆಯನ್ನು ಕೊಳ್ಳುವುದು ಹೇಗೆ ಹೇಳಿ? ಅದು ಎಷ್ಟೇ ಕಡಿಮೆ ಮೊತ್ತದ್ದಾದರೂ, ಎಷ್ಟೇ ಆಧುನಿಕವಾದರೂ ಇಂತಹ ಮನೆಗಳು ನಮಗೆ ರಾತ್ರಿಯ ನೀರವದಲ್ಲಿ ಯಾವ ಅನುಭವವನ್ನೂ ಹೇಳಲಾರವು, ಈ ಮನೆಗಳಲ್ಲಿರುವವರಿಗೆ ಕನಸೇ ಬೀಳುವುದಿಲ್ಲ. ನಮಗೆ ತಲುಪಿಸಲು ನಿಟ್ಟುಸಿರೂ ಇರುವುದಿಲ್ಲ. ಇದನ್ನೆಲ್ಲ ಕೇಳದೆ, ತಿಳಿಯದೆ, ಕಿಂಚಿತ್ತೂ ಕನವರಿಸದೆ ಸಾಧಾರಣ ಮನುಷ್ಯರಾಗುವುದು ಸಾಧ್ಯವಿಲ್ಲ, ಸಂಪನ್ನರಾಗುವುದು ಕೂಡ.

ಮನೆಗೆ ಭೂಷಣ ಬರುವುದೇ ಸಾವುಗಳಿಂದ. ನನ್ನ ತಾಯಿಯ ಹಿಂದಿನ ಕಾಲದ ಮನೆಯನ್ನು ನಾನು ಯಾವಾಗಲೂ ನೆನೆಸಿಕೊಳ್ಳುತ್ತೇನೆ. ಮಕ್ಕಳ ಹೆರಿಗೆಯಾಗುವ ಹೊಮನೆಗೆ ನಿರ್ದಿಷ್ಟವಾಗಿ ಒಂದೇ ಕೋಣೆ, ಒಂದೇ ಜಾಗ. ಕತ್ತಲೆ ಕೋಣೆಯದು. ಹೆಂಗಸರ ಬಸುರಿ ಬಾಣಂತನಕ್ಕೆ ಅನುಕೂಲವಾಗಲೆಂದು ಬಚ್ಚಲುಮನೆಯ ಪಕ್ಕದಲ್ಲೇ ಹೊಲೆಯ ಮನೆ, ಸಾವಿಗಾದರೋ ಇಂತಹುದೇ ಅನ್ನುವ ಜಾಗವಿಲ್ಲ, ಕೋಣೆಯಿಲ್ಲ. ಅದು ಮನೆ ತುಂಬೆಲ್ಲ. ಮಜ್ಜಿಗೆ ಕಡೆಯುವಾಗ ಅಡುಗೆ ಮನೆಯಲ್ಲೇ ಸತ್ತವರು, ದೇವರ ಮನೆಯಲ್ಲಿ ಸಾಲಿಗ್ರಾಮವನ್ನು ತೊಳೆಯುತ್ತಿದ್ದಾಗ ಸತ್ತವರು, ಭಾಗವತ ಕೇಳುತ್ತಾ ದಿವಾನ್ ಖಾನೆಯ ಕಂಭಕ್ಕೊರಗಿ ಸತ್ತವರು, ಹಿತ್ತಲ ಭಾವಿಯ ಚಪ್ಪಡಿಕಲ್ಲಿನ ಮೇಲೆ ಕುಸಿದವರು. ಸಾವು ಎಲ್ಲೆಲ್ಲೂ ಸಂಭವಿಸಿದಂತೆ, ಜರುಗಿದಂತೆ. ನೀನು ಮಲಗಿರುವೆಯಲ್ಲ ಆ ಹಾಸಿಗೆಯ ಮೇಲೆ, ಅದೇ ಜಾಗದಲ್ಲಿ ನಿಮ್ಮ ದೊಡ್ಡ ಸೋದರ ಮಾವ ಸತ್ತದ್ದು, ನೀನು ಕುಳಿತಿರುವೆಯಲ್ಲ, ನಿನ್ನ ತಲೆ ಮೇಲೆ ರಾಮದೇವರ ಫೋಟೊ ಅದರ ಕೆಳಗೆ ನಿಮ್ಮ ತಾತ ಲೇವಾದೇವಿ ಪತ್ರಗಳನ್ನು ಪರಿಶೀಲಿಸುತ್ತಿದ್ದಾಗ ಸತ್ತದ್ದು – ಎಂದೋ ಸತ್ತವರನ್ನು ಅವರು ಸತ್ತ ಜಾಗವನ್ನೂ ತೋರಿಸುತ್ತಾ ನಮಗೆ ಆತ್ಮೀಯವಾಗಿಸುತ್ತಿದ್ದರು. ಹಾಗಾಗಿ ಸಾವಿನ ಬಗ್ಗೆ ನಮಗೆ ಅಷ್ಟೊಂದು ಹೆದರಿಕೆಯಾಗುತ್ತಿರಲಿಲ್ಲ. ಇಷ್ಟೊಂದು ದೊಡ್ಡ

ಮನೆಯ ಯಾವ ಯಾವುದೋ ಭಾಗದಲ್ಲಿ ನಮ್ಮ ಹಿರಿಯರು ಯಾರು ಯಾರೋ ಸತ್ತಿದ್ದಾರೆ: ನಾನೂ ಕೂಡಾ ಹೀಗೆ ಇಲ್ಲೇ ಓಡಾಡಿಕೊಂಡು ಯಾವುದಾದರೂ ಒಂದು ದಿವಸ, ಯಾವುದಾದರೂ ಒಂದು ಭಾಗದಲ್ಲಿ ಮಲಗಿದ್ದಾಗಲೋ, ತಿಂಡಿ ತಿನ್ನುವಾಗಲೋ, ಜಗಳ ಕಾಯುವಾಗಲೋ, ಓದುವಾಗಲೋ ಸುಮ್ಮನೆ ಸಾಯಬೇಕಾಗುತ್ತದೆ. ಅಷ್ಟೇ, ಅದೂ ಕೂಡಾ ಓಡಾಡುವ ಹಾಗೆ, ಮಲಗುವ ಹಾಗೆ, ಮಾತನಾಡುವ ಹಾಗೆ ಸುಮ್ಮನೆ ನಿರುದ್ದಿಶ್ಯವಾಗಿ ನಡೆದು ಹೋಗುವ ಒಂದು ಕ್ರಿಯೆ ಎಂಬ ಭಾವವೇ ಹಳೆಮನೆ ಹುಟ್ಟಿಸುತ್ತಿದ್ದುದ್ದು. ಇದರ ಜೊತೆಗೆ ಇಂತಹ ಮನೆಯಲ್ಲೇ ಸತ್ತರೆ ನಾವು ಕೂಡ ಅವರ ಪರಂಪರೆಗೆ ಸೇರುತ್ತೇವೆಂಬ ನಂಬಿಕೆ, ಧೈರ್ಯ್ಯ. ಪರಂಪರೆಯ ಒಂದು ಭಾಗವಾಗಿ ಅನುಭವಿಸುವ ಯಾವುದೇ ಸಂಗತಿಯೂ ನಮಗೊಂದು ರೀತಿಯ ವ್ಯಕ್ತಿತ್ವನ್ನೂ, ಘನತೆಯನ್ನು ತಂದುಕೊಡುತ್ತದೆ. ಇಂತಹ ನೆನಪು ಪರಂಪರೆಯನ್ನೆಲ್ಲ ಬಿಟ್ಟು ಪೊಗದಸ್ತಾದ ಗ್ರಾನೈಟ್, ಮಾರ್ಬಲ್ ಉಪಯೋಗಿಸಿ ಕಟ್ಟಿದ ಮನೆಯಲ್ಲಿ ನಾವು ಯಾವ ಪರಂಪರೆಯ ಭಾಗವಾಗಬಹುದು ಹೇಳಿ

ಇಂತಹ ಹಿನ್ನೆಲೆಗಳಿಲ್ಲದ ಮನೆಯಲ್ಲೇ ಹಳ್ಳಿಗಳಿಂದ ನಗರಗಳಿಗೆ ಗುಳೆ ಬಂದವರೆಲ್ಲ ವಾಸಿಸುತ್ತಾರೆ. ಹೀಗಾಗಿ ಅವರ ಬದುಕಿನಲ್ಲಿ ಒಂದು ನೆಲೆಯಿಲ್ಲ, ನೆಮ್ಮದಿಯಿಲ್ಲ, ನಿಶ್ಚಿಂತೆಯಿಲ್ಲ. ಅದಕ್ಕೆಂದೇ ಅವರು ಒಂದೇ ಒಂದು ಮನೆಯಲ್ಲೂ ನೆಲೆಯಾಗಿರುವುದಿಲ್ಲ. ಈ ಮನೆಯಿಂದ ಇನ್ನೊಂದು ಮನೆಗೆ, ಈ ಊರಿನಿಂದ ಇನ್ನೊಂದು ಊರಿಗೆ, ಈ ದೇಶದಿಂದ ಇನ್ನೊಂದು ದೇಶಕ್ಕೆ ಅಂತರ್ ಪಿಶಾಚಿಗಳಂತೆ ವಲಸೆಹೋಗುತ್ತಲೇ ಇರುತ್ತಾರೆ. ಈಗಾಗಲೇ ನಾನಾ ತಲೆಮಾರಿನಲ್ಲಿ ನಾನಾ ರೀತಿಯ ಸಾವುಗಳನ್ನು ಅನುಭವಿಸಿರುವ ಮನೆಗಳು ನಮಗೆ ಗೊತ್ತಿಲ್ಲದಂತೆ, ನಮ್ಮನ್ನು ಯಾವುದೋ ಒಂದು ಪಾಶದ ನೆರವಿನಿಂದ ಬಂಧಿಸಿ ಕಟ್ಟು ಹಾಕುವಂತೆ ಹೊಸ ಕಾಲದ, ಹೊಸ ಊರಿನ ಬಾಡಿಗೆ ಮನೆಗಳಾಗಲೀ ಸ್ವಂತ ಮನೆಗಳಾಗಲೀ ನಮ್ಮನ್ನು ಕಟ್ಟು ಹಾಕುವುದಿಲ್ಲ.

ಇದನ್ನೆಲ್ಲ ಸರಿಯಾದ ವಯಸ್ಸಿನಲ್ಲಿ ನಿಗದಿಯಾಗಿ ತಿಳಿದುಕೊಳ್ಳುವ ನಾನು ನಮ್ಮ ಎಷ್ಟೊಂದು ಹಿರಿಯರ ಸಾವುಗಳನ್ನು ಗೊತ್ತಿಲ್ಲದೆ, ಗುರಿಯಿಲ್ಲದೆ ಹಾಳುಗೆಡವಿದೆ, ಪೋಲುಮಾಡಿದೆ ಎಂದೆನಿಸುತ್ತದೆ. ಸಾವೆಂಬುದು ಸುಲಭವಾಗಿ ಸಿಗುವ ಯಃಕಶ್ಚಿತ್ ಪದಾರ್ಥವೆಂಬಂತೆ, ಕೆಲಸಕ್ಕೆ ಬಾರದ ಒಂದು ಅನುಭವವೆಂಬಂತೆ ನಾನು ಸುಮ್ಮನಿದ್ದುದರಿಂದಲೇ ಕೆಲ ಹಿರಿಯರು ನರ್ಸಿಂಗ್ ಹೋಂನಲ್ಲಿ ಸತ್ತರು. ಇನ್ನು ಕೆಲವರು ಚಹರೆಯೇ ಇಲ್ಲದ ಬಾಡಿಗೆ ಮನೆಯಲ್ಲಿ, ಮತ್ತೊಬ್ಬರು ಸೋಲಾಪುರದ ಧರ್ಮಛತ್ರದಲ್ಲಿ ಸಾಯುತ್ತಲೇ ಹೋದರು.

such a sublime and personal experience was scattered away in too many, too unconnected and too impersonal places. ಈ ವಿಚಾರಸರಣಿಯನ್ನೇ ಒಪ್ಪದ ನನ್ನ ಅನೇಕ ಬಂಧುಮಿತ್ರರು ತೀರಾ ಆಧುನಿಕವಾದ, ತೀರಾ ವೈಭವೋಪೇತವಾದ ಮನೆಗಳಲ್ಲಿ ವಾಸಿಸುತ್ತಾ, ಅವರುಗಳ ಮಕ್ಕಳು, ಮೊಮ್ಮಕ್ಕಳುಗಳೆಲ್ಲ ಪರಂಪರೆಯಿಂದ, ಧರ್ಮದಿಂದ, ಸಂಪ್ರದಾಯದಿಂದ ದೂರವಾಗಿಬಿಟ್ಟರು ಎಂದು ವೃಥಾ ಕೊರಗುತ್ತಾ ಕೂರುವುದು ಕಂಡು ನನಗೆ ಅಳಬೇಕೋ, ನಗಬೇಕೋ ತಿಳಿಯುವುದಿಲ್ಲ.

ಸಾವನ್ನೇ ಅನುಭವಿಸದ ನೂತನ ಮನೆಗಳಲ್ಲಿ ನೀವು ಮಾಡುವ ಯಾವ ಪಿತೃಕಾರ್ಯವೂ, ನೈವೇದ್ಯಕ್ಕೆ ಪಿತೃಪಕ್ಷದಲ್ಲಿ ಇಡುವ ಎಡೆಯೂ ಯಾವುದೇ ಫಲವನ್ನು ನೀಡುವುದಿಲ್ಲ. ನಿಮ್ಮ ತಾತ–ಮುತ್ತಾತಂದಿರಾಗಲೀ, ಅಜ್ಜ– ಅಜ್ಜಿಯರಾಗಲೀ ಅವರು ಸತ್ತ ಜಾಗ ಬಿಟ್ಟು ನೀವು ಹೋದ ಬಾಡಿಗೆ ಮನೆಗಳಿಗೆ ಮತ್ತು ಹೊಸ ಹೊಸ ಮನೆಗಳಿಗೆಲ್ಲಾ ಹೊಸ ಹೊಸ ವಿಳಾಸಗಳನ್ನು ಹುಡುಕಿಕೊಂಡು ಬರಲು ಅವರೇನು ಬಿಕನಾಸಿಗಳೂ ಅಲ್ಲ, ಬೇವಾರ್ಸಿಗಳೂ ಅಲ್ಲ. ಪಿತೃಕಾರ್ಯಗಳನ್ನು ನಾನು ಎರಡೂ ರೀತಿಯ ಮನೆಗಳಲ್ಲೂ ಲಾಗಾಯ್ತಿನಿಂದ ಬಂದ ಮನೆ ಮತ್ತು ಅನೇಕ ಹೊಸ ಮನೆ–ಮಾಡಿದ್ದೇನೆ, ನೋಡಿದ್ದೇನೆ. ಹಲವಾರು ತಲೆಮಾರುಗಳ ಹತ್ತಾರು ಸಾವುಗಳನ್ನು ಕಂಡ ಮನೆಗಳಲ್ಲಿ ಪಿತೃಕಾರ್ಯ ಪ್ರಾರಂಭವಾಗುತ್ತಿದ್ದಂತೆಯೇ ಹಿಂದಣ ಅನಂತದ ವಾಸನೆಯೊಂದು, ಪ್ರಭಾವಳಿಯೊಂದು ಮನೆಯನ್ನೆಲ್ಲ ಆವರಿಸಿಕೊಳ್ಳುತ್ತದೆ. ಈ ಹಿಂದಣ ಅನಂತದ ವಾಸನೆಯಲ್ಲಿ ಮೌನ, ನಿಗೂಢತೆ, ಬೆರಗು ಮಾತ್ರವಲ್ಲ ಪಿತೃಕಾರ್ಯ ಮಾಡಲು ಕೂತ ನೆಲದಿಂದ ವಿಶೇಷ ಕಂಪನಗಳೆಲ್ಲ ಹೊರಡುತ್ತವೆ. ಒಂದು ಸಲವಂತು ನಾನು ನಮ್ಮ ತಂದೆಯವರ ವಾರ್ಷಿಕ ಶ್ರಾದ್ಧಮಾಡುತ್ತಿದ್ದಾಗ ಮೂಡಿದ ಪ್ರಭಾವಳಿಯ ಬೆಳಕಿನಲ್ಲಿ ಕುಳಿತ ನೆಲದ ಎದುರು ಭಾಗವೇ ಬಿರುಕು ಬಿಟ್ಟು ಕೆಳಗೆ ಬಗ್ಗಿ ನೋಡಿದರೆ, ನಮ್ಮ ಮನೆತನದ ಪಿತಾಮಹ, ಪ್ರಪಿತಾಮಹರೆಲ್ಲ ಸಾಯುವುದಕ್ಕಿಂತ ಮುಂಚೆ ಹೇಗಿದ್ದರೋ ಹಾಗೇ ಮಟಮಟ ಮಧ್ಯಾಹ್ನದಲ್ಲಿ ಏನೇನು ಕೆಲಸಗಳನ್ನು ಮಾಡುತ್ತಿದ್ದರೋ ಅದನ್ನೆಲ್ಲ ಮಾಡುತ್ತಾ ಸಾವಿನ ಕಾಲದ, ಕೊನೆಗೆ ಪಿತೃಕಾರ್ಯದ ಪರಿವೆಯೇ ಇಲ್ಲದೆ ಓಡಾಡುತ್ತಿದ್ದಾರೆ. ಹೆಂಚು, ತೊಲೆಗಳೆಲ್ಲ ವಿಶೇಷ ಕಳೆಯಿಂದ ಹೊಳೆಯುತ್ತಿವೆ. ಪಿತೃಕಾರ್ಯಕ್ಕೆಂದು ಮಾಡಿಟ್ಟ ಅಡುಗೆ, ಪ್ರಸಾದದ ವಾಸನೆಯನ್ನೆಲ್ಲ ಯಾರೋ ಹೀರುತ್ತಿರುವುದು, ಯಾರೋ ತಿಂದು

ಸರಸರ ಶಬ್ದ ಮಾಡುತ್ತಿರುವುದು ಕೇಳಿಸುತ್ತಿರುತ್ತದೆ. ಬಾಡಿಗೆ ಮನೆಗಳಲ್ಲಿ, ಹೊಸ ಮನೆಗಳಲ್ಲಿ ನನಗೆ ಇಂತಹ ಅನುಭವವೇ ಆಗಿಲ್ಲ. ಪಿತೃಕಾರ್ಯದ ಪ್ರಾರಂಭದ ಹಂತದಲ್ಲಿಯೇ ಆಕಳಿಕೆ ಬಂದುಬಿಡುತ್ತದೆ.

ಬಹುಕಾಲ ಬಾಳಿದ, ತಾಳಿದ ನಮ್ಮ ನಾಗರಿಕತೆ ಇನ್ನೂ ಜೀವಂತಿಕೆಯಿಂದ ಉಳಿದಿರುವುದಕ್ಕೆ ಕಾರಣವಾದರೂ ಏನೆಂದು ನಾನು ಹತ್ತಾರು ದಿಕ್ಕುಗಳಿಂದ ಅನ್ಯಶಿಸ್ತುಗಳ ಜ್ಞಾನದ ನೆರವಿನಿಂದ ಸಂಸ್ಕೃತಿ ಚಿಂತನೆ ನಡೆಸಿ ದಣಿವಾಗಿ ಕೊನೆಗೆ ಒಂದು ದಿನ ಒಂದು ತೀರ್ಮಾನಕ್ಕೆ ಬಂದೆನು. ನಮ್ಮ ತಾತನ ಮನೆಯ ಒಂದು ಕಂಬ ಬಹು ಶಿಥಿಲವಾಗಿತ್ತು. ಒಳಗಡೆಯಿಂದಲೂ ಸವೆದು ಟೊಳ್ಳಾಗಿತ್ತು. ಆ ಕಂಬದಿಂದ ಏನು ಪ್ರಯೋಜನ, ತೆಗಿಸಿಬಿಡೋಣ, ಒಡೆದು ಹಾಕಿಬಿಡೋಣ ಎಂದೆಲ್ಲ ವಾದವಿವಾದ ಶುರುವಾಯಿತು. ಆದರೆ ನಮ್ಮ ಹಿರಿಯರನೇಕರು ಒಬ್ಬರಾದ ಮೇಲೊಬ್ಬರು ತಮ್ಮ ಕೊನೆಯುಸಿರೆಳೆಯಲು ಆ ಕಂಬದ ಆಸರೆ ಪಡೆದಿದ್ದರು. ಕಾಶಿಯಾತ್ರೆಗೆ ಹೋಗಿದ್ದವರೊಬ್ಬರು ಅಲ್ಲೇ ಬಿದ್ದ ಕನಸಿನಲ್ಲಿ ತಾವು ಸಾಯುವ ದಿನವನ್ನು ಮುಂಚಿತವಾಗಿ ತಿಳಿದು, ಆಯ್ತು ನಾನು ಸಾಯುವುದಾದರೆ ಊರಿಗೆ ವಾಪಸ್ಸು ಹೋಗಿ, ನಮ್ಮ ಮನೆಯ ಪುರಾತನ ಕಂಬಕ್ಕೊರಗಿಯೇ ಸಾಯುತ್ತೇನೆ ಎಂದು ಹಠಹಿಡಿದು ಬಂದು ಹಾಗೇ ಸತ್ತರಂತೆ, ಎಲ್ಲವೂ ಚೆನ್ನಾಗಿದ್ದ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ನಮ್ಮ ಸಂಸ್ಕೃತಿಯಲ್ಲಿ ಜನ ತಮ್ಮ ಸಾವಿನ ಸಮಯ, ಸಾವಿನ ರೀತಿ, ಸಾವಿನ ಜಾಗ ಎಲ್ಲವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಬೇಕಾದ ಜಾಣ್ಮೆ, ಛಲಗಾರಿಕೆ, ಮುನ್ನೋಟ ಇವೆಲ್ಲವೂ ನಮ್ಮವರಲ್ಲಿ ಇದ್ದುದರಿಂದಲೇ ನಮ್ಮ ಸಂಸ್ಕೃತಿ ಬಹುಕಾಲ ಜೀವಂತವಾಗಿ ಉಳಿಯಿತೆಂದು ನನಗನಿಸುತ್ತದೆ. ಮಹಾಭಾರತದ ವಿಷ್ಣು ಸಹಸ್ರನಾಮಕ್ಕೆ ಇನ್ನೂ ಶಕ್ತಿಯಿರುವುದು ಭೀಷ್ಮ ಇಚ್ಛಾಮರಣಿಯಾಗಿದ್ದರಿಂದ ಅನ್ನುವುದನ್ನು ನಾವು ಮರೆಯಬಾರದಷ್ಟೇ.

ಸಮಕಾಲೀನರೊಡನೆ ಈ ಕುರಿತಂತೆ ನನ್ನ ಅನುಭವ ವಿರುದ್ಧ ದಿಕ್ಕಿನಲ್ಲಿದೆ. ಬೆಂಗಳೂರಿನ ಮಧ್ಯಭಾಗದಲ್ಲಿ ಹಳೆಯಕಾಲದ ಮಾಲೀಕನೊಬ್ಬನ ಮಕ್ಕಳು ತುಂಬಾ ಒಳ್ಳೆಯ ಬೆಲೆ ಬರುತ್ತದೆಂದು ಮನೆಯನ್ನು ಬಿಕರಿ ಮಾಡಿ ಬಂದ ಹಣದಲ್ಲಿ ಪ್ರತಿಯೊಬ್ಬ ಮಗನು ನಗರದ ಬೇರೆ ಬೇರೆ ದಿಕ್ಕಿನಲ್ಲಿ ಆಧುನಿಕ ಫ್ಲಾಟುಗಳನ್ನು ಕೊಂಡು ಸಂತೋಷವಾಗಿಯೇ ಇದ್ದರು. ಇವರುಗಳ ತಂದೆ ತಮ್ಮ ಹಳೆಯ ಮನೆಯಲ್ಲೇ ಸಾಯುವುದಾಗಿ ಹಠ ಹಿಡಿದರು. ಈ ಹಠವನ್ನು ಹೇಗೆ ತೃಪ್ತಿಪಡಿಸುವುದು. ಮಕ್ಕಳು ನಾನಾ ರೀತಿಯಲ್ಲಿ ಬುದ್ದಿ ಹೇಳಿದರು. ತಂದೆ ದಿನೇ ದಿನೇ ನಿಶಕ್ತರಾಗುತ್ತಿದ್ದಾರೆ. ನಾನಾ ರೀತಿಯ ಕಾಯಿಲೆ, ಕಸಾಲೆ. ಆದರೆ ಸಾಯಲೊಲ್ಲರು. ಮಕ್ಕಳು ತಂದೆಯ ಬಗ್ಗೆ ಕಕ್ಕುಲಾತಿ ತಡೆಯಲಾರದೆ ಹಳೆ ಮನೆಯ ಹೊಸ ಮಾಲೀಕರ ಹತ್ತಿರ ಹೋಗಿ ಕಾಡಿ ಬೇಡಿದರೂ ಆತ ಒಪ್ಪಲಿಲ್ಲ. ಈಗಿನ ಕಾಲದಲ್ಲಿ ಯಾರು ಇಂತಹ ಮನೋಧರ್ಮಕ್ಕೆ ಸ್ಪಂದಿಸುತ್ತಾರೆ? ವಾಸ್ತವದಲ್ಲಿ ಹಳೆಕಾಲದ ಮುದುಕನ ಹಠವನ್ನು ಗೇಲಿಮಾಡಿದರು, ಆಡಿಕೊಂಡರು. ಮಕ್ಕಳಿಗೆ ನಿಜಕ್ಕೂ ಪೇಚಾಟಕ್ಕಿಟ್ಟುಕೊಂಡಿತು. ತಂದೆಯೇ ಪಾಪ, ಆಯ್ತು ಕೊನೆಪಕ್ಷ ಆ ಮನೆಗೆ ಒಂದು ಸಲ ಭೇಟಿಕೊಟ್ಟು ಕಣ್ಣುಂಬ ನೋಡಿ ಸಾಯುತ್ತೇನೆ ಎಂದು ವರಸೆ ಬದಲಾಯಿಸಿದರು. ಮನೆಯ ಹೊಸ ಮಾಲೀಕರು ಒಪ್ಪಿದರು. ಹಳೆಯ ಮಾಲೀಕ ಹಿಂದಿನ ಮನೆಗೆ ಬಂದವರೇ ಇನ್ನಿಲ್ಲದ ಚುರುಕುತನದಿಂದ ಪುಟ್ಟಪುಟ್ಟ ಹೆಜ್ಜೆಗಳನ್ನಿಟ್ಟು ಮನೆಯೊಳಗೆಲ್ಲ ಓಡಾಡಿ ಮನಸ್ಸನ್ನೆಲ್ಲ ತುಂಬಿಸಿಕೊಂಡು ಹೊಸ ಮಾಲೀಕರು, ಅವರ ಕುಟುಂಬವರ್ಗದವರನ್ನೆಲ್ಲ ಕರೆಸಿ ತಮ್ಮೆದುರಿಗೆ ಕೂರಿಸಿಕೊಂಡು ಆಶೀರ್ವದಿಸಿ ಮನೆಯ ಹಿಂದಿನ ವೈಭವದ ಕತೆಯನ್ನೆಲ್ಲ ಒಂದೇ ಒಂದು ಎಳೆಯೂ ತಪ್ಪದಂತೆ ಹೇಳುತ್ತಾ ಕುಳಿತ ಸೋಪಾದ ಮೇಲೆ ಕುಸಿದರು. ಮುಂದಿನ ಇತಿಹಾಸದ ಪ್ರಕಾರ ಮನೆಯ ಹೊಸ ಮಾಲೀಕರ ಕುಟುಂಬವೇ ಸರ್ವರೀತಿಯಲ್ಲೂ ಏಳಿಗೆ ಪಡೆಯಿತು. ಏಕೆಂದರೆ ಅವರು ಪಡೆದದ್ದು ಸಾವನ್ನು ಅನುಭವಿಸಿದ್ದ ಮನೆ. ಆಧುನಿಕ ಫ್ಲಾಟುಗಳಿಗೆ ಅಂದರೆ ಸಾವನ್ನು ಕಾಣದ ಫ್ಲಾಟುಗಳಿಗೆ ಹೋದವರ ಪ್ರಗತಿ ಸರ್ವೆ ಸಾಧಾರಣವಾಗಿತ್ತು ಎಂದು ಕೇಳಲ್ಪಟ್ಟಿದ್ದೇನೆ.

ಇನ್ನೊಬ್ಬ ಹಿರಿಯರಿಗೆ ಇಂತಹ ಸುಪುತ್ರರಿರಲಿಲ್ಲ. ಅವರು ಶೇಕಡಾ ನೂರಕ್ಕೆ ನೂರೊಂದರಷ್ಟು ತಮಿಳರು. ತಮಿಳುನಾಡು, ಚೆನ್ನೈನಿಂದ ಒಂದೇ ಒಂದು ದಿನ ಕೂಡ ತಮ್ಮ ಇಡೀ ಜೀವನದಲ್ಲಿ ಹೊರ ಹೋದವರಲ್ಲ, ತಮಿಳು ಭಾಷೆ, ಸಂಸ್ಕೃತಿಯೇ ಜಗತ್ತಿನಲ್ಲಿ ಸರ್ವಶ್ರೇಷ್ಠ ಎಂದು ನಂಬಿದವರು. ಇವರ ಮಗನಿಗೆ ಕೇಂದ್ರ ಸರ್ಕಾರದಲ್ಲಿ ತುಂಬಾ ದೊಡ್ಡ ನೌಕರಿ, ಹಿರಿಯರಿಗೆ ಎಂಭತ್ತು ದಾಟಿದಾಗ, ಮಗನಿಗೇ ಸರ್ಕಾರಿ ಸೇವೆಯಿಂದ ನಿವೃತ್ತಿಯಾಗೋಕೆ ಇನ್ನೆರಡು ವರ್ಷಗಳಿದ್ದಾಗ ಬಾಂಬೆಗೆ ವರ್ಗವಾಗಿ ಹೋಯಿತು ಬಡ್ತಿಯ ಮೇಲೆ, ಒಳ್ಳೆಯ ಬಂಗಲೆ ಸಮುದ್ರದೆದುರಿಗೆ, ಆಳು, ಕಾಳು, ಕಾರು, ಡ್ರೈವರ್, ಮಗ ಬಾಂಬೆಗೆ ಹೊರಟು ನಿಂತ, ಮುದುಕಪ್ಪ ಒಲ್ಲೆ ಅಂದರು. ಏ ಹೋಗಯ್ಯ ಸಾಯೋ ವಯಸ್ಸಿನಲ್ಲಿ ನಾನೇಕೆ ಅಲ್ಲಿಗೆ ಒಂದು ಗೊತ್ತಿಲ್ಲದ ಗುರಿಯಿಲ್ಲದ, ಬೇರಿಲ್ಲದ, ಕಾಂಡವಿಲ್ಲದ ದೇಶಕ್ಕೆ ಬಂದು, ನನ್ನ ಹಿರೀಕರು ಕಂಡಿಲ್ಲದ, ಮನೆತನದ ಒಬ್ಬನೇ ಒಬ್ಬ ಹಿರಿಯ ಕೂಡ ಸತ್ತಿಲ್ಲದ ಜಾಗಕ್ಕೆ ಬಂದು ಸಾಯಲಿ, ಅದರಿಂದ ನಿನಗೂ ಒಳ್ಳೇದಾಗೋಲ್ಲ.

ನಾನೂ ಸತ್ತವರ ಸಾಲಿಗೆ ಸೇರೋಲ್ಲ. ಹೀಗೆಲ್ಲ ಹಠ ಹಿಡಿದು ಹೋದವರು ಮಗನ ದೊಡ್ಡ ಸರ್ಕಾರಿ ಬಂಗಲೆಯಲ್ಲಿ ಸಾಯದೆ, ಮುಂಬೈನ ಬೃಹತ್ ಬೀದಿಗಳಲ್ಲಿ ತಪ್ಪಿಸಿಕೊಂಡು ಕೊನೆಗೂ ಪತ್ತೆಯಾಗಲಿಲ್ಲವಂತೆ.

ಕುರುಕ್ಷೇತ್ರದ ಯುದ್ಧ ಮುಗಿದ ಮೇಲೆ ಪಟ್ಟವೇರಿದ ಪಾಂಡವರು, ಅವರ ಮಂತ್ರಿಗಳು, ಅಧಿಕಾರಿಗಳೂ ಕೌರವರ, ಅವರ ಅಧಿಕಾರಿಗಳ ಪಾಪದ ಮನೆಗಳು ಬೇಡ, ಹೊಸ ಹೊಸ ಬಂಗಲೆ, ಅರಮನೆ ಕಟ್ಟೋಣ ಎಂದು ಅಭಿಪ್ರಾಯಪಟ್ಟರಂತೆ. ಇದನ್ನು ಒಪ್ಪದ ವ್ಯಾಸರು. ಇಲ್ಲ ಇಲ್ಲ ಹೊಸ ಮನೆಗಳು ಬೇಡ, ಬಂಗಲೆಗಳ ಬೇಡ. ಅಂತಹ ಮನೆಗಳಿಗೆ ಯಾವ ಅನುಭವವೂ ಇತಿಹಾಸವೂ ಇರೋಲ್ಲ, ಕೌರವರ ಮನೆ, ಬಂಗಲೆಗಳಾದರೆ, ಸಾವು, ದುಃಖದ ಅನುಭವ ಹೊತ್ತು ಪಕ್ವವಾಗಿವೆ ಎಂದು ವಾದಿಸಿ ಪಾಂಡವರು ಸುಯೋಧನಾದಿಗಳ ಮನೆ ಬಂಗಲೆಗಳಿಗೆ ಹೋಗಲು ಒಪ್ಪಿಸಿದರಂತೆ.

ಅಷ್ಟು ಮಾತ್ರವೇ ಅಲ್ಲ. ಧೃತರಾಷ್ಟ್ರ, ಕುಂತಿ, ವಿಧುರರೆಲ್ಲ ವಾನಪ್ರಸ್ಥಕ್ಕೆ ಹೊರಟು ನಿಂತಾಗ ಗಾಂಧಾರಿಗೆ ಅಷ್ಟೊಂದು ಉತ್ಸುಕತೆಯಿರಲಿಲ್ಲವಂತೆ. ಕಾಡಿರಬಹುದು, ಹಿಮಾಲಯವಿರಬಹುದು. ಸ್ವರ್ಗದ ಮೆಟ್ಟಿಲಿನ ಹತ್ತಿರವೇ ಇರಬಹುದು. ಇದು ಯಾವುದೂ ನನಗೆ ಬೇಡ. ನನ್ನ ನೂರಾರು ಮಕ್ಕಳು ಸತ್ತ ಜಾಗವನ್ನು ನೋಡುತ್ತಲೇ ನಾನು ಸಾಯುತ್ತೇನೆ ಎಂದೆಲ್ಲ ಹಲುಬಿದಾಗ ಗಾಂಧಾರಿಯನ್ನು ಜೊತೆಯಲ್ಲೇ ಕರೆದೊಯ್ಯಲು ಬಹಳ ಕಷ್ಟಪಡಬೇಕಾಯಿತಂತೆ. ಅಲ್ಲೂ ಕೂಡ ಗಾಂಧಾರಿಗೆ ಮಕ್ಕಳು ಸತ್ತ ಯುದ್ಧಭೂಮಿಯ ವಿವರಗಳೇ ಕಾಣುತ್ತಿದ್ದವಂತೆ.

ಬುದ್ಧನ ಮಹಾಧರ್ಮ ಈ ದೇಶದಿಂದ ಏಕೆ ಹೊರಟುಹೋಯಿತು. ಇಲ್ಲಿಯ ಜನಕ್ಕೆ ಅದು ಏಕೆ ಒಗ್ಗಲಿಲ್ಲ ಅನ್ನುವುದಕ್ಕೆ ನೂರಾರು ಕಾರಣಗಳನ್ನು ಕೊಡುತ್ತಾರೆ. ನನಗೆ ಹೊಳೆದಿರುವ ಒಂದು ಮುಖ್ಯ ಕಾರಣವೆಂದರೆ ಆತ ತನ್ನ ಸ್ವಂತ ಅರಮನೆಯಲ್ಲೇ ಸಾವನ್ನು ನೋಡದೇ ಹೋದದ್ದು, ರಾಜ ಶುದ್ಧೋದನ ಒಂದು ನಿಯಮ ಮಾಡಿದ್ದನಂತೆ. ನಿಯಮದ ಪ್ರಕಾರ ಅರಮನೆಯಲ್ಲಿ ಯಾರೂ ಸಾಯುವ ಹಾಗಿಲ್ಲ. ಸಾಯುವ ಕ್ಷಣ ಬಂದಾಗ ಅರಮನೆಯ ಎದುರಿಗೆ ಇರುವ ಧರ್ಮಛತ್ರಕ್ಕೆ ಹೋಗಿ ಸಾಯಬೇಕು ಅಂತಾ. ಹೀಗಾಗಿ ಬುದ್ಧನಿಗೆ ಸಾವೆಂಬುದು ತಾನು ಹುಟ್ಟಿ ಆಡಿ, ಬೆಳೆದು ಓಡಾಡಿದ ಅರಮನೆಯಲ್ಲೇ ನಿರಾಯಾಸವಾಗಿ ದೊರಕುವಂತಹ ಒಂದು ಅನುಭವವಾಗಲಿಲ್ಲ. ಆಕಸ್ಮಿಕವಾಗಿ ಮೊದಲ ಸಾವನ್ನು ಕಂಡ ತಕ್ಷಣವೇ ಅದನ್ನೇ ಏನೋ ವಿಶೇಷವೆಂಬಂತೆ ಭಾವಿಸಿ, ದುಃಖಕ್ಕೆ, ಕ್ಲೇಶಕ್ಕೆ ಕಾರಣವೇನು, ಎಂದೆಲ್ಲ ಚಿಂತಿಸಿದ. ಇದರ ಬದಲಿಗೆ ಅರಮನೆಯಲ್ಲೇ ಸಾವನ್ನು ಕಂಡಿದ್ದರೆ, ಅನುಭವಿಸಿದ್ದರೆ, ಬುದ್ಧ ಕೂಡ ನನ್ನಂತೆ ನಿಮ್ಮಂತೆ ಸಾವನ್ನು ನಿರ್ಗಮನವನ್ನೂ ಅಂತ್ಯವನ್ನು ಸಹಜವಾಗಿ ಒಪ್ಪಿ ಜಗತ್ತಿನ ದುಃಖ, ಕ್ಲೇಶವೆಲ್ಲ ಅವನು ಹೇಳಿಕೊಟ್ಟಷ್ಟು ಮಹತ್ವದ್ದೆಂದು ಹೇಳಿಕೊಡುತ್ತಿರಲಿಲ್ಲ.

ತೀರಾ ಬುದ್ಧನಿಗೆ ತಿಳಿಯದೆ ಹೋದದ್ದು ನಮ್ಮ ಮಂಡ್ಯ ಸೀಮೆಯ ಒಕ್ಕಲುವಂತರಿಗೆ ತಿಳಿದಿತ್ತು. ನಮ್ಮ ತಾಯಿಯ ಊರಾದ ಗುತ್ತಲಿನಿಂದ ಮಂಡ್ಯದ ಹೈಸ್ಕೂಲಿಗೆ ಹೋಗಬೇಕಾದರೆ ಹೊಲಗಳನ್ನು ಹಾಯ್ದು ಹೋಗಬೇಕಾಗಿತ್ತು. ಅದೊಂದು ದಿವಸ ಒಬ್ಬನೇ ಸ್ಕೂಲಿಗೆ ಹೋಗುತ್ತಿದ್ದಾಗ ಹೊಲವೊಂದರಲ್ಲಿ ನಾನಾ ರೀತಿಯ ಬೃಂದಾವನದ ಕಟ್ಟೆಗಳನ್ನು ಕಟ್ಟಿದ್ದರು. ಕಾರಣವೇನೆಂದು ಅಲ್ಲೇ ಓಡಾಡುತ್ತಿದ್ದ ರೈತರನ್ನು ವಿಚಾರಿಸಿದೆ. ಬೆಳೆ ಬೆಳೆಯುವ ಹೊಲದ ಮಧ್ಯೆಯೇ ಇಷ್ಟೊಂದು, ಬೃಂದಾವನ, ಸಮಾಧಿಗಳಿರುವುದರಿಂದ ಜಾಗವೆಲ್ಲ ಪೋಲಾಗುವುದಿಲ್ಲವೆ ಎಂದು ನೇರವಾಗಿಯೇ ಕೇಳಿದೆ. ರೈತನಿಗೆ ನನ್ನ ಪ್ರಶ್ನೆಯಿಂದ ಕೋಪ, ಬೇಸರ ಬಂದರೂ, ಏನಪ್ಪಾ, ಮಗು ನೀನು ಹೇಳತಿ, ಓದೋಕೆ ನಗರಕ್ಕೆ ಬೇರೆ ಹೋಗ್ತಾ ಇದೀಯ, ಸತ್ತವರನ್ನು ಕೂಡ ನಮ್ಮ ಜೊತೆಯಲ್ಲಿ ಯಾವಾಗಲೂ ಇಟ್ಟಕೊಬೇಕಪ್ಪ, ಮನೆಯಲ್ಲೂ ಅಷ್ಟೇ, ಹೊಲದಲ್ಲೂ ಅಷ್ಟೇ, ಹಾಗೆ ನಾವು ಇಟ್ಟುಕೊಂಡಿರುವುದರಿಂದಲೇ ನಮ್ಮ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಯಾವುದರಲ್ಲಿ ಏರುಪೇರಾದರೂ ಫಸಲು ಚೆನ್ನಾಗಿ ಬರುತ್ತಿರುವುದು. ನಾನೇನಾದರೂ ಜನಕಮಹಾರಾಜನೋ, ದಶರಥ ಚಕ್ರವರ್ತಿಯೋ ಆಗಿದ್ದರೆ, ಮನೆಯೊಳಗಡೆ, ಹಿತ್ತಲಲ್ಲೇ ಇವರನ್ನೆಲ್ಲ ಇಟ್ಟುಕೊಂಡು ಇನ್ನೂ ಚೆನ್ನಾಗಿ ಮುಂದೆ ಬರುತ್ತಿದ್ದೆ.

ವಾಸ್ತು, ಜ್ಯೋತಿಷ್ಯದಲ್ಲಿ ನನಗೆ ಹದಿನಾರಾಣೆ ನಂಬುಗೆಯಿಲ್ಲದಿದ್ದರೂ, ಕುತೂಹಲವಿದೆ, ದೌರ್ಬಲ್ಯವಿದೆ. ಹಾಗಾಗಿ ಈ ಕ್ಷೇತ್ರಗಳ ಹಿರಿಯರನ್ನೆಲ್ಲ ಭೇಟಿ ಮಾಡುತ್ತಲೇ ಇರುತ್ತೇನೆ. ಇಂತವರನ್ನೆಲ್ಲ ನಾನು ಅಪಾದಮಸ್ತಕ ದ್ವೇಷಿಸಲು ಕಾರಣವೇನೆಂದರೆ ನಾನು ಭೇಟಿ ಮಾಡಿದ, ಒಬ್ಬನೇ ಒಬ್ಬ ಜ್ಯೋತಿಷಿ ವಾಸ್ತುತಜ್ಞ ಕೂಡ ಮನೆಯ ಒಂದು ಭಾಗ ಮಾಡಿಕೊಳ್ಳಬೇಕೆಂದು, ಸಾವು ಕೂಡ ಮನೆಗೆ ಭೂಷಣಪ್ರಾಯವೆಂದು ಹೇಳದೇ ಇರುವುದು. ಅಷ್ಟರಮಟ್ಟಿಗೆ ಅವರು ಅವೈಜ್ಞಾನಿಕರು ಮಾತ್ರವಲ್ಲ, ಅಸಂಪ್ರದಾಯಸ್ಥರು ಮತ್ತು ಅಸನಾತನಿಗಳು ಕೂಡ.

**ವಿವರಣೆ :**

- ಸಾವಿನ ಜೊತೆಗಿನ ಅನುಸಂಧಾನ, ಆಪ್ತಸಂವಾದ ಇಲ್ಲಿನ ಪ್ರಧಾನ ನೆಲೆ. ಸಾವು ಮನುಷ್ಯನಿಗೆ ಎಂದಿಗೂ ಅಪ್ರಿಯವೇ. ಆದರೆ ಬದುಕಿನ ಘನತೆಯನ್ನು ಸೌಂದರ್ಯವನ್ನು ಹೆಚ್ಚಿಸುವ ಸಾವಿಗೆ ಇರುವ ಘನತೆಯನ್ನು ನಾವು ಒಪ್ಪಲೇ ಬೇಕಲ್ಲವೆ ಎನ್ನುವ ಧೋರಣೆಯೊಂದನ್ನು ಬೆಳೆಸಲು ಈ ಲೇಖನ ಬಯಸುತ್ತದೆ ಎನ್ನುವುದನ್ನು ಗಮನಿಸಬಹುದು.

- ಸಾಮಾನ್ಯವಾಗಿ ಭಾರತೀಯರ ಬದುಕಿನ ಮೂಲಸಿದ್ಧಾಂತವೆಂದೇ ತಿಳಿಯಲಾದ 'ವಿಧಿವಾದ'ಕ್ಕಿಂತ ಭಿನ್ನವಾದ ನೆಲೆಯೊಂದನ್ನು ಇಲ್ಲಿ ಗುರುತಿಸಬಹುದು. ಬದುಕಿನ ಕೊನೆ ಎಂದು ತಿಳಿಯಲಾದ ಸಾವನ್ನು ಆಪ್ತವಾಗಿ ಒಪ್ಪುವ, ಅಪ್ಪುವ ದೃಷ್ಟಿಕೋನವೊಂದು ಇಲ್ಲಿ ಕೆಲಸಮಾಡುತ್ತಿದೆ.

- ಬದುಕು ಸಾವಿನ ಮತ್ತು ಸಾವು ಬದುಕಿನ ಘನತೆಯನ್ನು ಹೆಚ್ಚಿಸಲು ಪೂರಕವಾಗುವ ಈ ದೃಷ್ಟಿಕೋನ ನಾವು ಬೆಳೆಸಿಕೊಳ್ಳಲು ಕಷ್ಟವಾದ ಆದರೆ ಬೆಳಸಿಕೊಳ್ಳಲೇಬೇಕು ಎನ್ನುವ ಒತ್ತಾಸೆಯೂ ಈ ಲೇಖನದಲ್ಲಿರುವುದನ್ನು ಪರಿಶೀಲಿಸಬಹುದು. ಇದರಿಂದ ಸಾವನ್ನು ಸಹಿಸುವುದಲ್ಲ, ಅನಿವಾರ್ಯವಾಗಿ ಒಪ್ಪುವುದಲ್ಲ ಬದಲಿಗೆ ಗೌರವಿಸುವ ಮೂಲಕ ಬದುಕಿನ ದೃಷ್ಟಿಕೋನದಲ್ಲಿ ಇತ್ಯಾತ್ಮಕ ಬದಲಾವಣೆಯನ್ನು ಸಾಧಿಸಬಹುದು ಎನ್ನುವ ಆಶಯವೊಂದು ಇಲ್ಲಿದೆ ಅನ್ನಿಸುತ್ತದೆ.

**ವಿಸ್ತರಣೆ :**

- ತಮ್ಮ ಭಾಷಣವೊಂದರಲ್ಲಿ ಪ್ರೊ.ಯು.ಆರ್.ಅನಂತಮೂರ್ತಿಯವರು ಚರ್ಚಿಲ್, ಗಾಂಧಿ, ಸ್ಟಾಲಿನ್ ಈ ಮೂವರ ಫೋಟೊಗಳನ್ನು ಒಟ್ಟಿಗೆ ಇಟ್ಟು ನೋಡಿದಾಗ ತುಂಬ ಸುಂದರವಾಗಿ ಕಾಣಿಸುವುದು ಗಾಂಧಿಯೇ, ಯಾಕೆಂದರೆ ಸಾವಿನ ಭಯವನ್ನು ಗಾಂಧಿ ಗೆದ್ದಿದ್ದರು ಎನ್ನುತ್ತಾರೆ.

- 'ಸಾವಿಲ್ಲದ ಮನೆಯ ಸಾಸುವೆಯನು ತಾ' ಎನ್ನುವ ಬುದ್ಧನ ಮಾತಿನ ಅರ್ಥ ಸಾವಿನ ದುಃಖದ ಸಾರ್ವತ್ರಿಕತೆಯನ್ನು ಗುರುತಿಸುವುದು ಮಾತ್ರವಲ್ಲ, ಸಾವಿನ ದುಃಖ ಮನುಷ್ಯನನ್ನು ಮಾನವೀಯಗೊಳಿಸುವುದಕ್ಕೆ ಆಗತ್ಯ ಎನ್ನುವುದೂ ಹೌದು, ಬದುಕಿನೆದುರು ಮನುಷ್ಯ ವಿನಯಶೀಲನಾಗಲು, ಬದುಕನ್ನು ಪ್ರೀತಿಸಲು ಸಾವು ಸ್ಪಷ್ಟ ಆಧಾರವೂ ಹೌದು ಎನ್ನುವುದರ ಹಿನ್ನೆಲೆಯಲ್ಲಿ ಈ ಲೇಖನವನ್ನು ಪರಿಶೀಲಿಸಬಹುದು.

- ಸಾವನ್ನು ಶಿಕ್ಷೆಯ ಮಾನದಂಡವಾಗಿ ಬಳಸುವುದನ್ನು ಈ ಸಂದರ್ಭದಲ್ಲಿ ಚರ್ಚಿಸಬಹುದು. ಪಶ್ಚಾತ್ತಾಪವೇ ಅಂತಿಮ ಶಿಕ್ಷೆ ಎನ್ನುವ ನೈತಿಕ ಮಾನದಂಡಕ್ಕೆ ಇರುವಷ್ಟೇ ಒಲವು 'ಮರಣದಂಡನೆ'ಯ ಬಗೆಗೂ ಇದೆ. ಸಾವಿನ ಶಿಕ್ಷೆಯ ಭಯವಾದರೂ ಮನುಷ್ಯನನ್ನು ಅಪರಾಧಗಳಿಂದ ಹಿಮ್ಮೆಟ್ಟುವಂತೆ ಮಾಡಬಲ್ಲದು ಎನ್ನುವ ನಂಬಿಕೆ ಸಾವೇ ಮನುಷ್ಯನ ಆತ್ಯಂತಿಕ ಭಯ ಎನ್ನುವುದನ್ನು ಸಾಬೀತು ಪಡಿಸುತ್ತದೆ ಎನ್ನುವ ಅಂಶವನ್ನು ಗಮನಿಸಬಹುದು.

- ಹಾಗೆಯೇ ಘನವಾದ ಕಾರಣವೊಂದಕ್ಕೆ ಪ್ರಾಣ ತೆತ್ತವರನ್ನು ವೈಭವೀಕರಿಸಿ ಅವರ ಸಾವಿನ ವಿವರಗಳನ್ನು ದಾಖಲಿಸುವುದರಲ್ಲಿ ನಾಗರಿಕತೆಗಿರುವ ಆಸಕ್ತಿಯನ್ನು ಗಮನಿಸಬಹುದು. ವೀರಗಲ್ಲುಗಳು, ಮಾಸ್ತಿಕಲ್ಲುಗಳು ಸಮಷ್ಟಿ ಕಲ್ಯಾಣಕ್ಕಾಗಿ ಪ್ರಾಣತ್ಯಾಗ ಮಾಡುವುದರ ಮಹತ್ವವನ್ನು, ಕಷ್ಟ ಸಾಧ್ಯತೆಯನ್ನು ಮನದಟ್ಟು ಮಾಡಿಕೊಡುತ್ತವೆ.

- ಜಿ.ಪಿ. ರಾಜರತ್ನಂ ಸಾವನ್ನು 'ನೆಮ್ಮದಿಯ ನಾಡು' ಎಂದು ಕರೆಯುತ್ತಾರೆ. ಬದುಕಿನ ಕಷ್ಟಕೋಟಲೆಗಳಿಂದ ಮುಕ್ತವಾಗುತ್ತೇವೆ ಎನ್ನುವ ಸೂಚನೆಯ ಜೊತೆಯಲ್ಲಿಯೇ ಈ ದೃಷ್ಟಿಕೋನವು ಸಾವನ್ನು ಕುರಿತ ಇತ್ಯಾತ್ಮಕ ದೃಷ್ಟಿಕೋನವೂ ಆಗಿದೆ.

**ಲೇಖಕರ ಪರಿಚಯ:** ಕೆ. ಸತ್ಯನಾರಾಯಣ ಅವರು ಹುಟ್ಟಿದ್ದು ೧೯೫೪ ಏಪ್ರಿಲ್ ೨೧ ರಂದು. ಮಂಡ್ಯ ಜಿಲ್ಲಾ ಮದ್ದೂರು ತಾಲೋಕು ಕೊಪ್ಪ ಗ್ರಾಮದಲ್ಲಿ. ೧೯೭೩ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ.ಪದವಿ(ಸುವರ್ಣ ಪದಕದೊಂದಿಗೆ). ೧೯೭೮ರಲ್ಲಿ ಇದೇ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ. ಇವರ ಕಾದಂಬರಿಗಳಲ್ಲಿ ಒಂದು ಕಥಾನಕದ ಮೂಲಕ, ರಾಜಧಾನಿಯಲ್ಲಿ ಶ್ರೀಮತಿಯರು, ಗೌರಿ, ಸನ್ನಿಧಾನ, ಕಾಲಜಿಂಕೆ, ವಿಚ್ಛೇದನಾ ಪರಿಣಯ, ವಿಕಲ್ಪ, ಸಾವಿನ ದಶಾವತಾರ, ಲೈಂಗಿಕ ಜಾತಕ ಸೇರಿವೆ. ಕಥೆಗಳಲ್ಲಿ ನಿಮ್ಮ ಮೊದಲ ಕಥೆ, ವಿಕ್ಟೋರಿಯಾ ಮಗ ದೇವಲಿಂಗಂ, ಹಳೆಯ ಕಾಲದ ಹೊಸ ಕತೆ, ಈತನಕದ ಕಥೆಗಳು, ನಕ್ಸಲ್ ವರಸೆ, ಹೆಗ್ಗುರುತು, ಪ್ರಸಿದ್ಧನಾಮಾ, ಭಾವ ಕಲ್ಲೋಲ, ಮುಂತಾದವು. ನಮ್ಮ ಪ್ರೀತಿಯ ಕ್ರಿಕೆಟ್, ದಾಂಪತ್ಯಕ್ಕೊಂದು ಶೀಲ, ನಿಂತ ಬಂಡಿಯ ದೇಶಾಂತರ, ಲೋಕಪ್ರಬಂಧ, ನಮ್ಮಮಕ್ಕಳೇ ಚರಿತ್ರೆ ಬರೆದರೆ, ಸ್ಕೂಲು ಬಿಡುವ ಸಮಯ ಮತ್ತು ಇತರ ಪ್ರಬಂಧಗಳು ಮುಂತಾದವು ಸತ್ಯನಾರಾಯಣ ಅವರ ಪ್ರಬಂಧ ಸಂಗ್ರಹಗಳು. ಇವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿಗಳು ಲಭಿಸಿವೆ.

**ಪ್ರಶ್ನೆಗಳು:**

೧. ಲೇಖಕರು ಮನೆಯನ್ನು ಒಪ್ಪಲು ಕಾರಣವೇನು?

೨. ಹಿನ್ನಲೆ ಪರಂಪರೆ ಇಲ್ಲದ ಮನೆಗಳಲ್ಲಿ ಯಾರು ವಾಸಿಸುತ್ತಾರೆ? ಅವರ ಸ್ಥಿತಿಯೇನು?

೩. ಸಾವಿನ ಬಗ್ಗೆ ಮಾತನಾಡುವುದೆಂದರೆ ಗಂಭೀರವಾದ ಭಾಷೆಯನ್ನು ಬಳಸಬೇಕು ಎನ್ನುವ ನಂಬಿಕೆಯನ್ನು ಈ ಪ್ರಬಂಧ ಬುಡಮೇಲು ಮಾಡಿದೆ ಅಲ್ಲವೆ? ವಿವರಿಸಿ

೪. ಈ ಪ್ರಬಂಧವು ಸಾವನ್ನು ಆತ್ಮೀಯವಾಗಿಸುವ ಬಗೆ ಹೇಗೆ? ವಿವರಿಸಿ.

೫. ಸಾವಿಲ್ಲದ ಮನೆ, ಸಾವಿನ ಬಗ್ಗೆ ಗೌರವವಿಲ್ಲದ ಮನುಷ್ಯ ಇವರನ್ನು ಲೇಖಕರು ನಿರಾಕರಿಸುವುದರ ಹಿಂದಿನ ದೃಷ್ಟಿಕೋನ ಯಾವುದು?

೬. ಸಾವನ್ನು ಕುರಿತ ಇಲ್ಲಿನ ದೃಷ್ಟಿಕೋನ ಆದರ್ಶದ್ದು ಎನ್ನಿಸುತ್ತದೆಯೆ? ವಿಶ್ಲೇಷಿಸಿ.

# ಘಟಕ : ೪

## ೧. ಭಾಗೀರತಿ ಉಳಿಸಿದ ಪ್ರಶ್ನೆಗಳು

**–ನೂತನ ಎಂ ದೋಶೆಟ್ಟಿ**

**ಆಶಯ:** ಸಂಪ್ರದಾಯ, ನಂಬಿಕೆಗಳೂ ಕೂಡಾ ಹೆಣ್ಣಿನ ಶೋಷಣೆಗೆ, ಬಲಿಗೆ ನಿದರ್ಶನಗಳಾಗಿವೆ. ಹಳ್ಳಿ–ನಗರಗಳೆಂಬ ಭೇದವಿಲ್ಲದೆ ಹಲವಾರು ಕಾರಣಗಳಿಗೆ ಹೆಣ್ಣು ಬಲಿಯಾಗುತ್ತಲೇ ಇದ್ದಾಳೆ. ಅಂತ ಒಂದು ಭಾವ ಇಲ್ಲಿದೆ.

ಕೆರೆಗೆ ಗಂಡು–ಹೆಣ್ಣೆಂಬ ಭೇದವೆಲ್ಲಿಯದು?
ಮಗನೆಂದೂ ಹೇಳಬಹುದಿತ್ತು
ಬಲಿಗಾದರೋ ಸೊಸೆಯೇ ಸರಿ
ಜೋಯಿಸರ ಮಾತು

ಎಂಜಲ ನುಂಗಿದ ಭಾಗೀರತಿಯ
ಗಂಟಲಲ್ಲಿ ಒಣಗಿದ ಪ್ರಶ್ನೆ
ಹಜಾರದ ಪಿಸುಮಾತಿಗೆ
ಬಾಯಿಲ್ಲವೇಕೆ?

ಎಳೆಯ ಕೊಟ್ಟೆಣ್ಣ ಮನದಳಲು
ತವರ ಹೊಸ್ತಿಲ ಆಚೆ
ಚಿಗುರು ಚಿವುಟುವ ನಿಷ್ಠುರತೆ

ಹರಳುಗಟ್ಟಿದ ಕಣ್ಣೀರು
ಅಕ್ಕಿ, ಬೇಳೆಗೆ ಎಸರು
ಸಾವ ಮೆರವಣಿಗೆಗೂ ಪಾಯಸದೂಟ

ಮಡಿಯುಟ್ಟು ನಡೆದವಳ
ಹಿಂದೆ ಕಟುಕರ ದಂಡು
ಸ್ವಾರ್ಥಕೆಲ್ಲಿಯ ಬಲ?

ಕೋವಿ ಕೊಡಲಿಗಳಿಲ್ಲ
ಇರಿವ ಮೌನದ ಸೈನ್ಯ
ಎದೆಗಾತಿ ಉಳಿಸಿದಳು
ರಣಹೇಡಿ ಪಡೆಯ

ಕಣ್ಣ ಕನಸುಗಳು
ಎದೆಯ ಆಸೆಗಳು
ದೂರದಿನಿಯನ ನೆನಪು

ಕರಗುತ್ತ ಕರಗುತ್ತ
ಮೆಟ್ಟಿಲೇರಿತು ಕೆರೆ
ನಿಂತಲ್ಲೆ ನಿಂತ ನೀರೆ
ಸಿಗದ ಆಸರೆ
ಉಳಿವಿಗೆ ಇರದು ಅರ್ಥ

ಸಾವಲ್ಲೆ ಸಾರ್ಥಕತೆ
ಯುಗಯುಗಕು ಉಳಿದ ಪ್ರಶ್ನೆ
ಹೂಳಲ್ಲಿ ಹೂತಿದೆ.

**ಕವಯತ್ರಿ ಪರಿಚಯ:** ನೂತನ ಎಂ ದೋಶೆಟ್ಟಿ (೧೯೬೮) ಉತ್ತರ ಕನ್ನಡದ ಸಿದ್ಧಾಪುರದವರು. ಇವರ ಕವನ ಸಂಕಲನಗಳು: ಕಾಲವೆಂಬ ಮಹಾಮನೆ, ಭಾಗೀರತಿ ಉಳಿಸಿದ ಪ್ರಶ್ನೆಗಳು. ಯಾವ ವೆಬ್‌ಸೈಟಿನಲ್ಲೂ ಉತ್ತರವಿಲ್ಲ – ಕಥಾ ಸಂಕಲನ.

**ಪ್ರಶ್ನೆಗಳು:**

೧. ಜೋಯಿಸರು ಹೇಳಿದ್ದೇನು?
೨. ಕೆರೆಗೆ ಬಲಿ ಏಕೆ ನೀಡಬೇಕಾಯಿತು?
೩. ಭಾಗೀರತಿಯ ಪ್ರಶ್ನೆ ಏನು?

# ೨. ಕೊನೆಯ ದಾರಿ

**–ಡಾ. ವೀಣಾ ಶಾಂತೇಶ್ವರ**

**ಆಶಯ:** ಕೌಟುಂಬಿಕ ಕಟ್ಟುಪಾಡು ಹಾಗೂ ಸಾಂಸ್ಥಿಕ ಮೌಲ್ಯಗಳು ಹೇರಿದ ಒಪ್ಪಿತ ಬಂಧನಗಳನ್ನು ಧಿಕ್ಕರಿಸಿ ಹೆಣ್ಣಾದವಳು ತನ್ನ ಸ್ತ್ರೀ ಅಸ್ಮಿತೆ ಮತ್ತು ತಾಯ್ತನದ ಅನನ್ಯತೆಯ ಅಭಿವ್ಯಕ್ತಿಗಾಗಿ ಹಿಡಿಯುವ ಹೊಸದಾರಿ ಮತ್ತು ಅವಳ ತುಡಿತದ ದಿಟ್ಟತನವನ್ನು ಈ ಕಥೆಯ 'ಲೀಲಾ'ಳ ಪಾತ್ರದ ಮುಖೇನ ಕಾಣಬಹುದಾಗಿದೆ. ಅವಳ ಈ ಹುಡುಕಾಟದಲ್ಲಿ ಪುರುಷ ಪ್ರಧಾನ ಸಮಾಜದ ಮನಸ್ಥಿತಿಯ ಮತ್ತೊಂದು ಮುಖದ ಅನಾವರಣವನ್ನು ಈ ಕತೆ ಬಯಲು ಮಾಡುತ್ತದೆ.

೨೪ ಜುಲೈ, ೧೯೮

ಇಂದು ಇಡಿಯ ದಿನ ತಿರುಗಾಡಿ ಸಾಕಾಯಿತು, ಅಬ್ಬ, ಎಂತಹ ಹಸಿವು ಆ ಗೋವಿಂದಮೂರ್ತಿಗೆ! ಎಷ್ಟೆಲ್ಲ ತಿಳಿಕೊಂಡಿದ್ದಾನೆ ಅವನು ಈ ವಿಷಯದ ಬಗ್ಗೆ! ಡಾಕ್ಟರ್ ಅಲ್ಲದೆ ? ಛಿ. ಈ ಡಾಕ್ಟರರೆಲ್ಲಾ ಹೊಲಸು ಜನವಪ್ಪ, ಮನುಷ್ಯನ ದೇಹವನ್ನು ಕೊಯ್ದು ಕೊಯ್ದು ಎಲ್ಲ analyse ಮಾಡಿ ಎಲ್ಲ ನೋಡಿದವರು ಇವರು. ಅದಕ್ಕೆ ಗೋವಿಂದಮೂರ್ತಿಗೆ ಈ ಬಗ್ಗೆ ಏನು ಮಾತಾಡಲಿಕ್ಕೂ ನಾಚಿಕೆಯಿಲ್ಲ, ಇದು ಹೀಗೆ, ಅದು ಹಾಗೆ ಅಂತ ನನಗೆ ವಿವರಿಸಿ ಹೇಳುತ್ತಾನೆ. 'ಲಿಲಿ, you are a perfect woman'- ಅಂದ ನನಗೆ ಇವತ್ತು, ಕೆರೆಯ ಪಕ್ಕದ ದಿನ್ನೆಯ ಆಚೆ ಕೂತಿದ್ದಾಗ, ನನಗೆ ಅಭಿಮಾನ ಅನ್ನಿಸಿತೆ ನನ್ನ ಬಗ್ಗೆ? ಹೌದು ಅಂತ ಕಾಣುತ್ತದೆ. ಯಾಕನ್ನಿಸಬಾರದು? ನಿನ್ನ ದೇಹ ರಚನೆ ಚೆನ್ನಾಗಿದೆ, ಪೂರ್ಣವಾಗಿದೆ ಅಂತ ಹೇಳಿದಾಗ ಯಾವ ಹೆಂಗಸಿಗೆ ಅಭಿಮಾನ ಅನ್ನಿಸುವುದಿಲ್ಲ?

ಆದರೆ ಛೆ, ಗೋವಿಂದಮೂರ್ತಿಯೊಂದಿಗೆ ಇಡೀ ದಿನ ತಿರುಗಿ ಕೂತು ಮಲಗಿ ಏನು ಮಾಡಿದರೂ ಒಮ್ಮೆ ಸಹ ಮೈ ಜುಮ್ ಅನ್ನಲಿಲ್ಲ. ನನಗೆ ಇಂಥವರ ಗೆಳೆತನ ಈಗ ಬೇಡವಾಗಿದೆ. ಇವರಿಂದ ಏನೂ ಉಪಯೋಗವಿಲ್ಲ. ಭಯಂಕರ ಮನುಷ್ಯ ಈ ಗೋವಿಂದಮೂರ್ತಿ, ಎಂದೂ ತೀರದ ದಾಹ ಅವನದು. ಬೇರೆ ಮಾತಿಗೆ ಅವಕಾಶವೇ ಕೊಡುವುದಿಲ್ಲ ಅವನು. 'ಜೀವನ ಇರೋದೇ ಸುಖ ಅನುಭವಿಸೋದಕ್ಕೆ ಲಿಲಿ, ಈಗಲ್ಲದಿದ್ದರೆ ಇನ್ನ್ಯಾವಾಗ ನಾವು ಮಜವಾಗಿರುವುದು? ಮುದುಕರಾದ ಮೇಲೆಯೇ? ಏನು? ಪಾಪ? ಪಾಪ ಬಂದೀತು ಅನ್ನುತ್ತಿಯಾ?' – ಅಂತ ಅಂದು ಅವನು ಭಯಂಕರವಾಗಿ ನಕ್ಕದ್ದು ಇನ್ನೂ ನೆನಪಿದೆ ನನಗೆ. 'ಇಲ್ಲಿ ಕೇಳು ಲಿಲಿ, ಪಾಪ ಪುಣ್ಯ ಎಲ್ಲಾ ಸುಳ್ಳು, ನನ್ನ ಪಾಲಿಗಂತೂ ಇದೊಂದೇ ಖರೆ ಇದೊಂದೇ ಖರೆ' ಅನ್ನುತ್ತಾನೆ ಅವನು. ಅವನಂದದ್ದು ಖರೆ ಅಂತ ನನಗೂ ಅನ್ನಿಸಿತಲ್ಲ!

ಈ ಗೋವಿಂದಮೂರ್ತಿಗೂ ಆ ವಿನಯ ಸಾಳಕರಗೂ ಎಲ್ಲಿಂದೆಲ್ಲಿಯ ಹೋಲಿಕೆ! ಮಾತೆತ್ತಿದರೆ ಪಾಪ–ಪುಣ್ಯ, Morality-ethics ದ ಗಂಟನ್ನೇ ಬಿಚ್ಚುತ್ತಾನೆ ಅವನು. ಕಾಲೇಜಿನಲ್ಲಿ ಹುಡುಗರಿಗೆ ಫಿಲೊಸೊಫಿ ಕಲಿಸಿ–ಕಲಿಸಿ ಅಭ್ಯಾಸ ಅವನಿಗೆ, ಏನು ಮಾಡಬೇಕು, ಏನು ಮಾಡಬಾರದು ಅಂತ ಏವೇಚಿಸುವುದರಲ್ಲೇ ಜೀವನ ಸವೆಸುತ್ತಿದ್ದಾನೆ. ವಿನಯ, ಒಮ್ಮೆ ಏನಾದರೂ ಪ್ರಯತ್ನ ಮಾಡಿ ಅವರನ್ನು ದಾರಿಗೆ ಹಚ್ಚಬೇಕು.

ದಾರಿ? ಡಾ. ಗೋವಿಂದಮೂರ್ತಿಯ ದಾರಿಗೇ? ಊಹೂ, ವಿನಯನ ಕೂಡ ನಿಷ್ಠೆ, ಪಾವಿತ್ರ್ಯ, ಜೀವನದ ಮೌಲ್ಯಗಳು ಇತ್ಯಾದಿ ಬಗ್ಗೆ ತಾಸುಗಟ್ಟಲೆ ಸೀರಿಯಸ್ಸಾಗಿ ಚರ್ಚೆ ಮಾಡುವಾಗ ಸಿಗುವ ಏನೋ ಒಂದು ಬಗೆಯ ಗಾಳಿಯಲ್ಲಿ ತೇಲಿಸಿದಂತಹ
ಅನಿಸಿಕೆಯನ್ನು ವ್ಯರ್ಥ ಕಳೆದುಕೊಳ್ಳಲು ಮನಸ್ಸಿಲ್ಲ ನನಗೆ.

ನಿದ್ದೆ ಬರುತ್ತಿದೆ. ಮೈ–ಕೈ ನೋವು...ಛೇ. ಇನ್ನು ಈ ಗೋವಿಂದಮೂರ್ತಿಯ ಜೊತೆಗೆ outing ಗೆ ಹೋಗಬಾರದು. ಅವನ ಸಹವಾಸವೇ ಸಾಕು ಇನ್ನು, ಅವನೆಂದೂ ನನಗೆ ಬೇಕಾದದ್ದು ಕೊಡಲಾರ.

ನಾಳೆ ಬಾಸ್‌ಗೆ ಕಳೆದ ತಿಂಗಳ accounts ಒಪ್ಪಿಸಬೇಕು. ಆಫೀಸ್ ಬಿಟ್ಟ ಮೇಲೆ ಸಂಜೆ ಮನೆಗೆ ಬಾ ಅಂದಿದ್ದರು ನಿನ್ನೆ. ಯಾಕೆ ಬರಲಿಲ್ಲ ಅಂತ ಕೇಳಬಹುದು ನಾಳೆ, ಹೇಳಿಬಿಡುತ್ತೇನೆ ಸ್ಪಷ್ಟವಾಗಿ ನಿಮ್ಮ ಹೆಂಡತಿ ಊರಿಗೆ ಹೋದಾಗ ಇನ್ನು ನಿಮ್ಮ ಮನೆಗೆ ಬರುವುದಿಲ್ಲ ಎಂದು. ಇವರಿಗೆ ತಮ್ಮ ಆ ಟಿ. ಬಿ. ಹೆಂಡತಿ ಬುರ್ಖಾ ಹಾಕಿಕೊಂಡು ಏಳೂ ಮಕ್ಕಳನ್ನು ಕಟ್ಟಿಕೊಂಡು ತವರಿಗೆ ಹೋದಾಗಲೆಲ್ಲ ಆಫೀಸಿನ ಕೆಲಸಕ್ಕಾಗಿ ನನಗೆ ಮನೆಗೆ ಬಾ ಅಂತ ಹೇಳುವ ಹುಕಿ ಬರುತ್ತದೆ. ಅಯ್ಯೋ, ಅವರ ಆ ಗಡ್ಡ, ಉದ್ದನ್ನ ಟೋಪಿ, ಮಾತಿಗೊಮ್ಮೆ 'ಅಲ್ಲಾಕೆ ಕಸಮ್' ಪಲ್ಲವಿ, ಈ ಯಾವುದೂ ನಾನು like

ಮಾಡುವುದಿಲ್ಲ. ಆ ಪುಷ್ಪಾ ಕುಲಕರ್ಣಿ ಹೇಗೆ ಸಹಿಸುತ್ತಾಳೋ? ಟೈಪ್ ಎಲ್ಲಾ ಅವರ ಮನೆಯಲ್ಲಿಯೇ ಕೂತು ಮಾಡುತ್ತಾಳೆ.

ನನಗೆ ಆಗುವುದಿಲ್ಲ ಎಂದು ಹೇಳಿಬಿಡುತ್ತೇನೆ ನಾಳೆ, ಮೆಮೊ ಕಳಿಸಿದರೆ ಕಳಿಸಲಿ, ಕೆಲಸದಿಂದಲೂ ತೆಗೆದುಬಿಡಲಿ ಬೇಕಾದರೆ, 'ನಿನಗ ಬೇಕು ಅನಿಸಿದಾಗ ಬಂದುಬಿಡು. ನನ್ನ ಎಸ್ಟೇಟು ನೋಡಿಕೊಂಡು ಇದ್ದು ಬಿಡು. ನನಗರೆ ಬ್ಯಾರೆ ಯಾರಿದ್ದಾರ?"– ಅಂದರು ಶಂಕರಗೌಡರು ಮೊನ್ನೆ. ದೇವೂರು ಸಣ್ಣ ಹಳ್ಳಿಯಾದರೂ ಅಡ್ಡಿಯಿಲ್ಲ. ಈ ಬಾಸ್‌ನ 'ಅಲ್ಲಾಕೆ ಕಸಮ್' ನಾನು ತಾಳಲಾರೆ....

೨೮ ಜುಲೈ, ೧೯೫೮

ಬೇಸರ....ಬೇಸರ ಈ ಬಾಸ್ ಬಹಳ ಕಾಡುತ್ತಿದ್ದಾನೆ. ಇವತ್ತು ಸಂಜೆ ಆ ಎಲ್ಲಾ accounts ಬರೆದು ಮುಗಿಸುವ ತನಕ ನನ್ನ ಭುಜದ ಮೇಲಿನ ಕೈ ತೆಗೆಯಲೇ ಇಲ್ಲ. ಮುದುಕನಾದರೂ ಇಷ್ಟು ಚಪಲ ಅವನಿಗೆ, ಚಪಲ–ಹ್ಞಾ ಬರೇ ಚಪಲ. ಅದಕ್ಕಿಂತ ಹೆಚ್ಚಿನದು ಏನೂ ಇಲ್ಲ, ನಾನು ವಿರೋಧಿಸುತ್ತಿದೆ ಅಂತ ತಿಳಿದಿದ್ದನೇನೋ. ನಾನು ಏನೂ ವಿರೋಧ ಮಾಡದೇ ಇದ್ದಾಗ ಎಷ್ಟು ಆಶ್ಚರ್ಯ ಅವನಿಗೆ! ...... ಗೋವಿಂದಮೂರ್ತಿಯಿಂದ ಸಿಗಲಾರದ್ದು ಇವರಿಂದಲಾದರೂ ಸಿಕ್ಕಿತೆಂದು ಹ್ಞೂ ಅಂದೆ. ಆದರೆ ಛೆ, ಇವನೂ ಹೇಡಿಯ 'ಏನಂದಿ ಲಿಲಿ? ಮಗು ಬೇಕೆ ನಿನಗೆ? ತೋಬಾ ತೋಬಾ, ನೀನು ಇನ್ನೂ ಮದುವೆಯಾಗದ ಹುಡುಗಿ, ನಮ್ಮಿಂದ ಇಂಥ ಪಾಪದ ಕೆಲ್ಸ ಆಗೋದಿಲ್ಲ. 'ಅಲ್ಲಾಕೆ ಕಸಮ್'– ಅಂತ ತಡವರಿಸಿದ.

ಇವನ ಗಡ್ಡಕ್ಕೆ ಬೆಂಕಿ ಹಚ್ಚಬೇಕು. ಮದುವೆಯಾಗದ ಹುಡುಗಿಯ ಕೂಡ ಮಲಗಲಿಕ್ಕೆ ಬೇಕು ಈ ಸಾಬನಿಗೆ. ಆದರೆ ಅವಳಿಗೆ ಇಷ್ಟೊಂದು ಅವಶ್ಯವಾಗಿರುವ ಒಂದು ಸಣ್ಣ favour ಮಾಡಲಿಕ್ಕೆ ಬೇಡ ಅವನಿಗೆ, ಪಾಪವಂತೆ, ಥೂ...– ಗೋವಿಂದಮೂರ್ತಿಯಿಂದ ಆಗಬೇಕಿತ್ತು, ಈ ಕೆಲಸ, ಅವನೇನೂ ಪಾಪ–ಪುಣ್ಯದ ಬಗ್ಗೆ care ಮಾಡುವುದಿಲ್ಲ. ಆದರೆ ಅವನು ಸದಾ ಜಾಗರೂಕನಾಗಿರುವ ಮನುಷ್ಯ, ನನಗೆ ಬೇಕಾದ್ದನ್ನು ಕರುಣಿಸಿ ಬಂಧನದಲ್ಲಿ ಸಿಲುಕಿಕೊಳ್ಳುವ ಇಚ್ಛೆಯಿಲ್ಲ ಅವನಿಗೆ, ಈ ಬಂಧನದ ಒಂದು ಎಳೆಯನ್ನೂ ಅವನಿಗೆ ಸೋಕಿಸಿಕೊಡುವುದಿಲ್ಲವೆಂದು, ಈಗಿನ ಹಾಗೆಯೇ ನಂತರವೂ ಅವನು free ಆಗಿರಬಹುದೆಂದು ನಾನೆಷ್ಟು ಹೇಳಿದರೂ ಕೇಳುವುದಿಲ್ಲ ಅವನು. 'ಲಿಲಿ, excuse me. ನನ್ನನ್ನ ಅಂಥ ಜಂಜಡದೊಳಗೆ ಸಿಗಿಸಬೇಡ, ನಾನೇನು ಮನುಷ್ಯನಲ್ಲವೆ? ನೀನು ನನಗೆ ಬಂಧನ ಹಾಕದಿದ್ದರೂ ನನ್ನಿಂದ ನಿನಗೆ ಹುಟ್ಟಿದ ಮಗು ಬಗ್ಗೆ ತಾನಾಗಿಯೇ ನನ್ನಲ್ಲಿ ಪ್ರೀತಿ–ಗೀತಿ ಹುಟ್ಟಿದರೆ? ಆಗ? ನನ್ನ ಜೀವನದೊಳಗಿನ ಮಜಾ ಎಲ್ಲಾ ಖಲಾಸ್' ಅನ್ನುತ್ತಾನೆ.

– ಇವರೆಲ್ಲ ನಿರುಪಯೋಗಿಗಳು....
ವಿನಯ ಸಾಳಕರನನ್ನೇ ಸಾದು ಮಾಡಬೇಕು.

೩೧ ಜುಲೈ, ೧೯೫೮

ಆಫೀಸಿನಿಂದ ಬರುವಾಗ ತಂದಿದ್ದ ಚಾಕಲೇಟನ್ನು ಬಾಗಿಲಲ್ಲಿ ನಿಂತಿದ್ದ ಮುನ್ನಿಗೆ ಕೊಟ್ಟಾಗ ಮುನ್ನಿಯ ಮಮ್ಮಿ ಕೇಳಿದಳು, 'ಮಕ್ಕಳನ್ನ ಇಷ್ಟ ಪ್ರೀತಿ ಮಾಡ್ತೀರಿ, ಲಗೂನ ಲಗ್ನಾ ಆಗಿಬಿಡ್ರೆಲ್ಲ?'

–ಹ್ಞ, ಲಗ್ನ, ಲಗ್ನ ಅಂದಕೂಡಲೆ ನೆನಪಾಗುವುದು ಆ ಕತೆಯೆಲ್ಲ. ಆ ಗದ್ದಲ, ಬಜಂತ್ರಿ, ಅರಿಷಿಣ, ಮತ್ತು ಆ ಮನುಷ್ಯ. ನನ್ನ ಕೈಹಿಡಿದಿದ್ದ ಆ ಪಶು, ಪತಿ'ದೇವರು'. ಅವನೊಂದಿಗೇ ನೆನಪಾಗುವುದು ಅವನ ಆ ಅಬ್ಬರ, ಅವನ ಕುಡಿತ, ಅವನ ಸೂಳೆಯರು, ಅವನು ನನಗೆ ಕೊಟ್ಟ ಹಿಂಸೆ..
–ಥೂ, ಕೆಟ್ಟ ಕನಸು. ಎಲ್ಲ ಹರಿದುಕೊಂಡು ಚೆಲ್ಲಿ ಕೊಟ್ಟು ಬಿಟ್ಟುಬಿಟ್ಟು ಹೇಗೆ ಇಷ್ಟು ದೂರ ಬಂದೆ, ದಿನ ಕಳೆದೆ, ಹೇಗೆ ಹೊಸ ಮನುಷ್ಯಳಾದೆ– ಈ ಎಂದಾದರೂ ಮರೆತೇನೇ?

ಲಗ್ನವಂತೆ ಲಗ್ನ, ಮತ್ತೊಂದು ಪಶುವಿನ ಕೂಡ. ಛಿ....
'ಎಲ್ಲಾ ಗಂಡಸ್ರೂ, ಕೆಟ್ಟವರಿರೋದಿಲ್ಲ ಲೀಲಾ, ನೀ ಸಣ್ಣ ಹುಡುಗಿ, ಒಬ್ಬಾಕೀನೇ ಇರಬಾರದು. ಮತ್ತ ಬ್ಯಾರೆ ಲಗ್ನಾ ಆಗು. ನೀ ಹ್ಞಾ ಅಂದರ ನಾ ಅದರ ವ್ಯವಸ್ಥಾ ಮಾಡ್ತೀನಿ'– ಅನ್ನುತ್ತಾರೆ ಶಂಕರಗೌಡರು.

ಹೌದು. ಶಂಕರಗೌಡರಂಥ ಒಳ್ಳೆಯ ಗಂಡಸರೂ ಇರುತ್ತಾರೆಂದು ನನಗೆ ಗೊತ್ತು. ಎಂತಹ ಮನುಷ್ಯ! ಮಾಡಿಕೊಂಡ ಹೆಂಡತಿಗೆ ಮದುವೆಯಾಗಿ ಇಪ್ಪತ್ತೈದು ವರ್ಷಗಳಾದರೂ ಮಕ್ಕಳಾಗದೇ ಇದ್ದರೂ, ಸ್ವಲ್ಪವೂ ಬೇಸರಿಸದೆ ನಿಷ್ಠೆಯಿಂದಿರುವ

ಮನುಷ್ಯ. ಯಾರು ಏನು ಕೇಳಿದರೂ ಇಲ್ಲ ಅಂದವರಲ್ಲ. ಎಂತಹ ಮನಸ್ಸು! ಅವರ ಪ್ರೀತಿ–ಅನುಕಂಪ ಎಂದೋ ಸತ್ತುಹೋದ ಅಪ್ಪನ ನೆನಪು ತರುತ್ತದೆ... ತರುತ್ತದೆ.

ಆದರೆ ಹಾಗೆಂದು ನಾನು ಅವರ ಉಪದೇಶದಂತೆ ಮತ್ತೆ ಮದುವೆಯಾಗಲಿಕ್ಕೆ ಹೇಗೆ ಶಕ್ಯವಿದೆ? ಒಮ್ಮೆ ಬಿದ್ದು ಎದ್ದ ಬಾವಿಯಲ್ಲೇ ಮತ್ತೆ ಬೀಳಲೊಲ್ಲೆ ನಾನು.

–ಹಾಗಾದರೆ ಮುನ್ನಿ? ಎಷ್ಟು ಮುದ್ದು ಮಗು. ನನಗೆ ಬೇಕು ಅಂಥ ಒಂದು ಮಗು. ಬರೇ ಮಗು, ಯಾರಿಂದಲಾದರೂ ಸರಿಯೆ. ಹೇಗಾದರೂ ಸರಿಯೆ, ಆದರೆ ಹೇಗೆ?

ಮಧ್ಯಾಹ್ನ ಆಫೀಸಿನಲ್ಲಿ ಲೆಕ್ಕ ಬರೆಯುತ್ತಾ ಇದನ್ನೇ ಯೋಚಿಸುತ್ತಿದ್ದಾಗ ಎದುರಿನ ಟೇಬಲಿಗೆ ಕೂತಿದ್ದ ವಿಲಿಯಮ್ಸ್ ಕಾಣಿಸಿದ. ಇನ್ನು ವಿಲಿಯಮ್ಸ್‌ನನ್ನು ನೋಡಿ ಉಪಯೋಗವಿಲ್ಲ. ಮೊನ್ನೆ ಸ್ಪಷ್ಟ ಹೇಳಿಬಿಟ್ಟಿದ್ದಾನೆ – ಇನ್ನು ನನ್ನ ಭೆಟ್ಟಿಯಾಗುವುದಿಲ್ಲ ಅಂತ. ಹಾಗೇನಾದರೂ ಭೆಟ್ಟಿಯಾದರೆ ಅವನ ದಪ್ಪ ಹೊಟ್ಟೆಯ ಆಂಟಿ ತನ್ನ ಆಸ್ತಿಯಲ್ಲಿ ಚಿಕ್ಕಾಸೂ ಅವನಿಗೆ ಕೊಡುವುದಿಲ್ಲ ಅಂತ. ಅಷ್ಟೇ ಅಲ್ಲ, ಆ ಆಂಟಿಯ ಮಗಳು ತೆಳು ನಡುವಿನ ಇವನ ಕಸಿನ್ ಇವನೊಂದಿಗಿನ ತನ್ನ engagement ಸಹ break ಮಾಡಿಕೊಳ್ಳುತ್ತಾಳೆ ಅಂತ. ಇಷ್ಟೆಲ್ಲ ಲುಕ್ಸಾನು ಎದುರಿಸಿ ಅವನೇಕೆ ನನ್ನನ್ನು ಪ್ರತಿ ರವಿವಾರ ಪಿಕ್ಚರಿಗೆ ಕರೆದೊಯ್ಯಬೇಕು? ನನ್ನೊಂದಿಗೆ ರಾತ್ರಿ ಕಳೆಯಬೇಕು? ಮತ್ತು ಹೇಗೆ? – "ನಿನ್ನ ಕೂಡ ಕಳೆದ ಸುಖದ ದಿನಗಳನ್ನ ನಾನೆಂದೂ ಮರೆಯೋದಿಲ್ಲ ಲಿಲಿ, ದಿನಾ ನಿನಗಾಗಿ– ನಿನ್ನ ಒಳ್ಳೆಯದಕ್ಕಾಗಿ ನಾನು ಜೀಸಸ್‌ನಲ್ಲಿ ಪ್ರಾರ್ಥನೆ ಮಾಡುವೆ. God bless you ನನ್ನ ಕೈ ಅದುಮಿ ತುಂಬ ಚಿಂತಾಜನಕ ರೀತಿಯಲ್ಲಿ ತಲೆ ಕೊಡವಿ ಹೊರಟು ಹೋಗಿದ್ದ ಈ ವಿಲಿಯಮ್ಸ್... ಇಂದು ತಲೆ ಕೆಳಗೆ ಹಾಕಿ ಕೂತು ಏನೋ ಗ್ರಾಫ್ ತಯಾರಿಸುತ್ತಿದ್ದ. ಅವನ ಹಣೆಯ ಮೇಲೆ ಸುರುಳಿಯಾಗಿ ಬಿದ್ದ ಆಲೆಗೂದಲನ್ನೆ ನೋಡುತ್ತಿದ್ದೆ ಎಷ್ಟೋ ಹೊತ್ತಿನ ತನಕ.

-ವಿಲಿಯಮ್ಸ್‌ನ ಈ ಅಲೆಗೂದಲೇ ಅಲ್ಲವೆ ಅವನು 'ಬಾ' ಅಂದಾಗ ನಾನು 'ಹ್ಞೂ' ಅನ್ನಲು ಕಾರಣವಾದದ್ದು? ಗೋವಿಂದಮೂರ್ತಿಯ ಹಾಗೆ ಕಾಡು–ಒರಟು ಅಲ್ಲ ವಿಲಿಯಮ್ಸ್, ತೀರ ಮೃದು, ತೀರ gentle. ಹ್ಯಾ, ಎಲ್ಲಾ ವಿಷಯದಲ್ಲೂ.

ಅವನ ಹಾಗೇ gentle ಆದ, ನೀಲಿ ಕಣ್ಣಿನ, ಅಲೆಗೂದಲಿನ ಒಂದು ಮಗು ಅವನಿಂದ ನನಗೆ ಆಗೇ ತಿರುವುದೆಂದು ಎಷ್ಟು ಆಸೆ ಹೊತ್ತಿದ್ದೆ. ಮೂರು ತಿಂಗಳ ಶ್ರಮ ವ್ಯರ್ಥವಾಗಿ ಹೋಯಿತು. ವಿಲಿಯಮ್ಸ್‌ನ ಸಹವಾಸ ಫಲಿಸುವ ಮೊದಲೇ ಅವನು ದೂರ ಹೋದ. ಅವನ ಕಸಿನ್, ಅವನ ಆಂಟಿ, ಎಲ್ಲಕ್ಕಿಂತ ಮುಖ್ಯವಾಗಿ ಆ ಆಂಟಿಯ ಆಸ್ತಿ – ಅವನನ್ನ ದೂರ ಒಯ್ಯಿತು....

–ಮುನ್ನಿ, ಮುನ್ನಿಯ ನೆನಪು ನನ್ನನ್ನ ಅಸ್ತವ್ಯಸ್ತ ಮಾಡುತ್ತದೆ....

ಏನಯ ಸಾಳಕರನೊಂದಿಗೆ appointment, ನಾಳೆ ಸಂಜೆ ಐದು ಗಂಟೆಗೆ ಆಪೇರಾದಲ್ಲಿ.

೪ ಅಗಸ್ಟ್, ೧೯೫೮.

ಶಂಕರಗೌಡರು ಯಾಕೋ ಬಹಳ ಚಿಂತೆಯಲ್ಲಿದ್ದ ಹಾಗಿತ್ತು. ಅರ್ಧ ತಾಸು ಸಹ ನಿಲ್ಲಲಿಲ್ಲ. 'ಹೈಬ್ರಿಡ್ ಬೆಳೆಗೆ ಗೊಬ್ಬರ ಕೊಳ್ಳಲಿಕ್ಕೆ ಬಂದಿದ್ದೆ. ಹಾಗೇ ನಿನ್ನ ನೋಡಿ ಹೋಗೋಣ ಅಂತ ಈ ಕಡೆ ಬಂದೆ. ಹೋಗ್ತೀನವ್ವಾ, ಕತ್ತಲಾಗೂದರಾಗ ದೇವೂರು ಮುಟ್ಟಬೇಕು, ಹ್ಯಾಂಗಿದ್ದೀ?'

– ಅವರ ಮಾತಿನ ಕಡೆ ಲಕ್ಷ್ಯವಿರಲಿಲ್ಲ. ನನಗೆ ಅವರ ಹೊಸ ಇಂಪಾಲಾ ನೋಡುತ್ತಿದ್ದೆ. ಆರಡಿ ಎತ್ತರದ, ಅಗಲವಾದ ಎದೆಯ, ಗಿರಿಜಾ ಮೀಸೆಯ ಶಂಕರಗೌಡರಿಗೆ ಅ ಮೊದಲಿನ ಫಿಯಾಟ್‌ಗಿಂತ ಇದೇ ಹೆಚ್ಚು ಒಪ್ಪುತ್ತದೆ– ಅಂದುಕೊಳ್ಳುತ್ತಿದ್ದೆ.

ಕಾಲ, ದುಃಖ, ಬೇಸಿಗೆ ಈ ಯಾವುದೂ ಗುಡ್ಡಗಳನ್ನು–ಗಿಡಗಳನ್ನು ದಾಟಿ ದೇವೂರು ಮುಟ್ಟಿ ಈ ಗೌಡರ ತನಕ ಎಂದೂ ಹೋಗಿಯೇ ಇಲ್ಲವೇನೋ ಅನಿಸುವುದು ಬಹಳ ಹಿಂದೆ, ನಾನು ಕನ್ನಡ ಶಾಲೆಯಲ್ಲಿದ್ದಾಗ, ಮೊದಲ ಸಲ ಅಪ್ಪ ಅವರನ್ನು ಮನೆಗೆ ಕರಕೊಂಡು ಬಂದು, 'ಏ ಏನು ನಡೆಸೀಯೇ?' ಅಂತ ಅವ್ವನನ್ನು ಕೂಗಿ ಕರೆದು, 'ನೋಡು, ಶಂಕರು– ನನ್ನ ಜಾನಿದೋಸ್ತ ಬಂದಾನೆ, ಶ್ಯಾವಿಗೆ ಹಾಕು. ಅಂತ ಹೇಳಿದಾಗ, ನನ್ನನ್ನ ಆ ಆಜಾನುಬಾಹು ಹೆಗಲಮೇಲೆ ಹೊತ್ತು ಮೂರು ಸುತ್ತು ಕುಣಿದಾಗ, ಹೇಗಿದ್ದರೋ ಇನ್ನೂ ಹಾಗೆಯೇ ಇದ್ದಾರೆ, ಅವರ ಜೀವನದಲ್ಲಿ ಎಂದೂ ಏನೂ ಬದಲಾಗಿಲ್ಲ,

ಆ ಅರ್ಧಾಂಗವಾಯುವಿನಿಂದ ಹಾಗೆ ಹಾಸಿಗೆ ಹಿಡಿದ ಹೆಂಡತಿ, ಮನೆಯಲ್ಲಿ ನಿತ್ಯದಾಸೋಹ, ನೂರಾಎಂಟು ಕಮಿಟಿಗಳ ಮೆಂಬರಶಿಪ್ಪು, ತೋಟಕ್ಕೆ ಹೊಸ ಬಾವಿ, ಹೊಲಕ್ಕೆ ಟ್ರ್ಯಾಕ್ಟರ್, ಆ ಜೋಡುಗಳಿಯ ಬಂದೂಕು– ಎಲ್ಲ ಹಾಗೇ ಇವೆ. ಅದರೊಂದಿಗೆ ಈ ಗೌಡರ ಎತ್ತರ, ಅಗಲ, ಮೀಸೆಯ ಹುರಿ ಸಹ– ಹಾಗೇ ಇವೆ.

– ನಿನ್ನ ಜೀವನ ಸುಖೀ ಆಗಲಿಕ್ಕೆ ನನ್ನ ಜೀವಾ ಕೊಟ್ಟೇನು'! ಅಂತ ಎಷ್ಟು ಸಲ ಹೇಳಿಲ್ಲ ಈ ಗೌಡರು....

ಅಂಥ ಮನುಷ್ಯನಿಗೆ ಏನು ಚಿಂತೆಯೋ, ಇಂದು ಮೊದಲ ಸಹ ಆ ದೊಡ್ಡ ಹಣೆಯ ಮೇಲೆ ನಿರಿಗೆ ಕಂಡೆ. ಮಾತಾಡದೆ ಆತ ಸುಮ್ಮನೆ ಕೂತಿದ್ದಾಗ ಓಡಿಹೋಗಿ ಅವರ ತಲೆಯನ್ನೆ ನನ್ನ ಎದೆಯೊಳಗೆ ಬಚ್ಚಿಟ್ಟುಕೊಂಡು ಮಗುವನ್ನು ರಮಿಸುವಂತೆ ರಮಿಸಬೇಕು ಅನ್ನಿಸಿತು.

ಧೂಳೆಬ್ಬಿಸುತ್ತ ಆ ಇಂಪಾಲಾ ಕಣ್ಮರೆಯಾದಾಗ ಕೋಣೆಯ ಕಡೆ ತಿರುಗಿ ಬರುತ್ತ ದಾರಿಯೊಳಗೆ ಮತ್ತೆ ಮುನ್ನಿ – 'ಆಂಟಿ, ಚಾಕಲೇಟು ತಂದಿಲ್ಲ?'

ಈ ಮುನ್ನಿಯನ್ನೇ kidnap ಮಾಡಿಕೊಂಡು ಹೋದರೆ...

೧೪ ಆಗಸ್ಟ್ ೧೯೫೮

ಎಷ್ಟು ದಿನಗಳ ನಂತರ ಇಂದು ವಿನಯ ಸಾಳಕರನ ಭಟ್ಟ... ದುಃಖಾಂತ ಸಿನೇಮದ ಹೀರೋನ ಹಾಗೆ ಗದ್ಗದಿತ ಧ್ವನಿಯಲ್ಲಿ ನನ್ನನ್ನು ಬೈಯ್ದು, ಶಪಿಸಿ ಅವನು ಹೊರಟು ಹೋದ ಮಾತಿಗೆ ಆರು ತಿಂಗಳು ಕಳೆದುಹೋಗಿತ್ತು.

'ನಿನ್ನನ್ನ ದೇವಿಯ ಹಾಗೆ ಪೂಜಿಸಿದ್ದೆ ಲಿಲಿ, ಎಷ್ಟೋ ಜನ್ಮಗಳಿಂದ ನನ್ನ ಅಂತರಾತ್ಮ ಹುಡುಕುತ್ತಿದ್ದ ವ್ಯಕ್ತಿ ನೀನೇ ಅಂತ ನಂಬಿದ್ದೆ. ನಿನ್ನ ಬಿಟ್ಟು ನನಗೆ ಜೀವನವೇ ಇಲ್ಲ ಅಂತ ತಿಳಿದಿದ್ದೆ.' – ವಿನಯ ಕೆಂಪುಕಣ್ಣು ಮಾಡಿಕೊಂಡು ಹೇಳಿದ್ದ. 'ನೀನು ನನ್ನ ಹೃದಯ ಹೊಸಕಿ ಹಾಕಿದಿ. ನನ್ನ ಕನಸುಗಳನ್ನ ಮಣ್ಣು ಮುಕ್ಕಿಸಿದೆ. ನನ್ನ ಜೀವನಕ್ಕೆ ಬೆಂಕಿ ಹಚ್ಚಿದಿ...

– ನಾನು ಸುಮ್ಮನೇ ಇದ್ದೆ. ವಿನಯ ಹೇಳುತ್ತಿದ್ದುದರಲ್ಲಿ ಸತ್ಯಾಂಶ ಇತ್ತೇನೋ, ಎಷ್ಟು ಸಲ ಅವನು ನನ್ನ ಕಾಲ ಬಳಿ ಕೂತು ನನ್ನ ಪಾದಗಳನ್ನು ಚುಂಬಿಸಿದ್ದುಂಟು. 'ನೀನು ನನ್ನ ಸರ್ವಸ್ವ' ಅಂದಿದ್ದುಂಟು, ಕಾಲೇಜು ಬಿಟ್ಟೊಡನೆ ದಿನಾ ಮನೆಯಲ್ಲಿ ಎರಡು ಮಕ್ಕಳ ಕೂಡ ದಾರಿ ಕಾಯುವ ಹೆಂಡತಿಯ ಕಡೆ ಹೋಗುವುದು ಬಿಟ್ಟು ಸೀದಾ ನನ್ನ ಕಡೆ ಬರುತ್ತಿದ್ದುದುಂಟು. ಎಲ್ಲ ಸರಿಯಾಗೇ ನಡೆದಿತ್ತು. ಇನ್ನೂ ಸ್ವಲ್ಪ ದಿನ ಹಾಗೇ ನಡೆದಿದ್ದರೆ ಅವನ ಮಡಿವಂತಿಕೆಯ ವಿಚಾರಗಳನ್ನೆಲ್ಲ ಅವನ ಓದಿ–ಓದಿ ಬೊಕ್ಕವಾಗತೊಡಗಿರುವ ಆ ತಲೆಯಿಂದ ಹೊರಗೆ ಹಾಕಿ ಅವನನ್ನು ದಾರಿಗೆ ತರುವುದು ನನಗೆ ಶಕ್ಯವಾಗಲೂ ಬಹುದಿತ್ತು. ಆದರೆ ಅಷ್ಟರಲ್ಲೇ, ವಿನಯನೇ ಹೇಳುವ ಹಾಗೆ, ನಾನು ಅವನ ಹೃದಯ ಹೊಸಕಿ ಹಾಕಿದ್ದೆ.

ಕಾರಣ–ಡಾಕ್ಟರ್ ಗೋವಿಂದಮೂರ್ತಿಯೊಂದಿಗಿನ ನನ್ನ ಸ್ನೇಹದ ಬಗ್ಗೆ ನಾನು ಅವನಿಗೆ ಏನೂ ಹೇಳಿರಲಿಲ್ಲ ಎಂಬುದು.

– ವಿನಯನನ್ನು ಮೋಸಗೊಳಿಸಲು ನಾನೆಂದೂ ಉದ್ದೇಶಿಸಿರಲಿಲ್ಲ. ಆದರೂ ಅವನಿಗೆ ನಾನು ಯಾರ ಬಗ್ಗೆಯೂ ಹೇಳಿರಲಿಲ್ಲವೇಕೆ?

ವಿನಯ್ ಅಥೆಲೋನಂತಹ ಕಟ್ಟಾಪ್ರೇಮಿ, ಪ್ರೀತಿ, ಆತ್ಮ, ಜನ್ಮಾಂತರದ ನಂಟು ಇತ್ಯಾದಿ ಬಗ್ಗೆ, ದೇಹಗಳ ನಶ್ವರತೆಯ ಹಾಗೂ ಭಾವನೆಗಳ ಶಾಶ್ವತತೆಯ ಬಗ್ಗೆ ಅವನು ಲೆಕ್ಚರ್ ಕೊಡುವಾಗೆಲ್ಲ ನನಗಿದು ಚೆನ್ನಾಗಿ ಗೊತ್ತಾಗಿತ್ತು. ಮಾತಿನಿಂದ, ಕೇವಲ
ಮಾತಿನಿಂದ, ಅದೂ ಸಹಾ ಯಾವಾಗಲೂ ಒಂದೂವರೆ ಘೂಟು ದೂರವೇ ಕೂತು ಆಡುವ ಮಾತಿನಿಂದ ಅವನಿಗೆ ನನ್ನನ್ನು ಮುಗಿಲಲ್ಲಿ ತೇಲಿಸಬಲ್ಲ ಸಾಮರ್ಥ್ಯವಿತ್ತು. ಅಂಥ ವಿನಯನನ್ನು ಸುಮ್ಮನೆ ಕಳೆದುಕೊಳ್ಳುವುದೆ? ಗೋವಿಂದಮೂರ್ತಿಯಂಥ ಛಿ, materialistic ಮನುಷ್ಯನ ಬಗ್ಗೆ ಹೇಳುವುದೆ?

'ಆಯಿತು, ನಾ ಇನ್ನ ಹೋಗ್ತಿನಿ. ಛಲೋ ಪಾಠ ಕಲಿಸಿದೆ. ನಿನ್ನಿಂದ ನನ್ನ ಜೀವನಕ್ಕೆ ಆದ ಈ ಆಘಾತ ನಾ ಸಾಯೋತನಕಾ ನನ್ನ ಕೊಲ್ಲ ತಾನೇ ಇರತದ ಅನ್ನೋದು ಮರೀಬ್ಯಾಡ. ನಂದೇ ತಪ್ಪು. ನಾನೇ ಸರ್ವಸ್ವ ಅಂತ ನಂಬಿದ ಹೆಂಡತೀ ಬಿಟ್ಟು ನಿನ್ನ ಬೆನ್ನು ಹತ್ತಿದೆ. ದೇವರು ಛಲೋ ಶಿಕ್ಷಾ ಕೊಟ್ಟ.'– ಇಷ್ಟಂದು ದಾಪುಗಾಲು ಹಾಕುತ್ತ ಹೊರಟು

ಹೋಗಿದ್ದ ವಿನಯ– ಅವನೇ ಸರ್ವಸ್ವವೆಂದು ತಿಳಿದಿದ್ದ ಹೆಂಡತಿಯ ಕಡೆ – 'ನೀನೇ ಸರ್ವಸ್ವ'ವೆಂದು ಹೇಳುವಾಗ ಮರೆತಿದ್ದ ಹೆಂಡತಿಯ ಕಡೆ.

ಇಂದು ಎಷ್ಟು ದಿನಗಳ ನಂತರ ಭೆಟ್ಟಿಯಾದ. 'ಲಿಲಿ, ನಿನ್ನ ಮರೆಯೂದು ಆಗಲಿಲ್ಲ ನನಗ. ನಾ ಜೀವನದಾಗ ಒಮ್ಮೆಯ ಪ್ರೀತಿ ಮಾಡಿದೆ. ಅದು ನಿನ್ನನ್ನ, ನೀ ಹೇಗೆಯೇ ಇರು – ಅದು ಬದಲಾಗುವುದಿಲ್ಲ' ಅಂದ. ಇದೇ ಖರೆ ಪ್ರೀತಿಯ ಲಕ್ಷಣ
– ಅಂತ ವಿವರಣೆ ಸಹ ಕೊಟ್ಟ.

ವಿನಯನಿಂದ ಉಪಯೋಗವಾದೀತು ಅನ್ನಿಸುತ್ತಿದೆ....

೧೬ ಅಗಸ್ಟ್, ೧೯೫೮.

ಮಧ್ಯಾಹ್ನ ಇಂದು ಎಷ್ಟು ಆರಾಮು ನಿದ್ದೆ ಹತ್ತಿತ್ತು. ಎಷ್ಟೋ ದಿನಗಳಿಂದ ಮಧ್ಯಾಹ್ನ ಮಲಗಿರಲಿಲ್ಲ. ಇವತ್ತು ಸತ್ತಂತೆ ನಿದ್ದೆ ಮಾಡಿದೆ. ಆಫೀಸಿನ ಚಿಂತೆಯಿಲ್ಲ. ಅಕೌಂಟಿನ ಚಿಂತೆಯಿಲ್ಲ, ಮತ್ತು ಹ್ಞಾ, ಮುಖ್ಯವಾಗಿ ಆ ಗಡ್ಡದ ಬಾಸ್‌ನ ಚಿಂತೆಯಿಲ್ಲ.

ನಾನು ಕ್ಷಮೆ ಕೇಳುತ್ತೀನಿ. ಅವನು ಹೇಳಿದ ಹಾಗೆ ಕೇಳುತ್ತೀನಿ– ಅಂತ ತಿಳಿದಿದ್ದ – ಸಾಬ. 'ಲ್ಲಿ ನೋಡು ಲಿಲಿ, ನಿನ್ನನ್ನ ಕೆಲಸದಿಂದ ಡಿಸ್‌ಮಿಸ್ ಮಾಡಿದ ಆರ್ಡರ್ ಬಂದಿದೆ– ಜನರಲ್ ಮ್ಯಾನೇಜರ್‌ರಿಂದ' – ಅಂದ, ನನ್ನನ್ನೇ ನೋಡುತ್ತ.

ನನಗೆ ಗೊತ್ತಿರಲಿಲ್ಲವೆ ಅದರ ಇತಿಹಾಸ? ಯಾರು ನನ್ನ ಬೇಜವಾಬ್ದಾರಿಯ ಬಗ್ಗೆ, ನಡತೆಯ ಬಗ್ಗೆ ದೂರು ಕೊಟ್ಟಿದ್ದರೆಂದು. ಯಾಕೆ ಕೊಟ್ಟಿದ್ದರೆಂದು ಎಲ್ಲ ಪುಷ್ಪಾ ಕುಲಕರ್ಣಿ ಹೇಳಿದ್ದಳು. ಈ ಬಾಸ್‌ನ ಪಿ. ಎ. ಅಲ್ಲವೆ ಆಕೆ.

'ವಿಚಾರ ಮಾಡು ಲಿಲಿ, ನಿನ್ನ ಕೆಲಸ ಉಳಿಸಿಕೊಡ್ತೀನಿ ಬೇಕಾದರ. ಅಲ್ಲಾಕೆ ಕಸಮ್' ನನಗೆ ಬೇಕಾಗಿರಲಿಲ್ಲ. ಈ ಬಾಸ್‌ನ ಟಿ. ಬಿ. ಹೆಂಡತಿ ಊರಿಗೆ ಹೋದಾಗಲೆಲ್ಲ ಅವನ ಹಾಸಿಗೆಯ ಸಂಗಾತಿಯಾಗುವುದು, ಅದೂ ಸಹ ಅದರಿಂದ ಏನೂ ಉಪಯೋಗವಾಗದೇ ಇರುವಾಗ, ಬರೇ ಈ ನೌಕರಿಯ ಸಲುವಾಗಿ ಅವನ ಕುರುಚಲು ಗಡ್ಡ – ಅವನ 'ಅಲ್ಲಾಕೆ ಕಸಮ್' ಸಹಿಸುವುದು ನನಗೆ ಬೇಕಾಗಿರಲಿಲ್ಲ.

ಮನೆಗೆ ಬಂದಾಗ ಮೈ–ಮನಸ್ಸು ಭಾರ–ಭಾರ. ಗಾಢ ನಿದ್ದೆ ಬಂತು....ಕನಸಿನಲ್ಲಿ ಯಾರೋ ನನ್ನನ್ನು ಗಟ್ಟಿಯಾಗಿ ಎದೆಗೊತ್ತಿಕೊಂಡ ಹಾಗೆ ; 'ನಾ ಇದ್ದೀನಿ ನಿನ್ನ ಕೂಡ. ಎಂದೂ ನಿನ್ನ ಕೈಬಿಡೋದಿಲ್ಲ. ನಿನಗೆ ಬೇಕಾದ್ದೆಲ್ಲ ಕೊಡ್ತೀನಿ. ಹ್ಞಾ ಮಗು ಕೂಡ. ಎಷ್ಟು ಬೇಕು ಹೇಳು? ಒಂದು? ನಾಲ್ಕು?' – ಅಂದ ಹಾಗೆ.

ಯಾರದು ಆ ಬಿಗಿಯಾದ ಅಪ್ಪುಗೆ? ಆ ಬೀಸಾದ ತೋಳುಗಳು?

–ಎಷ್ಟೊತ್ತು ಕಂಡೆನೋ ಇದೇ ಕನಸನ್ನ! ನನ್ನ ಸುತ್ತಲೆಲ್ಲ ಸಣ್ಣ–ಸಣ್ಣ ಮಕ್ಕಳು. ಎಷ್ಟೊಂದು ಮುದ್ದಾಗಿದ್ದ ಮಕ್ಕಳು....ಎಲ್ಲ ನನ್ನವೇ. ಎಲ್ಲ ನನ್ನವೇ. ಅವುಗಳ ಮಧ್ಯೆ ಆ ಮಕ್ಕಳನ್ನು ನನಗೆ ಕೊಟ್ಟ ಆ ಅಗಲ ಎದೆಯ ಗಂಡಸು–
–ಯಾರು?
ಫಕ್ಕನೆ ಎಚ್ಚರವಾಗಿತ್ತು.

೨೦ ಅಗಸ್ಟ್, ೧೯೫೮.

ಛಿ, ವಿನಯ ಸಾಳಕರ ತೀರ ಹೇಡಿ. ತೀರ ನಿರುಪಯೋಗಿ, ಅವನ ಫಿಲೊಸೊಫಿ, ಅವನ ಪ್ಲೇಟೋನಿಕ್ ಪ್ರೀತಿ, ಅವನ ವಾದ–

-bogus.

ಎಷ್ಟು ಆಸೆಹೊತ್ತು ಹೋಗಿದ್ದೆ ಅವನ ಕಡೆ! ನನ್ನ ಮೇಲಿನ ತನ್ನ ಪ್ರೀತಿಯ ಬಗ್ಗೆ ಇಷ್ಟೆಲ್ಲ ಮಾತಾಡುತ್ತಾನೆ. ನನಗೊಂದು ಸಣ್ಣ ಉಪಕಾರ ಮಾಡಲಿಕ್ಕಾಗಲಿಲ್ಲ ಅವನಿಂದ ಹೇಗೆ ಬೆಚ್ಚಿ ಬಿದ್ದ ನನ್ನ ಮಾತು ಕೇಳಿ ಹಾವು ಮೆಟ್ಟಿದವರ ಹಾಗೆ!

'ಛೇ ಲಿಲಿ, ಇಂಥಾ ವಿಚಾರ ಕನಸಿನ್ಯಾಗೂ ತರಬ್ಯಾಡ. ನಂದು–ನಿಂದು ಆತ್ಮದ ಸಂಬಂಧ. ದೈಹಿಕ ಮೋಹಕ್ಕೊಳಗಾಗಿ ನಾವು ನಮ್ಮ ಆತ್ಮದ ಸಂಬಂಧ ಹದಗೆಡಿಸಿಕೋಬಾರದು. ದೇಹದ ವ್ಯಾಮೋಹ ಕ್ಷಣಿಕ. ಆ ಕ್ಷಣಿಕ ವ್ಯಾಮೋಹದ

ಸಲುವಾಗಿ ಶಾಶ್ವತವಾದದ್ದನ್ನ ನಾವು ಅಪವಿತ್ರಗೊಳಿಸಬಾರದು....' ಅಂತೆಲ್ಲ ಲೆಕ್ಚರ್ ಕೊಟ್ಟ.

ವಿನಯ್ ನನ್ನನ್ನೆಂದಿಗೂ ಅರ್ಥಮಾಡಿಕೊಳ್ಳಲಾರ....ಎಂದಿಗೂ ಎಂದಿಗೂ ಶಕ್ಯವಿಲ್ಲ.... 'ದೇವರು ನಮ್ಮಿಬ್ಬರನ್ನ ಈ ಜನ್ಮದಾಗ ಯಾಕೋ ಕೂಡಿಸಲಿಲ್ಲ ಲಿಲಿ. ಬಹುಶಃ ದೂರ ಇದ್ದು, ದುಃಖ ಅನುಭವಿಸಿ, ಇನ್ನೂ ಹೆಚ್ಚು ಗಟ್ಟಿ ಆಗಲಿ ನಮ್ಮ ಪ್ರೀತಿ ಅಂತ ಅವನ ಉದ್ದೇಶ ಇದ್ದಿರಬೇಕು. ನಾ ಅವನ ಇಚ್ಛಾದ ವಿರುದ್ಧ ಹೋಗೂದಿಲ್ಲ. ನಾ ದೂರನೇ ಇರ್ತಿನಿ. ನಮ್ಮ ಪ್ಲೇಟೋನಿಕ್ ಪ್ರೀತಿ ಹಿಂಗ, ಉಳೀಲಿ. ಬೆಳೀಲಿ. ಮುಂದಿನ ಜನ್ಮದಾಗ ಮಾತ್ರ...'

– ಇವನ ಮುಂದಿನ ಜನ್ಮವನ್ನ, ಇವನ ಪ್ಲೇಟೋನಿಕ್ ಪ್ರೀತಿಯನ್ನ, ಇವನ ಪ್ಲೇಟೋನನ್ನ, ಇವನನ್ನ ಸಾಲಾಗಿ ನಿಲ್ಲಿಸಿ ಶಂಕರಗೌಡರ ಜೋಡುನಳಿಯ ಬಂದೂಕಿನಿಂದ ಶೂಟ್ ಮಾಡಬೇಕು. ಸುಟ್ಟು ಬಿಡಬೇಕು. ಛಿ....

೨೪ ಅಗಸ್ಟ್, ೧೯೫೬

ಸಂಜೆ ಐದು ಗಂಟೆ.

ಎಲ್ಲ ಸಿದ್ಧವಾಗಿದೆ. ನನ್ನ ಬಟ್ಟೆಗಳು, ಪುಸ್ತಕಗಳನ್ನು ತುಂಬಿಕೊಂಡ ಸೂಟ್‌ಕೇಸ್: ಕೋಣೆಯ ಬಾಡಿಗೆ, ಹಾಲಿನವನ ಲೆಕ್ಕ, ಮುನ್ನಿಗೆ ಕೊನೆಯ ಬಾರಿ ಚಾಕ್‌ಲೇಟ್ – ಎಲ್ಲ ಕೊಟ್ಟಾಗಿದೆ. ಹೊರಗುಳಿದಿದ್ದು ಈ ಡೈರಿ ಒಂದೇ.

– ಮುಂಜಾನೆ ಬಾಗಿಲಲ್ಲಿ ನಿಂತಿದ್ದಾಗ ಸ್ಪೀಡಿನಿಂದ ಬಂದ ಶಂಕರಗೌಡ ಇಂಪಾಲಾ ಗಕ್ಕನೆ ನಿಂತಿತ್ತು.'

'ಲೀಲಾ....'

–ನಾನು ಸುಮ್ಮನೆ ಇದ್ದೆ.

'ಲೀಲಾ, ನಿನ್ನ ಪತ್ರ ಮುಟ್ಟಿತು'.

ಆಗಲೂ ನಾನು ಸುಮ್ಮನೆ ಇದ್ದೆ.

'ಸ್ವಲ್ಪ ಮಾರ್ಕೆಟಿನೊಳಗ ಕೆಲಸದ: ಹೋಗಿ ಮುಗಿಸಿಕೊಂಡು ಬರೀನಿ ಸಂಜೀ ಐದು ಘಂಟೆ ಸುಮಾರಿಗೆ, ತಯಾರಾಗಿರು, ಹೋಗೋಣಂತ.'

–ಸರಳ.

ಕಾರು ಬಂದಷ್ಟೆ ವೇಗದಿಂದ ತಿರುಗಿ ಹೋಗಿತ್ತು.

–ನನಗೆ ಗೊತ್ತಿತ್ತು.

ಎಂದೂ ಯಾತಕ್ಕೂ ಯಾರಿಗೂ ಇಲ್ಲವೆಂದವರೇ ಅಲ್ಲ ಆತ.

– ನನ್ನ ಮೈ ಗಾಳಿಯಲ್ಲಿ ತೇಲುವಷ್ಟು ಹಗುರ. ಕಣ್ಣ ತುಂಬ ಮೊನ್ನೆ ಮಧ್ಯಾಹ್ನ ಕಂಡ ಕನಸು.

ಓ, ಹಾರ್ನ್....

**ಲೇಖಕರ ಪರಿಚಯ**: ಡಾ. ವೀಣಾ ಶಾಂತೇಶ್ವರ ಡಾ. ವೀಣಾ ಶಾಂತೇಶ್ವರ (೧೯೪೫) ಧಾರವಾಡ ಇವರ ಹುಟ್ಟೂರು. ಕನ್ನಡದಲ್ಲಿ ಸ್ತ್ರೀವಾದಿ ಹಿನ್ನೆಲೆಯ ಬೆಳವಣಿಗೆಗೆ ನಾಂದಿ ಹಾಡಿದವರು. ಡಾ. ವೀಣಾ ಶಾಂತೇಶ್ವರ ಹೆಣ್ಣಿನ ಒಳನೋಟಗಳನ್ನು, ಅದರ ತವಕ ತಲ್ಲಣಗಳನ್ನು ಉತ್ಕಟವಾಗಿ ಅಭಿವ್ಯಕ್ತಿಸಿದ ಇವರು, ಕನ್ನಡದ ಮುಖ್ಯ ಲೇಖಕಿಯರಲ್ಲಿ ಒಬ್ಬರು. ಆ ತನಕ ಕನ್ನಡದಲ್ಲಿ ಕಾಣಿಸದ ನಾಯಕಿಯರನ್ನು ತಮ್ಮ ಬರಹಗಳಲ್ಲಿ ಕಾಣಿಸಿದ ಇವರ ಪ್ರಮುಖ ಕೃತಿಗಳೆಂದರೆ, ಮುಳ್ಳುಗಳು, ಕೊನೆಯದಾರಿ ಮತ್ತು ಬಿಡುಗಡೆ ಕಥಾ ಸಂಕಲನಗಳು, ಶೋಷಣೆ, ಗಂಡಸರು ಕಾದಂಬರಿಗಳು, 'ಭಿನ್ನ' ಅನುವಾದಿತ ಕಾದಂಬರಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಅನುಪಮಾ ಪ್ರಶಸ್ತಿಗಳು ಇವರಿಗೆ ಸಂದಿವೆ.

**ಪ್ರಶ್ನೆಗಳು:**

೧. ಲಿಲಿಯ ಪಾತ್ರವನ್ನು ಪರಿಚಯಿಸಿ.

೨. ಲಿಲಿಯ ಶೋಷಣೆ ಎಂತಹದು?

೩. ಆಧುನಿಕ, ವಿದ್ಯಾವಂತ, ದುಡಿಯುವ ಮಹಿಳೆಯರ ಬದುಕು ಕತೆಯಲ್ಲಿ ಹೇಗೆ ಅನಾವರಣಗೊಂಡಿದೆ?

೪. ಲಿಲಿಯ ತಾಯ್ತನದ ಹಂಬಲ ಹೇಗೆ ವ್ಯಕ್ತವಾಗಿದೆ?

# ೩. ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?

**–ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಆಶಯ:** ಮೂಕ ಪ್ರಾಣಿಗಳಿಗೂ ನಮ್ಮಂತೆ ಮನಸ್ಸಿರುತ್ತದೆ. ಅವುಗಳೂ ನಮ್ಮಂತೆ ಆಲೋಚಿಸುತ್ತವೆ. ಮನುಷ್ಯನ ವಾಕ್ ಶಕ್ತಿಯನ್ನೊಂದನ್ನು ಹೊರತುಪಡಿಸಿ ಇನ್ನಾವ ಅಂಶದಲ್ಲಿಯೂ ಅವು ಮನುಷ್ಯರಿಗಿಂತ ಕಡಿಮೆಯೇನಲ್ಲ. ಪ್ರತಿರೋಧಕ್ಕೆ ಮೂಲವಾಗಿರುವ ಮಾತನಾಡುವ ಶಕ್ತಿಯೊಂದು ಇಲ್ಲದಿರುವುದೇ ಈ ಪ್ರಾಣಿಗಳ ಬಹುಮುಖ್ಯ ಕೊರತೆಯಾಗಿದೆ. ಅವುಗಳಿಂದ ಮಾತಿನ ಪ್ರಹಾರ ಬರದೇ ಇರುವ ಕಾರಣವೇ ಮನುಷ್ಯ ಧೈರ್ಯವಾಗಿ ಅವುಗಳ ಮುಂದೆ ತನ್ನೆಲ್ಲಾ ಬೈಗುಳಗಳನ್ನು ಹರಿಯಬಿಡುತ್ತಾನೆ. ಒಮ್ಮೊಮ್ಮೆ ಮನುಷ್ಯನ ಈ ವಾಚಾಳಿತನವನ್ನು ಕಂಡೇ ಅವು ಮೂಕವಾಗಿರುವುದೇನೋ ಎಂಬ ಸಂದೇಹವೂ ಉಂಟಾಗುತ್ತದೆ. ಅಲ್ಲವೇ?

ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು. ನಮ್ಮ ರಾಜರಿಗೆ ಮಹಿಷಾಸುರಮರ್ದಿನಿ ದೇವರು. ನಾವೆಲ್ಲ ಎಮ್ಮೆಯ ಹಾಲಿನಿಂದಲೇ ಬೆಳೆದವರು. ಎಮ್ಮೆ ಹೀಗೆ ನಮಗೆ ದೇವರಾದುದರಿಂದಲೇ ನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಎಮ್ಮೆ ಪ್ರಾಬಲ್ಯ ಹೆಚ್ಚು.

ಇದು ನಮ್ಮ ಮನೆಯ ಮಾತು. ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ. ಎಮ್ಮೆಯಿಲ್ಲದ ಕಾಲ ನಮ್ಮಲ್ಲಿ ಇಲ್ಲವೇ ಇಲ್ಲ. ಮನೆಯ ಯಜಮಾನರ ವಂಶವನ್ನೂ, ಹಿರಿಯರನ್ನೂ ಮೂರುತಲೆ, ನಾಲ್ಕುತಲೆಗಳಿಂದ ಗುರುತಿಸುವಂತೆ ನಮ್ಮ ಮನೆಯ ಎಮ್ಮೆಯ ಮೂಲವನ್ನೂ ನಾಲ್ಕುತಲೆಗಳಿಂದ ಗುರುತಿಸಬಹುದು. ಇದು ಹಿರೇಗೌಡ್ನಹಳ್ಳಿ ಎಮ್ಮೆ. ಅದರ ಮೂರನೆಯ ಕರುಸಣ್ಣ ಎಮ್ಮೆ. ಅದರ ಎರಡನೆಯ ಕರು ಕಡಸು. ಸಣ್ಣೆಮ್ಮೆಯ ಮೊದಲನೆಯ ಕರು ಈಗಾಗಲೇ ಎರಡು ಕರು ಹಾಕಿದೆ. ಹೀಗೆ ನಮ್ಮ ಮನೆಯ ಎಮ್ಮೆಯ ವಂಶವೃಕ್ಷ ರಾಜಮಹಾರಾಜ ವಂಶವೃಕ್ಷಗಳಿಗಿಂತ ಹೆಚ್ಚು ಸ್ಪಷ್ಟವೂ, ಶುದ್ಧವೂ, ನೇರವೂ ಆಗಿದೆ. ಸಣ್ಣ ಎಮ್ಮೆಯ ಸಾಧು ಸ್ವಭಾವವನ್ನೂ ಅಂದವಾದ ಕೋಡುಗಳನ್ನೂ ಅಷ್ಟು ಸಣ್ಣ ಕೆಚ್ಚಲಿಗೆ ಅಷ್ಟೊಂದು ಹಾಲನ್ನೂ ನೋಡಿ ಅನೇಕರು ಅದರ ಅಪ್ಪ ಅಮ್ಮ, ತಳಿಯಾವುದೆಂದು ಪದೇಪದೇ ವಿಚಾರಿಸಿಕೊಂಡು ಹೋಗುತ್ತಾರೆ. ಈ ಕಾರಣಗಳಿಗಾಗಿ ನಮ್ಮ ಎಮ್ಮೆಯ ವಂಶವೃಕ್ಷವನ್ನಿಡುವುದು ನಮಗೆ ಅವಶ್ಯಕ.

ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಳಿದೆ. ನಮ್ಮ ಮನೆಯಲ್ಲಿ ಯಾವಾಗಲೂ ಎಮ್ಮೆಗಳು ಇದ್ದೇ ಇರುತ್ತವೆ. ಆದರೆ ಈ ಎಲ್ಲಾ ಎಮ್ಮೆಗಳೂ ಹಿರೇಗೌಡ್ನಹಳ್ಳಿಯ ದೊಡ್ಡ ಎಮ್ಮೆಯ ತಳಿಗಳೇ ಎಂದು ನಮ್ಮ ಹಿರಿಯರು ಹಠದಿಂದ ವಾದಿಸುತ್ತಾರೆ. ಹಿರೇಗೌಡ್ನಹಳ್ಳಿಯ ಆ ದೊಡ್ಡ ಎಮ್ಮೆಗೆ ಈಗಾಗಲೇ ಮೂವತ್ತು ನಲ್ವತ್ತು ವರ್ಷಗಳಾಗಿರಬೇಕು. ಆದರೆ ಅದರ ತಳಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿರುವುದರಿಂದ ಯಾವುದರ ಅಪ್ಪ, ಅಜ್ಜ ಯಾರು ಎಂದು ಗುರುತಿಸುವುದು ಅಸಾಧ್ಯವಾಗುತ್ತಿದೆ. ಆದರೆ ಇಷ್ಟು ಖಂಡಿತ. ನಮಗೆ ಗಾಳಿ, ನೀರು, ನದಿ, ಮರ, ಕೆರೆ, ಹೂವು, ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ. ಜನ ಬರಬಹುದು; ಜನ ಹೋಗಬಹುದು; ಜನ ಹುಟ್ಟಬಹುದು; ಜನ ಸಾಯಬಹುದು; ರಾಜ ಬದಲಾಯಿಸಬಹುದು; ರಾಜ್ಯದಲ್ಲಿ ಕ್ರಾಂತಿಯಾಗಬಹುದು. ಆದರೆ ನಮ್ಮ ಕೊಟ್ಟಿಗೆಯಲ್ಲಿ ಮಾತ್ರ ಎಮ್ಮೆ ನಿತ್ಯ; ಪುರಾತನ; ಅಚಲ.

ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದರೆ ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು ಪ್ರಕೃತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಅದನ್ನು ಅನುಸರಿಸಿದರು. ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ; ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಸುಮ್ಮನೆ ಅನುಸರಿಸಬೇಕು. ಮಹಾತ್ಮಾ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಲಿಲ್ಲ. "ಎಮ್ಮೆಗೋ ಜಾತಿಗೆ ಸೇರಿದುದಲ್ಲ, ಇದರ ಬೆಳವಣಿಗೆಯಿಂದ ಭಾರತದಲ್ಲಿ ಗೋವುಗಳ ಪ್ರಾಬಲ್ಯ ಕಡಿಮೆಯಾಗಿದೆ. ಸಾಧ್ಯವಾದಷ್ಟು ಬೇಗ ಎಮ್ಮೆಗಳನ್ನು ಇಲ್ಲದಂತೆ ಮಾಡಬೇಕು. ಇದರ ಹಾಲು ಜನಕ್ಕೆ ಆರೋಗ್ಯವಲ್ಲ. ಹಸುವಿನ ಹಾಲಿನಲ್ಲಿರುವ ತ್ರಾಣ, ಪುಷ್ಟಿ ಎಮ್ಮೆಯ ಹಾಲಿನಲ್ಲಿ ಇಲ್ಲ. ಆದುದರಿಂದ ಎಮ್ಮೆಗಳನ್ನು ಇಲ್ಲದಂತೆ ಮಾಡಿ ಒಳ್ಳೆಯಜಾತಿಯ ಗೋವುಗಳನ್ನು ವೃದ್ಧಿಪಡಿಸುವುದೇ ಗೋಸೇವೆ" ಎಂದು ಮಹಾತ್ಮಾ ಗಾಂಧಿಯವರು ಸಾರಿ ಸಾರಿ ಹೇಳಿದ್ದಾರೆ. ನಮ್ಮ ಮನೆಯ ಎಮ್ಮೆಯ ಮುಖವನ್ನು ನೋಡಿದರೆ ಅದು ನನ್ನನ್ನು ನೋಡಿ ಕನಿಕರದಿಂದ "ಪಾಪ, ಋಷಿಗಳಿಗೆ ಪ್ರಕೃತಿ ಅರ್ಥವಾಗಲಿಲ್ಲ, ಹಾಗೆಯೇ ಗಾಂಧಿಗೂ ನಾವು ಅರ್ಥವಾಗಿಲ್ಲ, ನಮ್ಮನ್ನು ಇಲ್ಲದಂತೆ

ಮಾಡಬೇಕಂತೆ, ಹೇಗೆ ಮಾಡುತ್ತೀರಿ? ಬೆಟ್ಟಗಳನ್ನು ಇಲ್ಲದಂತೆ ಮಾಡುತ್ತೀರಾ? ನದಿಗಳನ್ನೂ, ಕಾಡುಗಳನ್ನೂ ಇಲ್ಲದಂತೆ ಮಾಡುತ್ತೀರಾ? ಪಾಪ, ಗಾಂಧಿಗೆ ಏನು ಗೊತ್ತು?" ಎಂದು ಹೇಳುವಂತೆ ತೋರುತ್ತದೆ. ಗಾಂಧಿಯವರ ತತ್ವವನ್ನು ಜ್ಞಾಪಕವಿಟ್ಟುಕೊಂಡಿರುವ ನಾನು ಆ ಎಮ್ಮೆಯ ಮುಂದೆ ಹೋದಾಗ ನಮ್ಮ ಮನಸ್ಸಿನಲ್ಲಿರುವುದನ್ನು ಅದು ತಿಳಿದಿರುವಂತೆ "ನನಗೆ ಎಲ್ಲಾ ಗೊತ್ತು" ಎಂಬುದಾಗಿ ತಲೆಯಲ್ಲಾಡಿಸುತ್ತದೆ. ಗಾಂಧಿಯವರ ತತ್ವವನ್ನು ತಿಳಿದುದೇ ನನ್ನ ತಪ್ಪು ಎಂಬ ಭಾವನನ್ನಲ್ಲಿ ಮೂಡಿ ನಾನು ಈ ಎಮ್ಮೆಗೆ ಅಪರಾಧಿ ಎಂದು ಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಜನಗಳಂತೆಯೇ ನಮ್ಮ ದೇಶದ ರಾಸುಗಳೂ. ಈಗಾಗಲೇ ಪುಷ್ಟರಾದ ಜನ ನಮ್ಮಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಎಲ್ಲರೂ ಗುಜ್ಜಾರಿಗಳೇ, ವಾಮನರೇ, ಇನ್ನು ಕೆಲವು ಕಾಲ ಕಳೆದರೆ ಇವರು ಮನುಷ್ಯರೋ ಎಂಬುದನ್ನು ಕುರಿತು ನೋಡಬೇಕಾಗುತ್ತದೆ. ಹೊಟ್ಟೆ ತುಂಬ ಆಹಾರವಿಲ್ಲದವನು ಬೆಳೆಯುವುದು ಹೇಗೆ? ಜನಕ್ಕೆ ಹೊಟ್ಟೆಗಿಲ್ಲದೆ ತಿರುಗುವಾಗ ದನಕ್ಕೆ ಏನು ಸಿಕ್ಕೀತು? ನಮ್ಮ ಹಸುಗಳು ಆಡು ಕುರಿಗಳಂತೆ ಆಗುತ್ತಿವೆ. ಆಹಾರ ನಿಪುಣರ ಸಲಹೆ ಪ್ರಕಾರ ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿದಿನವೂ ಹತ್ತು ಔನ್ಸ್ ಹಾಲನ್ನಾದರೂ ಕುಡಿಯಬೇಕಂತೆ. ಇಲ್ಲದಿದ್ದರೆ ನಮ್ಮ ಆರೋಗ್ಯ ಸರಿಯಾಗಿರುವುದಿಲ್ಲವಂತೆ. ಹಾಲು ಇರಲಿ, ಈ ನಲವತ್ತು ಕೋಟಿ ಜನಕ್ಕೆ ನಿತ್ಯಾ ಹತ್ತು ಔನ್ಸು ಗಂಜಲ ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ. ಎಮ್ಮೆ ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುತ್ತಾರೆ. ವಿಶ್ವಾಮಿತ್ರ ಕಾರುಣ್ಯ, ಸೇಡು, ಛಲ, ಮನುಷ್ಯತ್ವ, ಮಾನ, ರಸಿಕತೆಗಳ ಪ್ರತಿಬಿಂಬ. ವಸಿಷ್ಠನಂತೆ ಅವನು ಬರಿಯ ಒಣಕಾಷ್ಠವಲ್ಲ. ಅವನು ಅಂತಹ ಕರುಣಾಮೂರ್ತಿಯಾದುದರಿಂದಲೇ ತಾಯಿತಂದೆಗಳಿಬ್ಬರಿಗೂ ಬೇಡವಾದ ಶುನಶ್ಶೇಫನನ್ನು ಯಜ್ಞಬಲಿಯಿಂದ ಉಳಿಸಿದನು. ಅವನು ಕರುಣಾಮೂರ್ತಿಯಾದುದರಿಂದಲೇ ವಸಿಷ್ಠನ ಮತ್ತು ಅವನ ಮಕ್ಕಳ ಕ್ರೋಧಕ್ಕೆ ತುತ್ತಾಗಿ ಚಂಡಾಲನಾಗೆಂದು ಶಪಿಸಲ್ಪಟ್ಟ ತ್ರಿಶಂಕುವಿನಿಂದ ಯಜ್ಞಮಾಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು. ಹೀಗೆ ಸಂಪ್ರದಾಯಗಳಿಗೆಲ್ಲಾ ವಿರೋಧವಾಗಿ ಕ್ರಾಂತಿಯನ್ನೆಬ್ಬಿಸಿದ ವಿಶ್ವಾಮಿತ್ರನ ಶಿಷ್ಯ ತ್ರಿಶಂಕುವಿಗೆ, ಈ ಸಂಪ್ರದಾಯ ಶರಣನಾದ ಇಂದ್ರ, ತನ್ನ ಸಂಸ್ಥಾನದಲ್ಲಿ ಸ್ಥಳ ಕೊಡಲಿಲ್ಲ. ತ್ರಿಶಂಕು ತಲೆಕೆಳಗಾಗಿ ಭೋ ಎಂದು ಕೂಗುತ್ತಾ ಭೂಮಿಗೆ ಬಿದ್ದನು. ಆ ಆರ್ತನಾದವನ್ನು ಕೇಳಿ ಕರುಣಾಮಯನಾದ ವಿಶ್ವಾಮಿತ್ರ ಅವನಿಗೆ ಒಂದು 'ಪಾಕಿಸ್ಥಾನ'ವನ್ನೇ ನಿರ್ಮಿಸಿದನು. ಹೊಸಜಗತ್ತನ್ನೇ ಸೃಷ್ಟಿಮಾಡಿದನು. ತೆಂಗಿನ ಮರಕ್ಕೆ ಬದಲು ಈಚಲು ಮರವನ್ನು ಸೃಷ್ಟಿಸಿದನು. ಹಸುವಿಗೆ ಬದಲು ಎಮ್ಮೆಯನ್ನು ಸೃಷ್ಟಿಸಿದನು. ವಿಶ್ವಾಮಿತ್ರ ಮಾಡಿದುದೇ ಸರಿ ಎಂಬಂತೆ ತೆಂಗಿನ ಮರದಿಂದಲೂ ಹೆಂಡವನ್ನೇ ತೆಗೆಯುತ್ತಿದ್ದಾರೆ. ವಿಶ್ವಾಮಿತ್ರ ಎಮ್ಮೆಯನ್ನು ಸೃಷ್ಟಿಸಲು ತನ್ನಲ್ಲಿದ್ದ ನಂದಿನೀಧೇನುವನ್ನು ವಿಶ್ವಾಮಿತ್ರನಿಗೆ ಕೊಡಲಿಲ್ಲ. ವಿಶ್ವಾಮಿತ್ರ ಕೋಪದಿಂದ ಹಸುವಿಗಿಂತ ಹೆಚ್ಚುಹಾಲು ಕೊಡುವ ಎಮ್ಮೆಯನ್ನೇ ಸೃಷ್ಟಿಸಿದನು. ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು. ಆದುದರಿಂದಲೇ ಇಲ್ಲಿ ಎಮ್ಮೆಗಳು ಹೆಚ್ಚು. ಈ ದೇಶಕ್ಕೂ ಎಮ್ಮೆಯ ದೇಶವೆಂದು ಹೆಸರು.

ನಮ್ಮಲ್ಲಿ ಸ್ವಲ್ಪ ಬುದ್ಧಿ ಮಂಕಾಗಿರುವವರನ್ನು 'ಎಮ್ಮೆಯ ಹಾಲು ಕುಡಿದವನು' ಎಂದು ಹಾಸ್ಯ ಮಾಡುತ್ತಾರೆ. ಹಾಲು ಬೆಳ್ಳಗಿದೆಯೋ ಕಪ್ಪಾಗಿದೆಯೋ ಎಂಬುದನ್ನು ನಮ್ಮ ದೇಶದ ಅನೇಕ ಹಳ್ಳಿಗಳವರು ಕಾಣರು. ಹಾಲು ಹಸುವಿನಿಂದ ಬರುತ್ತದೆ ಎಂಬುದೇ ಅನೇಕರಿಗೆ ಗೊತ್ತಿಲ್ಲ. ನಮ್ಮೂರಿನಿಂದ ಕೊಡಗಿಗೆ ಒಂದು ಸಲ ಬಸ್‌ನಲ್ಲಿ ಹೋಗುತ್ತಿದ್ದೆ. ಬಸ್ಸಿನ ಪ್ರಯಾಣಿಕರ ಪೈಕಿ ಒಬ್ಬ ಹೆಂಗಸು ಒಂದು ಚಿಕ್ಕಮಗುವನ್ನು ಎತ್ತಿಕೊಂಡು ಕುಳಿತಿದ್ದಳು. ಮಗು ಸಾಯುವಂತೆ ಇತ್ತು. ಹತ್ತುಹದಿನೈದು ದಿನಗಳಿಂದ ಜ್ವರ ಬರುತ್ತಿದೆ ಎಂದು ಆಕೆ ಮತ್ತೊಬ್ಬರೊಂದಿಗೆ ಹೇಳುತ್ತಿದ್ದಳು. ಮಧ್ಯಾಹ್ನ ಒಂದು ಗಂಟೆಯ ಉರಿಬಿಸಿಲಿನಲ್ಲಿ ಬಸ್ಸು ಒಂದು ಹಳ್ಳಿಯ ಮುಂದೆ ನಿಂತಿತು. ತಾಯಿ ಎತ್ತಿ ಕೊಂಡಿದ್ದ ಮಗು ಮೆತ್ತಗೆ ಸಣ್ಣ ದನಿಯಲ್ಲಿ ಅಳಲು ಪ್ರಾರಂಭಿಸಿತು. ಅದರ ಗಂಟಲಿನಿಂದ ಧ್ವನಿ ಹೊರಡುವುದೇ ಕಷ್ಟವಾಗಿತ್ತು. ತಾಯಿ ಸ್ವಲ್ಪ ಹಾಲು ಕುಡಿಸಬೇಕು ಎಂದು ಕೊಂಡು ಮೇಲೆ ಇಟ್ಟಿದ್ದ ಬುಟ್ಟಿಯನ್ನು ಕೆಳಕ್ಕೆ ತೆಗೆಸಿಕೊಂಡಳು. ಬುಟ್ಟಿಯಲ್ಲಿ ಒಂದು ಸೀಸೆಯಲ್ಲಿ ಇಟ್ಟಿದ್ದ ಹಾಲು ಚೆಲ್ಲಿ ಬುಟ್ಟಿಯ ಬಟ್ಟೆನೆನೆದಿದ್ದಿತು. ಹಾಲು ಇರಲಿಲ್ಲ. ಮಗು ಹಸಿವಿನಿಂದ ಸಾಯುವಂತೆ ಅರಚುತ್ತಾ ಕೈಕಾಲು ಬಡಿಯುತ್ತಿದ್ದಿತು. ನಮಗೆಲ್ಲಾ ಅದು ಹಾಲಿಲ್ಲದಿದ್ದರೆ ಸಾಯುವುದೆಂದು ಖಂಡಿತವಾಗಿದ್ದಿತು. ಆ ಹಳ್ಳಿಯಲ್ಲಿ ಮೂವತ್ತು ಮನೆಗಳಿವೆ. ನಾವೆಲ್ಲಾ ಇಳಿದು ಊರಿನೊಳಕ್ಕೆ ಹೋದೆವು. ಮೂವತ್ತು ಮನೆಗಳನ್ನೂ ವಿಚಾರಿಸಿದೆವು. ಸೇರಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿದೆವು. ಆದರೆ ಹಾಲು ಸಿಕ್ಕಲಿಲ್ಲ. ಒಂದು ಮನೆಯಲ್ಲಿಯೂ ಕರೆಯುವ ಹಸುವಾಗಲಿ ಎಮ್ಮೆಯಾಗಲಿ ಇರಲಿಲ್ಲ. ಹಳ್ಳಿಗರು ತಿಂಗಳಿಗೆ ಒಂದು ದಿನವೂ ಮಜ್ಜಿಗೆ ಕುಡಿಯುತ್ತಿರಲಿಲ್ಲ.

ಇಂತಹ ದೇಶದಲ್ಲಿ –"ಎಮ್ಮೆಯ ಹಾಲು ಕುಡಿದರೆ ಬುದ್ಧಿಮಂದ, ಹಸುವಿನ ಹಾಲು ಕುಡಿ"–ಎಂದು ಹೇಳುವುದು ಹೊಟ್ಟೆಗೆ ಅನ್ನ ಒದಗಿಸಲು ಚೈತನ್ಯವಿಲ್ಲದವನ ಮಗುವಿಗೆ "ಶಕ್ತಿ ಬರುವುದಕ್ಕಾಗಿ ಗ್ಲೂಕೋಸ್, ಓವಲ್ಟೀನ್ ಸೇವಿಸು"

ಎಂಬಂತೆ. ವಸಿಷ್ಠ ಶ್ರೀಮಂತ (ಅರಿಸ್ಟೋಕ್ರಾಟ್) ಪಂಗಡಕ್ಕೆ ಸೇರಿದವನು. ಆತನ ಗೋವು ನಂದಿನೀಧೇನು ಯಜ್ಞಕ್ಕೆ ಹಾಲನ್ನೂ ಘೃತವನ್ನೂ ಒದಗಿಸುವುದು. ದೇವತಾರಾಧನೆಗೆ ಅಮೃತವನ್ನು ಒದಗಿಸುವುದು. ಆದರೆ ಅದರ ಹಾಲು ಎಲ್ಲರಿಗೂ ಸಾಲದು; ಗೋವಿನ ಹಾಲು ಅತಿ ಸಾತ್ವಿಕ, ವಸಿಷ್ಠ ಋಷಿಗಳಂತೆಯೇ, ಮೇನಕೆಯ ನರ್ತನವನ್ನು ನೋಡಿ ಮುಗ್ಧನಾಗಿ ಇಂದ್ರಿಯಗಳ ಮೇಲಿನ ಹಿಡಿತವನ್ನು ಸಡಿಲಿಸಿ ಆಕೆಯೊಂದಿಗೆ ಹತ್ತು ವರ್ಷ ವಿಲಾಸಿಯಾಗಿ, ನೀನು ಇಲ್ಲಿ ಬಂದುದು ನೆನ್ನೆ ಅಲ್ಲವೇ ಎಂದು ಆಕೆಯನ್ನು ಕೇಳಿದ ರಸಿಕತೆ, ಕಾವು ರಾಜಸ ಗುಣಗಳುಳ್ಳ ರಾಜರ್ಷಿಯ ಸೃಷ್ಟಿ ಎಮ್ಮೆಯ ಹಾಲು. ವಸಿಷ್ಠನ ಎದುರಿಗೆ ನೂರು ಮೇನಕೆಯರು ನೂರು ಭಾವಭಂಗಿಗಳಲ್ಲಿ ನೂರು ವರುಷ ಕುಣಿದಿದ್ದರೂ ಆ ಕಾಷ್ಠ ಚಿಗುರುತ್ತಿರಲಿಲ್ಲ. ಆದರೇ ಮನುಷ್ಯನೇ ಆಗಿದ್ದ ವಿಶ್ವಾಮಿತ್ರನು ಮೇನಕೆಗೆ ಮನಸೋತನು. ಅದೇ ರಾಜಸಗುಣ. ಈ ಕಲಿಯುಗದಲ್ಲಿ ಬೇಕಾದುದು ಶುದ್ಧ ಸಾತ್ವಿಕವಲ್ಲ. ಅದು ಅತಿಬಿಳುಪು. ಶುದ್ಧತಾಮಸವೂ ಅಲ್ಲ. ಅದು ಅತಿ ಕಪ್ಪು. ಬೇಕಾದುದು ಕೆಂಪು ರಾಜಸಗುಣ. ಕಲಿಯುಗದಲ್ಲಿ ಧರ್ಮಕ್ಕೆ ಮೂರು ಕಾಲು ಇಲ್ಲವೆಂಬಂತೆ, ಸಾತ್ವಿಕ ಗುಣಕ್ಕೆ ಸ್ಥಾನವೇ ಇಲ್ಲ. ಅದು ರಸ. ಆದರೆ ತಾಮಸ ಗುಣ ಬೇಕಾಗಿಲ್ಲ; ಅದು ವಿರಸ. ಬೇಕಾದುದು ಸಮರಸ. ಅದೇ ರಾಜಸ. ಕಾಫಿ ಈ ರಾಜಸಗುಣದ ಗುರುತು. ಅದು ಕೃತಯುಗದ ಅಮೃತದಂತಹ ಸಾತ್ವಿಕವಸ್ತುವೂ ಅಲ್ಲ, ಕಲಿಯುಗದ ಕಳ್ಳುಸಾರಾಯಿಯಂತಹ ತಾಮಸವಸ್ತುವೂ ಅಲ್ಲ. ಕಲಿಯುಗದ ನಾಗರಿಕತೆಯ ಶಿಖರ ಕಾಫಿ. ಸ್ವಭಾವದಿಂದ ಋಷಿಯಾದ ವಿಶ್ವಾಮಿತ್ರನಿಗೆ ಈ ರಹಸ್ಯ ಭವಿಷ್ಯ ತಿಳಿಯಿತು. ಆತ ರಾಜಸ ಕಾಫಿಗೆ ಅನುಗುಣವಾದ ರಾಜಸ ಎಮ್ಮೆಗಳನ್ನು ಸೃಷ್ಟಿ ಮಾಡಿದ. ಎಮ್ಮೆಯ ಹಾಲು ಸೇರದ ಕಾಫಿ ಕಾಫಿಯೇ ಅಲ್ಲ; ಸ್ವರ್ಗಲೋಕದಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಬಂದು ಎಲ್ಲೆಲ್ಲೂ ಪಾನನಿರೋಧಕ ಕಾನೂನು ಜಾರಿಯಾಯಿತಷ್ಟೆ. ಅಮೃತವನ್ನೆಲ್ಲಾ ಉಗ್ರಾಣಗಳಲ್ಲಿ ಹಾಕಿ ಸೀಲು ಮಾಡಿಬಿಟ್ಟರು. ಅಮೃತ ಪಾನದಿಂದ ಮತ್ತರಾಗುವುದರಲ್ಲಿ ನಿರತರಾಗುತ್ತಿದ್ದ ಇಂದ್ರಾದಿಗಳು ಸಹ ಗುಟ್ಟಿನಲ್ಲಿ ಎಮ್ಮೆಯ ಹಾಲನ್ನು ಕಾಫಿ ಮಾಡಿ ಕೊಂಡು ಕುಡಿದು ಸ್ವಲ್ಪ ತುಷ್ಟರಾದರಂತೆ.

ಇಂತಹ ಪೂರ್ಣಪುರುಷ ವಿಶ್ವಾಮಿತ್ರನಿಂದ ಪ್ರತಿ ಜಗತ್ತಾಗಿ ಸೃಷ್ಟಿಯಾದುದರಿಂದಲೇ ಎಮ್ಮೆ ಮೂಲ ಜಗತ್ತಿನ ಹಸುವಿಗಿಂತ ಹೆಚ್ಚು ಬಲವಾಗಿದೆ. ಹೆಚ್ಚು ಒರಟಾಗಿದೆ. ಹೆಚ್ಚು ಕಪ್ಪಾಗಿದೆ; ಹೆಚ್ಚು ದಪ್ಪನಾಗಿದೆ. ಎಮ್ಮೆಯಲ್ಲಿ ಹಾಲೂ ಹೆಚ್ಚು. ಬೆಣ್ಣೆಯೂ ಹೆಚ್ಚು. ಇಂತಹ ಪ್ರಾಣಿಯ ಹಾಲನ್ನು ತೆಗೆದುಕೊಳ್ಳುವವರಿಗೆ ಬುದ್ಧಿಮಂಕು ಎಂದು ಹೇಳುವವರ ಬುದ್ಧಿಗೆ ಏನು ಹೇಳೋಣ? ನಮ್ಮ ಮೈಸೂರಿನವರ ಬುದ್ಧಿ ಮಂಕೆ? ಇವರನ್ನು ನೋಡಿದ ಕೂಡಲೇ ಇವರು ಎಮ್ಮೆಯ ಹಾಲನ್ನು ಕುಡಿದವರೆಂಬುದು ಗೊತ್ತಾಗುವುದಿಲ್ಲವೆ? ಎಮ್ಮೆಯ ಹಾಲನ್ನು ಕುಡಿಯುವವರ ಬುದ್ಧಿ ಇರಲಿ. ಸ್ವತಃ ಎಮ್ಮೆಯೇ ಬಹು ಚುರುಕಾದ ತೀಕ್ಷ್ಣ ಬುದ್ಧಿಯ ಪ್ರಾಣಿ. ಎಮ್ಮೆಯನ್ನು ಅನುಸರಿಸಿಕೊಂಡು ಅದರ ಜೊತೆಯಲ್ಲಿ ಓಡಾಡುತ್ತಿರುವವರಿಗೆ ಇದು ಗೊತ್ತಾಗುವುದೇ ಹೊರತು ಎಲ್ಲಿಯೋ ದೂರದಿಂದ ಅದರ ಕಪ್ಪು ಮೈಯನ್ನು ನೋಡುವವರಿಗೆ ಖಂಡಿತ ಗೊತ್ತಾಗುವುದಿಲ್ಲ. ಬುದ್ಧಿಯ ವಿಷಯ ಒಂದೇ ಅಲ್ಲ. ಎಮ್ಮೆಗೆ ಮಾತು ಸಹ ತಿಳಿಯುವುದು. ಒಂದು ಉದಾಹರಣೆ ಕೇಳಿ.

ನಮ್ಮ ಮನೆಯ ಎಮ್ಮೆ–ಇದು ಸಾಧಾರಣವಾಗಿ ಕರು ಹಾಕಬೇಕಾದರೆ ನಿಂತುಕೊಂಡೇ ಕರುವನ್ನು ಎಸೆದು ಬಿಡುತ್ತಿದ್ದಿತು. ಅಂತಹ ಒರಟು ಪ್ರಾಣಿ! ಹೊಟ್ಟೆಯಿಂದ ಹೊರಕ್ಕೆ ಬರುವಾಗಲೇ ಅಂತಹ ಒದೆತದೊಂದಿಗೆ ರಭಸದಿಂದ ಭೂಮಿಗೆ ಬಿದ್ದ ಹೊಸ ಎಳೆಗರು ಪಾಪ, ಚೇತರಿಸಿಕೊಳ್ಳುವುದಕ್ಕೇ ಎರಡು ಮೂರು ಗಂಟೆ ಬೇಕಾಗುತ್ತಿದ್ದಿತು. ಪ್ರಪಂಚ ಏನೂ ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ. ತಾಯಿ ತಂದೆ ಅಣ್ಣ ತಮ್ಮ ಹೆಂಡತಿ ಅಪ್ಪ ಮಗ ಎಲ್ಲರೂ ಒಬ್ಬರನ್ನೊಬ್ಬರು ಒದೆಯುತ್ತಾರೆ, ಬಡಿಯುತ್ತಾರೆ. ಜಗತ್ತಿಗೆ ಬರುವುದು ಸುಖಕ್ಕಲ್ಲ ಎಂಬುದು ಆ ಬಡಪಾಯಿ ಎಳೆಗರುವಿಗೆ ಜಗತ್ತಿಗೆ ಬರುವಾಗಲೇ ಗೊತ್ತಾಗುತ್ತದೆ. ಹೋಗು, ನಿನ್ನ ಪಾಪಗಳಿಗೆ ಅಲ್ಲಿ ಅನುಭವಿಸು ಎಂದು ತನ್ನನ್ನು ತಂದು ಹೊರಕ್ಕೆ ದೂಡಿದಂತಾಗಿ ಕರು ಭೂಮಿಯ ಮೇಲೆ ಎರಡು ಗಂಟೆ ಬಿದ್ದಿದ್ದು ಮುಂದಿನ ಕಷ್ಟಗಳಿಗೆ ಸಿದ್ಧವಾಗುತ್ತದೆ. ಹೀಗೆ ಎಮ್ಮೆ ಎರಡು ಮೂರು ಸಲ ಕರುವನ್ನು ಎಸೆದುದನ್ನು ನೋಡಿ ನನ್ನ ಆಳು ತೂರ "ಮುಂದಿನ ಸಲ ಕರ ಎಸೆಯೋದಕ್ಕೆ ಬಿಡಕೂಡದು. ಗೋಣಿಚೀಲ ಹಿಡಿದು ಕೊಂಡು ಕರ ಆತುಕೋ ಬೇಕು" ಎಂದ. ಎಮ್ಮೆ ಮುಂದಿನ ಸಲ ಗಬ್ಬವಾಗಿ ಈಯುವ ಕಾಲವೂ ಬಂದಿತು.

ಆ ಬೆಳಗ್ಗೆ ತೂರ ನನ್ನೊಂದಿಗೆ "ಇವತ್ತು ಸಾಯಂಕಾಲ ಎಮ್ಮೆ ಕರ ಹಾಕುತ್ತೆ" ಎಂದ. ಆ ವಿಷಯ ಅವನಿಗೆ ಚೆನ್ನಾಗಿ ಅನುಭವ. ಈ ವಿಚಾರಗಳು ಇವನಿಗೆ ಇಷ್ಟು ಖಂಡಿತವಾಗಿ ಹೇಗೆ ಗೊತ್ತಾಗುವುದೆಂದು ನಾನು ಅನೇಕ ಬಾರಿ ಆಶ್ಚರ್ಯ ಪಟ್ಟಿದ್ದೇನೆ. ತೂರ ಎಮ್ಮೆಗೆ ಕೇಳಿಸುವಂತೆ "ಇರಲಿ, ನಿನಗೆ ಮಾಡುತ್ತೇವೆ, ಕರ ಎಸೀತೀಯ" ಎಂದ. ನನ್ನೊಂದಿಗೆ "ಗೋಣಿಚೀಲ ಹಿಡಿದು ಕೊಂಡು ಆತುಕೋ ಬೇಕು" ಎಂದ. ಆ ಮಾತನ್ನು ಕೇಳಿ ಎಮ್ಮೆ ಸರ್ರನೆ ಒಂದು ಸಲ ನನ್ನ ಕಡೆ ತಿರುಗಿತು. ಆ ನೋಟವನ್ನು ನೋಡಿ ನಾನು ಬೆಚ್ಚಿಬಿದ್ದೆ. ಒಬ್ಬನನ್ನು ನೀವು ಮನಸ್ಸಿನಲ್ಲಿಯೇ ಬೈದುಕೊಂಡು

ಹೋಗುತ್ತಿರುವಾಗ ಆತ ನಿಮ್ಮ ಎದುರಿಗೆ ಬಂದು ನಿಂತರೆ ಹೇಗಾಗುವುದೋ ಹಾಗೇ ಆಯಿತು. ಆ ಕ್ಷಣದಲ್ಲಿ "ಇದಕ್ಕೆ ಬುದ್ಧಿ ಇದೆ, ಮಾತೂ ತಿಳಿಯುತ್ತದೆ; ಕಿವಿಯೂ ಕೇಳಿಸುತ್ತದೆ" ಎಂಬ ಭಾವ ಉಂಟಾಯಿತು. ಇದರಿಂದ ನನ್ನ ಮನಸ್ಸಿನಲ್ಲಿ ಹೇಗೆ ಹೇಗೋ ಆಯಿತು.

ಹಿಂದೆ ಹಾಲಿವುಡ್ ಸಿನಿಮಾತಾರೆಯರು, ನೀಗ್ರೋ ಪುರುಷರನ್ನು ಪುರುಷರಾಗಿಯೇ ಪರಿಗಣಿಸದೆ ಅವರ ಎದುರಿಗೆ ಅಸ್ತವ್ಯಸ್ತವಾಗಿ ಉಡುಪುಗಳನ್ನು ಧರಿಸಿ ಅಂತಃಪುರದಲ್ಲಿ ತಿರುಗಾಡುತ್ತಿದ್ದರಂತೆ. ನೀಗ್ರೋಗಳು ನಾಗರಿಕ ಜನಾಂಗ ಎಂದು ಆದ ಮೇಲೆ ಅವರಿಗೆ ಬಹಳ ಬೇಜಾರಾಯಿತಂತೆ. ನನ್ನ ವಿಷಯವೂ ಹಾಗೆಯೇ ಆಯಿತು. ಎಮ್ಮೆಗೆ ಮಾತು ತಿಳಿಯುವುದಿಲ್ಲ ಎಂದು ಅದರ ಎದುರಿಗೆ ಮನಸ್ಸಿಗೆ ಬಂದದ್ದನ್ನು ಹರಟುತ್ತಿದ್ದ ನನಗೆ ನಮ್ಮ ಎಮ್ಮೆಯ ಆ ನೋಟವನ್ನು ನೋಡಿ ಗಾಬರಿಯಾಯಿತು. ಎಮ್ಮೆ "ಆಗಲಿ" ಎನ್ನುವಂತೆ ನನ್ನ ಕಡೆ ನೋಡಿತು. ಆ ನೋಟ ಅದರ ಮುಖದಲ್ಲಿ ಕಂಡದ್ದು ಒಂದೇ ಕ್ಷಣ. ಮರು ಕ್ಷಣ ಎಮ್ಮೆಯು ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡಿತು. ಅದರ ಕಣ್ಣಿನಲ್ಲಿ ನನಗೆ ಆ ಮೊದಲಿನ ತಿಳಿವಿನ ನೋಟ ಈಗ ಕಾಣಲಿಲ್ಲ.

ಸಾಯಂಕಾಲವಾಯಿತು. ಎಮ್ಮೆಗೆ ಪ್ರಸವ ವೇದನೆ ಪ್ರಾರಂಭವಾಗಿದೆ ಎಂದು ತೂರ ಸೂಚಿಸಿದ. ಎಮ್ಮೆ ನಿಂತುಕೊಂಡೇ ಇದ್ದಿತು. "ಇದು ಮಲಗಿಕೊಂಡು ಕರ ಹಾಕುವುದಿಲ್ಲ. ಅದೇ ಇದರ ಕೆಟ್ಟಚಾಳಿ" ಎಂದ ತೂರ. ನಾವು, ಅಂದಾಜು ಮಾಡಿ ಎಮ್ಮೆ ನಿಂತಿದ್ದ ನೇರದಿಂದ ಒಂದು ಮಾರು ಆಚೆಗೆ, ಪ್ರಾಯಶಃ ಕರುವನ್ನು ಇಲ್ಲಿಗೆ ಎಸೆಯಬಹುದು ಎಂದುಕೊಂಡು, ಗೋಣಿಚೀಲದ ಆಚೆ ಈಚೆ ಹಿಡಿದುಕೊಂಡು ನಿಂತುಕೊಂಡೆವು. ಎಮ್ಮೆ ಒಂದು ಮಾರು ಬಲಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿಕೊಂಡು ನಿಂತಿತು. ನಾವು ಸರ್ರನೆ ಚೀಲದೊಂದಿಗೆ ಅದರ ನೇರಕ್ಕೆ ಹಾರಿ ನಿಂತೆಕೊಂಡೆವು. ಎಮ್ಮೆ ಕೂಡಲೆ ಎರಡು ಮಾರು ಎಡಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿತು. ನಾವೂ ಗೋಣಿಚೀಲದೊಂದಿಗೆ ಹಾರಿದೆವು. ಎಮ್ಮೆ ನಿಮಿಷ ನಿಮಿಷಕ್ಕೂ ತಿರುಗತೊಡಗಿತು. ನಾವು ನಿಮಿಷ ನಿಮಿಷಕ್ಕೂ ಕೊಕ್ಕಿನ ಆಟದಲ್ಲಿಯಂತೆ ಹಾರತೊಡಗಿದೆವು. ಸರ್ಕಸ್ಸಿನಲ್ಲಿ ಮೇಲುಗಡೆ ಒಬ್ಬ ಆಟಗಾರ ಸಾಧನೆ ಮಾಡುತ್ತಿರುವಾಗ ಅವನ ಕೈಕಾಲು ಜಾರಿತೆಂಬ ಭಯದಿಂದ ಕೆಳಗಡೆ ಹತ್ತಾರು ಜನ ಬಂದು ಜಮಖಾನ ಹಿಡಿದುಕೊಂಡು ಅವನ ನೇರದಲ್ಲಿ ತಿರುಗುವುದನ್ನು ನೀವು ಕಂಡಿದ್ದೀರಿ. ನಮಗೂ ಎಮ್ಮೆಗೂ ಉಂಟಾದ ಸ್ಪರ್ಧೆ ಈ ಬಗೆಯದಾಯಿತು. ಬರುಬರುತ್ತಾ ಎಮ್ಮೆ ನಿಮಿಷಕ್ಕೆ ಎರಡು ಸಲ ತಿರುಗಲು ಆರಂಭಿಸಿತು. ಅದು ಈ ವಿನೋದದಲ್ಲಿ ಕರು ಹಾಕಬೇಕೆಂಬುದನ್ನೇ ಪೂರ್ಣವಾಗಿ ಮರೆತಂತೆ ತೋರಿತು. ಈ ಓಡಾಟದಲ್ಲಿ, ಎಮ್ಮೆಗಿಂತ ನಮಗೇ ಹೆಚ್ಚು ಸುಸ್ತಾಗಿ ನಮ್ಮ ಅಳ್ಳೆಗಳು ಹೊಡೆದು ಕೊಳ್ಳತೊಡಗಿದವು. ಎಮ್ಮೆ ಮಾತ್ರ ಹಿಂದಿನ ಚೇಷ್ಟೆಯ ನಗುವಿನಿಂದ ಮತ್ತೆ ನನ್ನ ಕಡೆ ನೋಡಿತು. ಇದು ಸಧ್ಯಕ್ಕೆ ಕರು ಹಾಕುವುದಿಲ್ಲ. ಇನ್ನು ಒಂದು ಗಂಟೆ ಬಿಟ್ಟು ಬರೋಣವೆಂದು ನಾನೂ, ತೂರನೂ ಚೀಲವನ್ನು ಒಂದು ಮೂಲೆಗಿಟ್ಟು ಒಳಕ್ಕೆ ಹೋದೆವು. ಒಂದು ನಿಮಿಷದೊಳಗಾಗಿ ಕೊಟ್ಟಿಗೆಯಲ್ಲಿ ದೊಪ್ಪೆಂದು ಸದ್ದಾಯಿತು. ಹೋಗಿ ನೋಡಿದರೆ ಎಮ್ಮೆ ಪದ್ಧತಿಯಂತೆ ನಿಂತುಕೊಂಡೇ ಎರಡು ಮಾರು ಆಚೆಗೆ ಕರುವನ್ನು ಎಸೆದಿತ್ತು.

ಹೀಗೆ ತನ್ನನ್ನು ಅವಮಾನ ಮಾಡಿದುದರಿಂದಲೋ ಎಂಬಂತೆ ಪ್ರತೀ ಸಲವೂ ಸರಾಗವಾಗಿ ಹಾಲು ಕೊಡುತ್ತಿದ್ದ ಎಮ್ಮೆ ಈ ಕರು ಹಾಕಿದ ಮೇಲೆ, ಹಾಲು ಕರೆಯುವುದಕ್ಕೆ ಹೋದರೆ ಒದೆಯುವುದಕ್ಕೆ ಪ್ರಾರಂಭಿಸಿತು. ಆಗ ಅದಕ್ಕೆ ತವುಡು, ಹಿಂಡಿ, ಹತ್ತಿ ಬೀಜ ಮುಂತಾದ ತಿಂಡಿಗಳನ್ನು ಕರೆಯುವ ವೇಳೆಯಲ್ಲಿ ಇಡ ತೊಡಗಿದೆವು. ತಿಂಡಿಯನ್ನು ತನ್ನ ಮುಂದೆ ಇಟ್ಟಾಗ ಎಮ್ಮೆ "ತನ್ನಿ, ನೀವೇನೋ ಪರೋಪಕಾರ ದೃಷ್ಟಿಯಿಂದಲೂ, ಗೋ ಸೇವಾ ಬುದ್ಧಿಯಿಂದಲೂ ತರುತ್ತಿಲ್ಲ. ನನ್ನ ಹಾಲು ಬೇಕಾಗಿದೆ. ಅದಕ್ಕಾಗಿ ತರುತ್ತಿದ್ದೀರಿ" ಎನ್ನುವಂತೆ ನಮ್ಮ ಕಡೆ ನೋಡುತ್ತಿದ್ದಿತು. ಬೆಳಗಿನ ಕಾಫಿ ನಮಗೆ ಹೇಗೆ ಸಕಾಲಕ್ಕೆ ಆಗಬೇಕೋ ಹಾಗೇ ಎಮ್ಮೆಗೆ ತಿಂಡಿ ಸಕಾಲಕ್ಕೆ ಆಗಬೇಕಾಗಿದ್ದಿತು. ಒಂದು ದಿವಸ ತಿಂಡಿ ಇಟ್ಟು ಹಾಲು ಕರೆಯುವುದಕ್ಕೆ ನನ್ನ ಹೆಂಡತಿ ಬರುವುದು ಬೆಳಿಗ್ಗೆ ಹತ್ತು ಗಂಟೆಯಾಯಿತು. "ಇಷ್ಟು ಹೊತ್ತು ಯಾಕೆ? ಹೊತ್ತಿಗೆ ಮುಂಚೆ ಕರೆಯುವುದಕ್ಕೇನು ಕಷ್ಟ? ಈಗ ಕೊಡುತ್ತದೆಯೇ?" ಎಂದೆ. ನನ್ನ ಹೆಂಡತಿ "ಕೊಡದೆ ಅದಕ್ಕೇನು ರೋಗ? ಹೊಟ್ಟೆ ಬಿರಿಯುವ ಹಾಗೆ ತಿಂಡಿ ತಿನ್ನುತ್ತಿಲ್ಲವೆ?" ಎಂದಳು. ಎಮ್ಮೆ ಒಂದು ಸಲ ಸರ್ರನೆ ಅವಳ ಕಡೆ ನೋಡಿತು. ಆ ನೋಟದಲ್ಲಿ ಆ ಹಿಂದಿನ ತಿಳಿವು ಕಾಣುತ್ತಿದ್ದಿತು. ಎಮ್ಮೆಯ ಭಾಷೆ ನನಗೆ ಅರ್ಥವಾಯಿತು. ನನ್ನ ಹೆಂಡತಿ ಅದರ ಮೊಲೆಯನ್ನು ಎಷ್ಟು ಹಿಂಜಿದರೂ ಎಮ್ಮೆ ಸೋರು ಬಿಡಲಿಲ್ಲ. ಬಾಂಡಲೆಯಲ್ಲಿದ್ದ ತಿಂಡಿಗಳೆಲ್ಲಾ ಮುಗಿಯಿತು. "ತಿಂಡಿ ಹೊಡೆಯುವುದಕ್ಕೆ ಇದೊಳ್ಳೆ ಅಭ್ಯಾಸ ಮಾಡಿಕೊಂಡಿತು, ಹಾಳು ಮುಂಡೇದು" ಎಂದುಕೊಂಡು ನನ್ನ ಹೆಂಡತಿ ಮತ್ತೊಂದು ಬಾಂಡಲೆ ತಿಂಡಿ ತರಲು ಒಳಕ್ಕೆ ಹೋದಳು. ಅವಳು ಒಳಗಿನಿಂದ ತಿಂಡಿ ತರುತ್ತಿರುವಾಗ ಎಮ್ಮೆ ಮತ್ತೆ ದುರದುರನೆ ನೋಡಿತು. "ತನ್ನಿ, ತನ್ನಿ, ಇಲ್ಲದಿದ್ದರೆ ನೀವು ತರುತ್ತೀರ" ಎಂಬಂತೆ ಕಣ್ಣು ಮಿಟುಕಿಸಿತು. "ಇದು ಈ ಉಪಾಯ ಮಾಡಿಕೊಳ್ಳದೆ ಸುಮ್ಮನೆ ಸಾಧುವಾಗಿ ಹಾಲು ಕೊಟ್ಟಿದ್ದರೆ ನೀವು ಹೀಗೆ ನಿತ್ಯ ಇದಕ್ಕೆ ಎರಡು ಹೊತ್ತು ತಿಂಡಿ ಇಡುತ್ತಿದ್ದಿರಾ" ಎಂದು ನಾನು ನಕ್ಕೆ. ಹೀಗೆ ಅಂದು

ಎಮ್ಮೆಗೆ ತಿಂಡಿ ಎರಡು ಸಲ ಇಡಬೇಕಾಗಿ ಬಂದುದರಿಂದ ಅಲ್ಲಿಂದ ಮುಂದೆ ನನ್ನ ಹೆಂಡತಿ ಎಮ್ಮೆಗೆ ಸಕಾಲದಲ್ಲಿ ಇಟ್ಟು ಹಾಲು ಕರೆದುಕೊಳ್ಳುತ್ತಿದ್ದಳು.

ಈ ಎಮ್ಮೆಯನ್ನು ಸಾಧಾರಣವಾಗಿ ನನ್ನ ಹೆಂಡತಿಯೇ ಕರೆಯುವ ಅಭ್ಯಾಸವಿದ್ದಿತ್ತು. ಒಂದು ಸಲ ಎಂಟು ದಿವಸ ಅವಳು ನರಸೀಪುರದ ತೇರಿಗೆ ಹೋದಳು. ನಾನೇ ತಿಂಡಿ ಕಲಸಿ ಎಮ್ಮೆಗೆ ತೆಗೆದುಕೊಂಡು ಹೊರಟೆ. ತೂರ "ಹಿಂಡಿ ಸಾಲದು. ಇನ್ನೊಂದು ಹಿಡಿರಾಗಿ ಹಿಟ್ಟುಹಾಕಿ" ಎಂದ. ನಾನು "ಸರಿ, ಸರಿ. ಜನರಿಗೆ ತಿನ್ನುವುದಕ್ಕೆ ರಾಗಿ ಇಲ್ಲ; ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗೆ ಆಯಿತು. ನಡಿ, ಸಾಕು" ಎಂದೆ. ತಿಂಡಿಯನ್ನು ತೆಗೆದುಕೊಂಡು ಹೋಗಿ ಎಮ್ಮೆಯ ಮುಂದೆ ಇಟ್ಟು ನಾನೇ ಹಾಲು ಕರೆಯಲು ಕುಳಿತೆ. ಎಮ್ಮೆ ಒಂದು ಸಲ ತಿಂಡಿ ಮೂಸಿ ನೋಡಿತು. ನಾನು ಹಾಲು ಕರೆಯಲು ಕೈಯಲ್ಲಿ ಹಿಡಿದಿದ್ದ ಪಾತ್ರೆ ಕೆಳಕ್ಕೆ ಬೀಳುವಂತೆ ಪಟಾರನೆ ಒದೆಯಿತು. ನಾನು ತೂರನಿಗೆ "ನಿನ್ನ ಮಾತು ನಿಜ. ಇದಕ್ಕೆ ರಾಗಿ ಹಸಿ ಹಿಟ್ಟಿನ ರಸ ಹಲ್ಲಿಗೆ ಇಳಿದು ಅಭ್ಯಾಸವಾಗಿದೆ. ಇನ್ನಷ್ಟು ಹಸಿ ಹಿಟ್ಟು ಹಾಕಿ ಕೊಂಡು ಇನ್ನೊಂದು ಗಳಿಗೆ ಬಿಟ್ಟುಬರೋಣ. ಎಲ್ಲಾ ಕೆಟ್ಟಭ್ಯಾಸ" ಎಂದು ಒಳಕ್ಕೆ ಬಂದೆ. ಮತ್ತೆ ತಿಂಡಿ ಸರಿ ಮಾಡಿಕೊಂಡು ಹೋಗುವುದಕ್ಕೆ ಮುಂಚೆ ತೂರ "ಅದಕ್ಕೆ ಅಮ್ನೋರು ಕರ ಬಿಟ್ಟ ಪಾಟ. ನಿಮಗೆ ಕೊಡೋಕಿಲ್ಲ. ಖಂಡಿತ ಒದೀತದೆ" ಎಂದ. ಆಗ ನಾನು ಒಂದು ಉಪಾಯವನ್ನು ಮಾಡಿದೆ. (ಇದನ್ನು ಓದುವ ವಾಚಕರು ನಗಬೇಕಾಗಿಲ್ಲ) ನನ್ನ ಹೆಂಡತಿಯ ಒಂದು ಸೀರೆಯನ್ನು ಮೈತುಂಬಾ ಹೊದೆದುಕೊಂಡು ಎಮ್ಮೆಯ ಮುಂದೆ ಕುಳಿತೆ. ಎಮ್ಮೆ ಈ ಮೋಸಕ್ಕೆ ಬಿದ್ದಿತು. ಹಾಲು ಕೊಟ್ಟಿತು. ಹೀಗೆ ನಾನು ಐದು ದಿನ ಅಭಿನವ ಸೈರಂಧ್ರಿಯಾಗಿ ರಾಗಿ ಹಿಟ್ಟು, ಹಿಂಡಿಗಳನ್ನು ಪೂರಾ ಹಾಕಿ ಹಾಲು ಕರೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಹಿಂತಿರುಗುವುದು ನಾಳೆ ಎನ್ನುವಾಗ, ನಾನು ಎಮ್ಮೆಯ ಮುಂದೆ ಹಾಲು ಕರೆಯುತ್ತಾ ಕುಳಿತಿದ್ದೆ. ತೂರ "ಹಸುವಾಗಿದ್ರೆ ವಾಸನೆ ಮೇಲೆ ಹಿಡಿದು ಒದ್ದು ಬಿಡೋದು, ಇದು ಎಮ್ಮೆ ಜಾತಿ. ದೆಯ್ಯದಂತೆ ಮುಂಡೇದು ಬುದ್ಧಿ ಇಲ್ಲ" ಎಂದ. ನಾನು ನನ್ನ ಹೆಂಡತಿಯ ದನಿಯಂತೆ ದನಿ ಮಾಡಿಕೊಂಡು "ಇದಕ್ಕೆ ಬುದ್ಧಿ ಇದೆ" ಎಂದೆ. ಎಮ್ಮೆ ಒದ್ದೇ ಬಿಟ್ಟಿತು.

ಈ ಎಮ್ಮೆಗೆ ಒಂದು ಸಲ ಕಾಲು ಜ್ವರ, ಬಾಯಿ ಜ್ವರ ಆಯಿತು. ಆಳು ತೂರ ಎಲ್ಲಾ ಹಸುಗಳನ್ನು ಬೋರೆಗೆ ಬಿಡುತ್ತಿದ್ದ. "ಎಮ್ಮೆ ಬಿಡಬೇಡ. ದನೀನ ಆಸ್ಪತ್ರೆಯಿಂದ ಔಷಧಿ ತರಿಸಿ ಹುಯ್ಯಿಸುತ್ತೇನೆ" ಎಂದೆ. ಆ ಮಾತು ಅಲ್ಲೇ ನಿಂತಿದ್ದ ಎಮ್ಮೆಗೆ ಕೇಳಿಸಿರಬೇಕು. ನಾವು ಒಳಕ್ಕೆ ಹೋದಾಗ ಎಮ್ಮೆ ಕಿತ್ತುಕೊಂಡು ಬೋರೆಗೆ ಓಡಿ ಬಿಟ್ಟಿತು. ಈ ಎಮ್ಮೆಗೆ ರಾಗಿಯ ಅಂಬಲಿ ಬಹಳ ಇಷ್ಟ. ಕಾಯಿಲೆಯಾದಾಗಲೂ ಬೇರೆ ಹುಲ್ಲು ತಿಂಡಿಗಳನ್ನು ಮುಟ್ಟದಿದ್ದರೂ ಇದು ರಾಗಿಯ ಅಂಬಲಿಯನ್ನು ಮಾತ್ರ ಯಾವಾಗಲೂ ಕುಡಿಯುತ್ತದೆ. ಇದಕ್ಕೆ ಕಾಲು ಜ್ವರ, ಬಾಯಿ ಜ್ವರವಾದಾಗ "ಇದನ್ನು ಹಿಡಿದುಕೊಂಡು ಗೊಟ್ಟ ಹಾಕಿ ಔಷಧಿ ಹೊಯ್ಯುವುದು ಕಷ್ಟ, ಅಂಬಲಿಗೆ ಸೇರಿಸಿ ಕೊಟ್ಟುಬಿಡೋಣ" ಎಂದಳು, ನನ್ನ ಹೆಂಡತಿ. ಮೊದಲನೆ ಸಲ ಹಾಗೆ ಮಾಡಿ ಎಮ್ಮೆಯ ಮುಂದೆ ಇಟ್ಟೆವು. ಅದು ಏನೂ ತಿಳಿಯದ ಪ್ರಾಣಿಯಂತೆ ಸುಮ್ಮನೆ ಅಂಬಲಿ ಕುಡಿಯಿತು. ಆ ಸಾಯಂಕಾಲ ದನದ ವೈದ್ಯರು ಮನೆಗೆ ಬಂದು ಎಮ್ಮೆ ನೋಡಿದರು. "ಇದಕ್ಕೆ ಔಷಧಿ ಹೇಗೆ ಕುಡಿಸುತ್ತೀರಿ" ಎಂದರು. ಆಳು ತೂರ "ಅಂಬಲಿ ಒಳಗೆ ಕುಡೀತದೆ" ಎಂದ. ಆ ಮಾತು ಎಮ್ಮೆಗೆ ಕೇಳಿಸಿತು. ಆ ಸಂಧ್ಯಾ ಕಾಲದಿಂದಲೇ ಅಂಬಲಿ ಕುಡಿಯುವುದನ್ನು ಬಿಟ್ಟಿತು. ಮರು ದಿನ ಬೆಳಿಗ್ಗೆ ಬಂದ ವೈದ್ಯರು" ಇದಕ್ಕೆ ಔಷಧಿ ಕುಡಿಸಲೇಬೇಕು" ಎಂದರು. ಆಗ ಎಮ್ಮೆ ಮಲಗಿದ್ದಿತು. ಆಳು ತೂರ "ಮಲಗಿರುವಾಗ ಕಾಲು ಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು" ಎಂದನು. ಎಮ್ಮೆ ಎದ್ದು ನಿಂತುಕೊಂಡಿತು. ತೂರ ಮನೆಯಲ್ಲಿರುವವರೆಗೆ ಅದು ಮಲಗುತ್ತಲೇ ಇರಲಿಲ್ಲ. ಹುಷಾರಿಲ್ಲದಿದ್ದರೂ ನಿಂತೇ ಇರುತ್ತಿದ್ದಿತು. ತೂರ ಹನ್ನೊಂದು ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದ ಮೇಲೆಯೇ ಅದು ಮಲಗುತ್ತಿದ್ದಿತು. ಅನಂತರ ತೂರ ಬೋರೆಯಿಂದ ಸಾಯಂಕಾಲ ಬಂದ ನಂತರ ಉಳಿದದನಗಳೆಲ್ಲಾ ಒಳಕ್ಕೆ ಬಂದ ಕೂಡಲೇ ಎದ್ದು ನಿಂತು ಬಿಡುತ್ತಿದ್ದಿತು.

ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ಶಕ್ತಿಯಾಗಿದೆ. ಭಗವಂತ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಎಮ್ಮೆ ಮೂಕ ಪ್ರಾಣಿಯಾದರೂ ನಮ್ಮ ಆಚರಣೆ ಮಾತುಗಳಿಗೆ ಒಂದು ವಿಧವಾದ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕ ಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರು ಯಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲವೆಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ. ಆ ಎಮ್ಮೆಯ ಹಾಲು ಕುಡಿದ ನಮ್ಮನ್ನೇ ನೋಡಿ!

**ಲೇಖಕರ ಪರಿಚಯ:** ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇವರು ೧೯೦೪ರ ಜುಲೈ ೦೪ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ತಮ್ಮ ಕೃತಿಗಳ ಮೂಲಕ ರಾಮಸ್ವಾಮಿಯವರು ಗೊರೂರನ್ನು ಕನ್ನಡದ ಓದುಗರಿಗೆ ಸವಿಸ್ತಾರವಾಗಿ ಪರಿಚಯಿಸಿದವರು. ತಂದೆ ಶ್ರೀನಿವಾಸ ಅಯ್ಯಂಗಾರ್, ತಾಯಿ ಲಕ್ಷಮ್ಮ. ಇವರ ಕಾವ್ಯನಾಮ ಸೀತಾತನಯ. ಸ್ವಾತಂತ್ರ್ಯ ಚಳುವಳಿ, ಮೈಸೂರಿನಲ್ಲಿ ಪ್ರಜಾ ಸರ್ಕಾರಕ್ಕಾಗಿ ಚಳುವಳಿ, ಕರ್ನಾಟಕ ಏಕೀಕರಣಕ್ಕಾಗಿ ಚಳುವಳಿಗಳಲ್ಲಿ ಹೋರಾಡಿ ಹರಿಜನೋದ್ಧಾರ ಹಾಗೂ ಗ್ರಾಮೋದ್ಧಾರಕ್ಕಾಗಿ ಶ್ರಮಿಸಿದ ಅಪ್ರತಿಮ ಗಾಂಧಿವಾದಿ.

ಭೂತಯ್ಯನ ಮಗ ಅಯ್ಯು, ಕೋರ್ಟಿನಲ್ಲಿ ಗೆದ್ದ ಎತ್ತು ಎಂಬ ಕಥಾಸಂಕಲನಗಳನ್ನೂ, ಹೇಮಾವತಿ, ಪುನರ್ಜನ್ಮ, ಮೆರವಣಿಗೆ, ರಾಜನರ್ತಕಿ, ಊರ್ವಶಿ ಎಂಬ ಕಾದಂಬರಿಗಳನ್ನೂ, ಭಕ್ತಿಯೋಗ, ಭಗವಾನ್ ಕೌಟಿಲ್ಯ ಎಂಬ ಅನುವಾದಿತ ಕೃತಿಗಳನ್ನೂ ಬರೆದಿದ್ದಾರೆ. ಅಲ್ಲದೆ ಹೊಸಗನ್ನಡ ಪ್ರಬಂಧ ಸಂಕಲನವನ್ನೂ ಸಂಪಾದಿಸಿದ್ದಾರೆ. ಇವರಿಗೆ ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದ ಗೌರವಪ್ರಶಸ್ತಿಗಳು. ಇವರು ೧೯೮೨ರಲ್ಲಿನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಪ್ರಶ್ನೆಗಳು:**

೧. ಪ್ರಾಣಿಗಳಿಗೂ ಮಾತು ಅರ್ಥವಾಗುತ್ತದೆ ಎಂಬುದನ್ನು ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

೨. ಎಮ್ಮೆಗೆ ಮಾತು ತಿಳಿಯುವುದೇ? ಹೇಗೆ ವಿಚಾರಮಾಡಿ.

೩. ಮೂಕಪ್ರಾಣಿಗಳಿಗೂ ಬುದ್ಧಿ ಇರುತ್ತದೆ ಎಂಬ ಗೊರೂರರ ಅಬಿಪ್ರಾಯವನ್ನು ವಿಶ್ಲೇಷಿಸಿ.

೪. ಎಮ್ಮೆ ಮತ್ತು ಗೊರೂರರ ನಡುವಿನ ಬಾಂಧವ್ಯವನ್ನು ಲೇಖಕರು ತಿಳಿಹಾಸ್ಯದಿಂದ ಚಿತ್ರಿಸಿದ ಬಗೆಯನ್ನು ತಿಳಿಸಿ.

೫. ಎಮ್ಮೆಯ ಬಗೆಗಿನ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯಗಳನ್ನು ತಿಳಿಸಿ.

೬. ಎಮ್ಮೆಯ ಸೃಷ್ಟಿಯ ಐತಿಹ್ಯವನ್ನು ಕುರಿತು ಬರೆಯಿರಿ.

೭. ಹಸುವಿನ ಹಾಲಿಗಿಂತ ಎಮ್ಮೆಯ ಹಾಲು ಹೆಚ್ಚು ಪೌಷ್ಠಿದಾಯಕ ಎಂಬುದನ್ನು ಲೇಖನದ ಹಿನ್ನೆಲೆಯಲ್ಲಿ ವಿಶದಪಡಿಸಿ.

**ಮೂರನೇ ಸೆಮಿಸ್ಟರ್ ಬಿಬಿಎ ಏವಿಯೇಷನ್**
**ಕನ್ನಡ ಭಾಷೆ ಮಾದರಿ ಪ್ರಶ್ನೆ ಪತ್ರಿಕೆ**
**ಕನ್ನಡ ಯಾನ–೨**

**ಸಮಯ: 2.30 ನಿಮಿಷ** **ಗರಿಷ್ಠ ಅಂಕಗಳು: 60**

**I ಪದ್ಯದ ಭಾವಾರ್ಥ ಬರೆಯಿರಿ:** **(1X6=6)**

ಸಿರಿ ಹೋದ ಮಱುಕವನು ನೆಲೆಗೆಟ್ಟ ಚಿಂತೆಯನು
ಪರದೇಶಮಂ ಹೊಕ್ಕ ನಾಚಿಕೆಯನಱೆಯದ
ನ್ಯರ ಮನೆಯ ತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದಳಲನು
ನೆರೆದು ಮನೆಯವರೆಯ್ದೆ ಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮಱೆತು ಪರಿಣಾಮಮಂ
ಧರಿಸುತ್ತಿಪ್ಪೆನ್ನ ಗೋಣಂಕೊಯ್ದೆ ಇನ್ನಾರ ನೋಡಿ ಮೆಱೆದಪೆನೆಂದಳು.

**II ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:** **(4X2=8)**

1) ರಾಘವಾಂಕ
2) ವಚನಗಳು
3) ರತ್ನ
4) ಡಾ.ವೀಣಾಶಾಂತೇಶ್ವರ
5) ಭಾಗೀರತಿ
6) ಗೋವಿಂದಮೂರ್ತಿ

**III ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ** **(4X4=16)**

**7)** ನಾರಾಯಣಿಯ ಪಾತ್ರ.
8) ಮುಕ್ತಾಯಕ್ಕನ ವಚನಗಳ ಆಶಯ.
9) ಸರ್ವಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪಡೆಯುವಲ್ಲಿ ಸ್ತ್ರೀಯ ನಡೆ.
10) ಅಳ್ಳೀಮರ ಸುತ್ತ ಇದ್ದ ಆಚರಣೆಗಳು.
11) ಸಾವು ಆತ್ಮೀಯವಾಗಿ ನಿರೂಪಿತವಾದ ಬಗೆ.
12) ಕೆರೆಗೆ ಬಲಿಯನ್ನು ಕೊಡಲು ಕಾರಣ

**IV ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ:** **(3X10=30)**

13) ಸಾಹಿತ್ಯದಲ್ಲಿ ವೈಚಾರಿಕತೆಯನ್ನು ಕುರಿತು ಬರೆಯಿರಿ.
14) 'ಏಡಿ ಕಚ್ಚಿದ ಕೈ' ಕಥೆಯಲ್ಲಿ ಹಳ್ಳಿಯ ಚಿತ್ರಣ ಹೇಗೆ ಅನಾವರಣಗೊಂಡಿದೆ? ವಿವರಿಸಿ.
15) ವಾಣಿ ಮತ್ತು ಇಂದುವಿನ ನಡುವೆ ಇದ್ದ ಸ್ನೇಹವನ್ನು ವಿವರಿಸಿ.
16) 'ಕೊನೆಯ ದಾರಿ' ಕಥೆಯಲ್ಲಿ ದುಡಿಯುವ ಮಹಿಳೆಯ ಶೋಷಣೆ ಮತ್ತು ತಾಯ್ತನದ ಹಂಬಲ ಹೇಗೆ ವ್ಯಕ್ತವಾಗಿದೆ? ವಿಶದಪಡಿಸಿ.
17) ಎಮ್ಮೆಗೆ ಮಾತು ತಿಳಿಯುವುದೇ ಹೇಗೆ? ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ.